ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

‘ಬೇಟಿ ಬಚಾವ್ರೋ’ ಮೇನಕಾ ಸ್ಟೈಲ್



ಸಂಪುಟ 10 ಸಂಚಿಕೆ 7 | ಫೆಬ್ರವರಿ 14, 2016 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com





ಜನಪರ ವಿಕೇಂದ್ರೀಕರಣಕ್ಕಾಗಿ ಸಿಪಿಐ(ಎಂ)ಗೆ ಮತ



ಗೇಣಿದಾರರು ಮತ್ತು
ಹೆಂಚು ಕಾರ್ಮಿಕರಿಗಾಗಿ
ಜೀವ ಸವೆಸಿದ

ಕಾ. ಅಬ್ರಹಾಂ ಕರ್ಕಡ ಇನ್ನಿಲ್ಲ







ಹೂಡಿಕೆದಾರರ ಸಮಾವೇಶ = ಭೂಕಸಿತ = ಕೈಗಾರಿಕೀಕರಣವಿಲ್ಲದ ವಿನಾಶ

ಉಬೇರ್ ವಿರುದ್ಧ ಫ್ರೆಂಚ್ ಟ್ಯಾಕ್ಸಿ ಚಾಲಕರ ಉಗ್ರ ಹೋರಾಟ

ಸೋಲಾರ್ ಕಳಂಕಿತ ಚಾಂಡಿ ತೊಲಗಲಿ

'ಪ್ರಧಾನ ಮಂತ್ರಿಗಳ ಬೆಳೆ ವಿಮಾ ಯೋಜನೆ' ರೈತರಿಗೆ ಸರಕಾರದ ಧೋರಣೆಗಳ ವೈಪರೀತ್ಯದಿಂದಲೇ ವಿಮಾರಕ್ಷಣೆ ಬೇಕಾಗಿದೆ: ಎಐಕೆಎಸ್

ಜನವರಿ 14ರಂದು 'ಪ್ರಧಾನ ಮಂತ್ರಿಗಳ ಬೆಳೆ ವಿಮಾ ಯೋಜನೆ'ಯನ್ನು ಅತ್ಯಂತ ಸಂಭ್ರಮದಿಂದ ಪ್ರಕಟಿಸಲಾಗಿದೆ. ಇದೊಂದು ಚಾರಿತ್ರಿಕ ಕ್ರಮ, ಅತಿ ಕಡಿಮೆ ಪ್ರೀಮಿಯಂನ ಅತಿ ದೊಡ್ಡ ಬೆಳೆ ವಿಮಾ ಯೋಜನೆ, ಪೂರ್ಣ ವಿಮಾ ರಕ್ಷಣೆ ನೀಡುತ್ತದೆ ಎಂದು ಪ್ರಧಾನ ಮಂತ್ರಿಗಳು ಹೇಳಿದ್ದಾರೆ.

ಆದರೆ ಇದು ಹವಾಮಾನದ ವೈಪರೀತ್ಯಗಳಿಂದೇನೋ ರೈತರಿಗೆ ಸ್ವಲ್ಪ ಮಟ್ಟಿನ ಪರಿಹಾರ ನೀಡಬಹುದು, ಆದರೆ ಸರಕಾರದ ಧೋರಣೆಗಳ ವೈಪರೀತ್ಯದಿಂದೇನೂ ರಕ್ಷಣೆ ಕೊಡುವುದಿಲ್ಲ, ರೈತರಿಗೆ ಮುಖ್ಯವಾಗಿ ಇಂತಹ ವಿಮಾ ರಕ್ಷಣೆ ಬೇಕಾಗಿದೆ ಎಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಹೇಳಿದೆ.

ಪ್ರಧಾನಿಗಳು ಹಾಗೆ ಹೇಳಿದ ದಿನವೇ ಮಹಾರಾಷ್ಟ್ರದಲ್ಲಿ 2015ರಲ್ಲಿ 3228 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ಸುದ್ದಿಯೂ ಬಂದಿದೆ. ಕರ್ನಾಟಕದಲ್ಲಿಯೂ ಜೂನ್ 2015ರ ನಂತರದ ಆರೇ ತಿಂಗಳಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ 1000 ದಾಟಿದೆ ಎಂಬ ಸುದ್ದಿಯೂ ಪ್ರಕಟವಾಗಿದೆ. ಇದಕ್ಕೆ ಕಾರಣ ಕಳೆದ ಎರಡು ದಶಕಗಳಿಗಿಂತಲೂ ಹೆಚ್ಚು ಕಾಲದಿಂದ ಬಂದ ಸರಕಾರಗಳೆಲ್ಲ ಅನುಸರಿಸುತ್ತಿರುವ, ಮೋದಿ ಸರಕಾರ ಇನ್ನಷ್ಟು ರಭಸದಿಂದ, ಮತ್ತಷ್ಟು ಕ್ರೂರವಾಗಿ ಮುಂದುವರೆಸುತ್ತಿರುವ ನವ-ಉದಾರವಾದಿ ಧೋರಣೆಗಳು ಎಂಬುದು ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ.

ಈ ಹಿನ್ನೆಲೆಯಲ್ಲಿ 'ಪೂರ್ಣ ವಿಮಾರಕ್ಷಣೆ ನೀಡುವ ಈ ಅತಿ ದೊಡ್ಡ ವಿಮಾ ಯೋಜನೆ' ರೈತರನ್ನು ಆತ್ಮಹತ್ಯೆಗಳತ್ತ ತಳ್ಳುವ ಸರಕಾರದ ಧೋರಣೆಗಳಿಂದ ಯಾವ ರಕ್ಷಣೆಯನ್ನು ಕೂಡ ಕೊಡುತ್ತಿಲ್ಲ, ರೈತರಿಗೆ ಈಗ ಹವಾಮಾನದ ವೈಪರೀತ್ಯಗಳಿಗಿಂತ ಹೆಚ್ಚಾಗಿ ಸರಕಾರದ ಧೋರಣೆಗಳ ವೈಪರೀತ್ಯದಿಂದ ವಿಮಾ ರಕ್ಷಣೆ ಬೇಕಾಗಿದೆ ಎಂದು ಅಖಿಲ ಭಾರತ ಕಿಸಾನ್ ಸಭಾ ಹೇಳಿದೆ.

ವಾಸ್ತವವಾಗಿ ಇದು ರೈತರಿಗೆ ಪೂರ್ಣ ವಿಮಾರಕ್ಷಣೆ ನೀಡುವ ಯೋಜನೆಯೂ ಅಲ್ಲ, ಅತ್ಯಂತ ಕಡಿಮೆ ಪ್ರೀಮಿಯಂನ ಯೋಜನೆಯೂ ಅಲ್ಲ, ಎಲ್ಲ ರೈತರನ್ನೂ ಒಳಗೊಳ್ಳುವ ಯೋಜನೆಯಂತೂ ಅಲ್ಲವೇ ಅಲ್ಲ.

ಈ ಯೋಜನೆಯನ್ನು ಪ್ರಕಟಿಸುವ ಮೊದಲು ಸರಕಾರ ರೈತರ ಸಂಘಟನೆಗಳು ಮತ್ತು ಈರಂಗದ ಪರಿಣಿತರೊಂದಿಗೆ ಸಮಾಲೋಚನೆಗಳನ್ನು ನಡೆಸಿತ್ತು. ಅದರಲ್ಲಿ ಗೇಣಿದಾರ ರೈತರು, ಭಾಗ ಬೆಳೆಗಾರರೂ ಸೇರಿದಂತೆ ಎಲ್ಲ ರೈತರನ್ನೂ, ಎಲ್ಲ ಬೆಳೆಗಳನ್ನೂ ಒಳಗೊಳ್ಳುವಂತಹ ರೈತರ ಆದಾಯ ಮತ್ತು ಕೈಗೆ ಬರುವ ಬೆಳೆಗಳಿಗೆ ಇರುವ ರಿಸ್ಕ್‌ಗಳನ್ನು ಗಮನಕ್ಕೆ ತಗೊಂಡ ಒಂದು ಸಾರ್ವತ್ರಿಕ ಸಮಗ್ರ ಬೆಳೆ ಮತ್ತು ಆದಾಯ ವಿಮಾಯೋಜನೆ ತರಬೇಕು ಎಂದು ಎಲ್ಲ ರೈತ ಸಂಘಟನೆಗಳು ಒಕ್ಕೊರಲಿನಿಂದ ಕೇಳಿದ್ದವು.

ಆದರೆ **ಪ್ರಧಾನ ಮಂತ್ರಿಗಳು ಮತ್ತು ಎನ್‌ಡಿಎ ಸಂಭ್ರಮಿಸುತ್ತಿರುವ ಈ ಯೋಜನೆ ಗೇಣಿದಾರರು, ಭಾಗ ಬೆಳೆಗಾರರು, ಬಹುಪಾಲು ದಲಿತರು ಮತ್ತು ಆದಿವಾಸಿಗಳನ್ನು ಕೂಡ ಹೊರಗಿಡುವಂತಹ ಯೋಜನೆಯಾಗಿಯೇ ಬರುತ್ತಿದೆ.**

ಪ್ರಧಾನಿಗಳು ಹೇಳುವಂತೆ ಇದು ನಿಜವಾಗಿಯೂ ಚಾರಿತ್ರಿಕವಾಗಬೇಕಾದರೆ ಬಡ, ಸಣ್ಣ ಮತ್ತು ಅಂಚಿನಲ್ಲಿರುವ ರೈತರು, ಗೇಣಿದಾರರು ಮತ್ತು ಭಾಗ ಬೆಳಗಾರರಿಗೆ ವಿಮೆಯ ಪ್ರೀಮಿಯಂ ಹಣವನ್ನು ಪೂರ್ಣವಾಗಿ ಸಬ್ಸಿಡಿಯಾಗಿ ಕೊಡಬೇಕು. ಮತ್ತು ಬೆಳೆ ನಷ್ಟಗಳು ಮತ್ತು ಮಾರುಕಟ್ಟೆ ಏರುಪೇರುಗಳಿಂದ ಆಗುವ ನಷ್ಟಗಳಿಂದ ರಕ್ಷಣೆ ಕೊಡುವ ಯೋಜನೆಯಾಗಿರಬೇಕು. ಆದರೆ ಅಂತಹ ಯೋಚನೆಗಳೇನೂ ಈ ಸರಕಾರಕ್ಕಿಲ್ಲ.

ಇದಲ್ಲದೆ ಈ ಬೆಳೆ ವಿಮಾ ಯೋಜನೆಯನ್ನು ಜಾರಿಗೆ ತರಲು ಪ್ರದೇಶವಾರಾಗಿ ಹನ್ನೊಂದು ಖಾಸಗಿ ವಿಮಾ ಕಂಪನಿಗಳನ್ನೇ ಆರಿಸಿಕೊಳ್ಳುವ ಅಂಶವೂ ಇದರಲ್ಲಿದೆ. ಇವು ಸರಕಾರದ ಸಬ್ಸಿಡಿಯನ್ನು ಬಳಸಿಕೊಂಡು ರೈತರಿಗೆ ಮೋಸ ಮಾಡುವ ಸಾಧ್ಯತೆಗಳು ಬಹಳವೆ. ಆದ್ದರಿಂದ **ಕೃಷಿ ವಿಮಾಯೋಜನೆಯನ್ನು ದೇಶಿ-ವಿದೇಶಿ ಖಾಸಗಿ ವಿಮಾಕಂಪನಿಗಳಿಗೆ ತೆರೆದುಕೊಡಬಾರದು ಎಂದೂ ಎಐಕೆಎಸ್ ಆಗ್ರಹಿಸಿದೆ.**

'ಸ್ವತಂತ್ರ ಭಾರತದಲ್ಲೆ ಅತಿ ಕಡಿಮೆ ಪ್ರಿಮಿಯಂ'ನ ಯೋಜನೆ ಎಂಬ ಹೆಗ್ಗಳಿಕೆಯೂ ಸರಿಯಲ್ಲ. ರೈತರು ಎಲ್ಲ ಮುಂಗಾರು ಬೆಳೆಗಳಿಗೂ 2ಶೇ. ಮತ್ತು ಹಿಂಗಾರು ಬೆಳೆಗಳಿಗೆ 1.5ಶೇ. ಪ್ರೀಮಿಯಂ ಕೊಡಬೇಕು. ವಾರ್ಷಿಕ ವಾಣಿಜ್ಯ ಬೆಳೆಗಳು ಮತ್ತು ತೋಟದ ಬೆಳೆಗಳಿಗೆ 5ಶೇ. ಪ್ರೀಮಿಯಂ ಕೊಡಬೇಕು. ಆದರೆ ಈಗಾಗಲೇ 14 ರಾಜ್ಯಗಳಲ್ಲಿ ಜಾರಿಯಲ್ಲಿರುವ ರಾಷ್ಟ್ರೀಯ ಕೃಷಿ ವಿಮಾ ಯೋಜನೆ(ಎನ್‌ಎಐಎಸ್) ಯಲ್ಲಿ ಆಹಾರಧಾನ್ಯಗಳಿಗೆ ಪ್ರೀಮಿಯಂ ದರ 1.5ಶೇ. ಇದೆ, ಇತರ ಬೆಳೆಗಳಿಗೆ, ಎಣ್ಣೆ ಬೀಜಗಳು, ತೋಟದ ಮತ್ತು ವಾಣಿಜ್ಯ ಬೆಳೆಗಳಿಗೆ ಮಾತ್ರ 3.5ಶೇ. ದ ವರೆಗೆ ಇದೆ.

ಡಾ.ಸ್ವಾಮಿನಾಥನ್ ಆಯೋಗದ ಶಿಫಾರಸಿನಂತೆ ಕನಿಷ್ಟ ಬೆಂಬಲ ಬೆಲೆಯನ್ನು ಉತ್ಪಾದನೆಯ ಖರ್ಚಿನ ಒಂದೂವರೆ ಪಟ್ಟಿನ ಮಟ್ಟದಲ್ಲಾದರೂ ನಿಗದಿಮಾಡಲು ತನಗೆ ಸಾಧ್ಯವಿಲ್ಲ ಎಂದು ಈಗೀಗ ರೈತರ ಬಗ್ಗೆ ಬಹಳವಾಗಿ ಮಾತಾಡುವ ಈ ಸರಕಾರ ಸುಪ್ರಿಂ ಕೋರ್ಟಿನ ಎದುರು ಹೇಳಿಕೊಂಡಿದೆ! ಇನ್ನೊಂದೆಡೆಯಲ್ಲಿ ಕನಿಷ್ಟ ಬೆಂಬಲ ಬೆಲೆಗಿಂತ ಹೆಚ್ಚು ಬೆಲೆ ನೀಡುವ ರಾಜ್ಯಗಳಿಂದ ಭತ್ತ ಮತ್ತು ಗೋಧಿಯನ್ನು ಖರೀದಿಸುವುದಿಲ್ಲ ಎಂದು ಬೆದರಿಸಿದೆ. ಅತ್ತ ಕೃಷಿ ಲಾಗುವಾಡುಗಳ ಬೆಲೆಗಳ ಮೇಲಿನ ನಿಯಂತ್ರಣವನ್ನು ತೆಗೆದು ಬಿಟ್ಟಿದೆ. ಸಾಲದ್ದಕ್ಕೆ ಡಬ್ಲ್ಯುಟಿಒ ದಲ್ಲಿ ಪಾಶ್ಚಿಮಾತ್ಯ ದೇಶಗಳ ವ್ಯಾಪಾರ ಉದಾರೀಕರಣಕ್ಕೆ ತಲೆಬಾಗಿ ಅವರ ಸಬ್ಸಿಡಿ ಭರಿತ ಅಗ್ಗದ ಕೃಷಿ ಉತ್ಪನ್ನಗಳನ್ನು ತಂದು ಇಲ್ಲಿರಾಶಿ ಹಾಕಿ ನಮ್ಮ ರೈತರ ಸಂಕಟವನ್ನು ಇನ್ನಷ್ಟು ಹೆಚ್ಚಿಸಲು ಅವಕಾಶ ಮಾಡಿಕೊಟ್ಟಿದೆ.

ಆದ್ದರಿಂದ ಈ 'ಚಾರಿತ್ರಿಕ' ವಿಮಾ ಯೋಜನೆ ನಮ್ಮ ರೈತರ ಸಂಕಟಗಳಿಗೆ ಏನೂ ಪರಿಹಾರ ಕೊಡುವುದಿಲ್ಲ, ನಿಜವಾದ ಪರಿಹಾರವೆಂದರೆ ಇಂತಹ ಸಂಕಟಗಳನ್ನು ಹೇರುವ ಸರಕಾರದ ಧೋರಣೆಗಳನ್ನು ಕೈಬಿಡುವುದು, ಎಂದು ಅಖಿಲ ಭಾರತ ಕಿಸಾನ್ ಸಭಾ ಹೇಳಿದೆ.

ಫೆಬ್ರುವರಿ 24: ಭೂಕಬಳಿಕೆಯ ವಿರುದ್ಧ ಪಾರ್ಲಿಮೆಂಟ್ ಚಲೋ

ಭೂಕಬಳಿಕೆ, ಸಂಪನ್ಮೂಲಗಳ ಲೂಟಿ ಮತ್ತು ಮೋದಿ ಸರಕಾರದ ರೈತ-ವಿರೋಧಿ ಧೋರಣೆಗಳ ವಿರುದ್ಧ 'ಭೂಮಿ ಅಧಿಕಾರ ಆಂದೋಲನ'ದ ಬಾವುಟದಡಿಯಲ್ಲಿ ಒಂದು ಬೃಹತ್ ಪಾರ್ಲಿಮೆಂಟ್ ಚಲೋ ನಡೆಯಲಿದೆ ಎಂದು ಅಖಿಲ ಭಾರತ ಕಿಸಾನ್ ಸಭಾದ ಕೇಂದ್ರ ಕಿಸಾನ್ ಮಂಡಳಿ ಹೇಳಿದೆ.

ಜನವರಿ 30,31ರಂದು ಸಭೆ ಸೇರಿದ ಮಂಡಳಿ ಮೋದಿ ನೇತೃತ್ವದ ಬಿಜೆಪಿ ಸರಕಾರ ರೈತಾಪಿಗಳ ಹಿತವನ್ನು ರಕ್ಷಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿರುವುದರಿಂದ ಹೋರಾಟಗಳನ್ನು ತೀವ್ರಗೊಳಿಸಲು ನಿರ್ಧರಿಸಿತು. ಕಾರ್ಮಿಕ ಸಂಘ ಮತ್ತು ಕೃಷಿ ಕಾರ್ಮಿಕರ ಸಂಘದ ಜೊತೆಗೂಡಿ ಕಾರ್ಮಿಕ ಹಕ್ಕುಗಳು, ನರೇಗ, ಆಹಾರ ಭದ್ರತೆ ಮತ್ತು ಜೀವನಾಧಾರದ ಪ್ರಶ್ನೆಗಳ ಮೇಲೆ ಸಂಯೋಜಿತ ಕಾರ್ಯಾಚರಣೆಗಳನ್ನು ನಡೆಸಲು ನಿರ್ಧರಿಸಿತು.

ಫೆಬ್ರುವರಿ ತಿಂಗಳಲ್ಲಿ ಎಲ್ಲ ರಾಜ್ಯಗಳಲ್ಲಿ ರೈತರ ಜ್ವಲಂತ ಪ್ರಶ್ನೆಗಳ ಮೇಲೆ ಮತ್ತು ಸಮಾಜವನ್ನು ಕೋಮುಆಧಾರದಲ್ಲಿ ಧ್ರುವೀಕರಿಸುವ ಆರೆಸ್ಸೆಸ್-ಬಿಜೆಪಿ ಪ್ರಯತ್ನಗಳ ವಿರುದ್ಧ ವ್ಯಾಪಕ ಪ್ರತಿಭಟನೆಗಳನ್ನು ನಡೆಸಲಾಗುವುದು.

ಅಂತರ್‌ರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಏಶ್ಯನ್ ಕಚೇರಿಯ ಹೊಣೆಯನ್ನು ಅಖಿಲಭಾರತ ಕಿಸಾನ್ ಸಭಾ, ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘ, ಎಐಕೆಎಸ್(ಅಜೋಯ್ ಭವನ) ಮತ್ತು ಬಿಕೆಎಂಯು ಜಂಟಿಯಾಗಿ ನಿರ್ವಹಿಸಲಿ ನಿರ್ಧರಿಸಲಾಗಿದೆ ಎಂದು ಕೇಂದ್ರ ಕಿಸಾನ್ ಮಂಡಳಿ ಹೇಳಿದೆ.

'ಗಣಶಕ್ತಿ'ಗೆ 50 ವರ್ಷ: ಪರ್ಯಾಯ ಪತ್ರಿಕೋದ್ಯಮದ ದಾರಿಯನ್ನು ತೋರಿದ ಪತ್ರಿಕೆ



ಪಶ್ಚಿಮ ಬಂಗಾಲದ ದೈನಿಕ 'ಗಣಶಕ್ತಿ' ಈ ಜನವರಿ 3ರಂದು 50ನೇ ವರ್ಷಕ್ಕೆ ಕಾಲಿಟ್ಟಿದೆ. ಅದರ ಸುವರ್ಣ ಮಹೋತ್ಸವದ ಆರಂಭದ ಸಂದರ್ಭದಲ್ಲಿ ಏರ್ಪಡಿಸಿದ್ದ ಒಂದು ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿಯವರು ಈ ಪತ್ರಿಕೆ ಪರ್ಯಾಯ ಪತ್ರಿಕೋದ್ಯಮದ ದಾರಿಯನ್ನು ತೋರಿದೆ, ಜನತೆ ಇದನ್ನು ತಮ್ಮದೇ ಪತ್ರಿಕೆ-ಯಾಗಿ ಅಪ್ಪಿಕೊಂಡಿದ್ದಾರೆ ಎಂದರು. ಈ ಪತ್ರಿಕೆ ಜೀವಂತವಾಗಿ ಉಳಿದಿದೆ, ಬೆಳೆಯುತ್ತಿದೆ, ಏಕೆಂದರೆ ಪಶ್ಚಿಮ ಬಂಗಾಲದಲ್ಲಿ ಸಾಮೂಹಿಕ ಜನಾಂದೋಲನ ಜೀವಂತವಾಗಿದೆ ಎಂದು ಅವರು ಹೇಳಿದರು. ಲೆನಿನ್ ಕಮ್ಯುನಿಸ್ಟ್ ಪಕ್ಷದ ಪತ್ರಿಕೆ ಸಾಮೂಹಿಕ ಪ್ರಚಾರಕ, ಸಾಮೂಹಿಕ ಚಳುವಳಿಗಾರ ಮತ್ತು ಸಾಮೂಹಿಕ ಸಂಘಟಕ ಎಂದಿರುವುದನ್ನು ಅವರು ನೆನಪಿಸಿದರು.

'ಗಣಶಕ್ತಿ' ಎಂಬುದು ಪಶ್ಚಿಮ ಬಂಗಾಲದ ದುಡಿಯುವ ವರ್ಗದ ಆಂದೋಲನದ ಪ್ರಕಟಣಾ ರಂಗದಲ್ಲಿ 1933ರಿಂದಲೇ ಜನಪ್ರಿಯವಾಗಿದ್ದ ಹೆಸರು. ಅಲ್ಲಿನ ದುಡಿಯುವ ವರ್ಗದ ಆಂದೋಲನದೊಂದಿಗೆ ಬೆಳೆದ ಈ ಹೆಸರಿನ ದೈನಿಕವಾಗಿ ಪ್ರಕಟಣೆ ಆರಂಭವಾದದ್ದು ಜನವರಿ 3, 1967ರಂದು. ಅವು ಪಶ್ಚಿಮ ಬಂಗಾಲದಲ್ಲೂ, ಮತ್ತು ದೇಶದಲ್ಲೂ ಒಂದು ಹೊಸ ರಾಜಕೀಯ ಅಧ್ಯಾಯ ಆರಂಭವಾದ ದಿನಗಳು. ರಾಷ್ಟ್ರೀಯ ಮಟ್ಟದಲ್ಲಿ ಕಮ್ಯುನಿಸ್ಟ್ ಆಂದೋಲನದಲ್ಲಿ ಬಲ ಪರಿಷ್ಕರಣವಾದ ಮತ್ತು ಎಡ-ಪಂಥವಾದೀ ಮಾರ್ಗಚ್ಯುತಿಗಳ ಅಪಾಯಗಳನ್ನು ನೀಗಿಸುವ ಪ್ರಯತ್ನಗಳು ನಡೆಯುತ್ತಿದ್ದರೆ, ಪಶ್ಚಿಮ ಬಂಗಾಲದಲ್ಲಿ ಆಹಾರ ಆಂದೋಲನ, ಭೂಮಿ ಆಂದೋಲನ, ಕಾರ್ಮಿಕರ ಆಂದೋಲನಗಳ ಜೊತೆಗೆ ಅಧ್ಯಾಪಕರ ಆಂದೋಲನ, ಇತರ ಮಧ್ಯಮ ವರ್ಗಗಳ ನೌಕರರ, ವಿದ್ಯಾರ್ಥಿ-ಯುವಜನರ, ಮಹಿಳೆಯರ- ಸಮಾಜದ ಸುಮಾರಾಗಿ ಎಲ್ಲ ವಿಭಾಗಗಳ ಆಂದೋಲನಗಳು ಕ್ರೋಡೀಕರ-ಣಗೊಂಡು ಒಂದು ಬಲಿಷ್ಟ ಎಡ-ಪ್ರಜಾಪ್ರಭುತ್ವ ಆಂದೋಲನ ಬೆಳೆದು ಬರುತ್ತಿದ್ದ ಕಾಲಾವಧಿ. ಇವೆಲ್ಲದರ ಫಲಶ್ರುತಿಯಾಗಿ ಮಾರ್ಚ್1967ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಗಳಲ್ಲಿ ಸಿಪಿಐ(ಎಂ) ನೇತೃತ್ವದ ಸಂಯುಕ್ತ ರಂಗ ಸರಕಾರ ರಚನೆಗೊಂಡ ಕಾಲಘಟ್ಟದಲ್ಲಿ ಹುಟ್ಟಿ ಬಂದ 'ಗಣಶಕ್ತಿ' ಜನತಾ ಆಂದೋಲನದ ಜೊತೆ-ಜೊತೆಯಾಗಿ ಬೆಳೆದು ಬಂತು.

ನಾಲ್ಕು ಪುಟಗಳ ಸಂಜೆ ದೈನಿಕವಾಗಿ ಸರೋಜ್ ಮುಖರ್ಜಿಯವರ ಸಂಪಾದಕತ್ವದಲ್ಲಿ ಆರಂಭವಾದ 'ಗಣಶಕ್ತಿ' ಮೇ 1,1986ರಂದು ಪೂರ್ಣ ಪ್ರಮಾಣದ ಬೆಳಗಿನ ದೈನಿಕವಾಯಿತು. ಅದು ಕೇಂದ್ರದಲ್ಲಿದ್ದ ಸರಕಾರ ಐಎಂಎಫ್-ವಿಶ್ವ ಬ್ಯಾಂಕ್ ಹೇರಿಕೆಯ ಧೋರಣೆಗಳನ್ನು ಅನುಸರಿಸಲಾರಂಭಿಸಿದ ಕಾಲಘಟ್ಟ. ಪಶ್ಚಿಮಬಂಗಾಲದಲ್ಲಿ ಎಲ್ಲ ಪ್ರತಿಗಾಮಿ ಶಕ್ತಿಗಳು ಎಡ-ಪ್ರಜಾಪ್ರಭುತ್ವ ಆಂದೋಲನದ ವಿರುದ್ಧ ಒಟ್ಟುಗೂಡುವ ಪ್ರಯತ್ನ ನಡೆಸಿದ್ದವು. ಉನ್ನತ ಸ್ಥಾನಗಳಲ್ಲಿನ ಭ್ರಷ್ಟಾಚಾರದಿಂದ ದೇಶ ತಲ್ಲಣಗೊಂಡಿತ್ತು. ಜತೆಗೆ ಪ್ರಜಾಪ್ರಭುತ್ವ-ವಿರೋಧಿ ಪ್ರವೃತ್ತಿಗಳು ಅನಾವರಣಗೊಳ್ಳುತ್ತಿದ್ದವು.

1983ರಲ್ಲಿ ಸರೋಜ್ ಮುಖರ್ಜಿಯವರ ನಿಧನದ ನಂತರ ಅನಿಲ್ ಬಿಸ್ವಾಸ್ ಸಂಪಾದಕತ್ವದಲ್ಲಿ ಈ ಸವಾಲುಗಳನ್ನು ಹೊಸ ಸ್ವರೂಪ ಪಡೆಕೊಂಡ 'ಗಣಶಕ್ತಿ' ಸಮರ್ಥವಾಗಿ ಎದುರಿಸಿ ಪ್ರಜಾಪ್ರಭುತ್ವ ಆಂದೋಲನದೊಂದಿಗೆ ಹೆಜ್ಜೆ ಹಾಕಿತು. ಮೂರು ದಶಕಗಳನ್ನು ಪೂರ್ಣಗೊಳಿಸುವ ಹೊತ್ತಿಗೆ , ಜನವರಿ 2, 1997ರಲ್ಲಿ ಜ್ಯೋತಿ ಬಸುರವರು ಪತ್ರಿಕೆಯ ಸ್ವಂತ ಕಟ್ಟಡವನ್ನು ಉದ್ಘಾಟಿಸಿದರು.

ತಂತ್ರಜ್ಞಾನದ ಬೆಳವಣಿಗೆಯೊಂದಿಗೂ ಹೆಜ್ಜೆ ಹಾಕುತ್ತ ಬಂದ 'ಗಣಶಕ್ತಿ' ಎಪ್ರಿಲ್ 1970ರಲ್ಲಿ ರೋಟರಿ ಮೆಶಿನ್ ನಲ್ಲಿ ಮುದ್ರಣ ಆರಂಭಿಸಿತು, ಸಪ್ಟಂಬರ್ 1980ರಲ್ಲಿ ಆಫ್‌ಸೆಟ್‌ನಲ್ಲಿ ಮುದ್ರಣಗೊಳ್ಳಲಾರಂಭಿಸಿತು. ನಂತರ ಬಹುವರ್ಣ ಮುದ್ರಣಕ್ಕೂ ತೆರೆದುಕೊಂಡಿತು. ನವಂಬರ್ 1988ರಲ್ಲಿ ಆನ್‌ಲೈನ್ ಇಂಗ್ಲಿಷ್ ಆವೃತ್ತಿ ಪ್ರಕಟಣೆ ಆರಂಭವಾಯಿತು. ಸಪ್ಟಂಬರ್ 1, 2004ರಿಂದ ಬಂಗಾಲಿ ದೈನಿಕದ ಇಂಟರ್ನೆಟ್ ಆವೃತ್ತಿಯೂ ಪ್ರಕಟವಾಗಲಾರಂಭಿಸಿತು.

ಈ ಎಲ್ಲ ಬೆಳವಣಿಗೆಗಳ ನಡುವೆಯೂ ಅದು ತಾನು ಎಡ-ಪ್ರಜಾಪ್ರಭುತ್ವವಾದಿ ಶಕ್ತಿಗಳ ಜಾಗೃತ ದನಿಯೆಂಬುದನ್ನು ಎಂದೂ ಮರೆಯಲಿಲ್ಲ. ಈಗ ಕೊಲ್ಕತಾವಲ್ಲದೆ ಸಿಲಿಗುರಿ ಮತ್ತು ದುರ್ಗಾಪುರ ದಿಂದಲೂ ಪ್ರತ್ಯೇಕ ಆವೃತ್ತಿಗಳಾಗಿ ಪ್ರಕಟಗೊಳ್ಳುತ್ತಿದೆ. ಉದ್ದಿಮೆ ಮತ್ತು ವ್ಯಾಪಾರ, ಕೃಷಿ, ಕಾರ್ಮಿಕ ಆಂದೋಲನದ ಚಟುವಟಿಕೆಗಳು, ಅಂತರ್‌ರಾಷ್ಟ್ರೀಯ ರಾಜಕೀಯ, ರಾಷ್ಟ್ರೀಯ ರಾಜಕೀಯ, ಕ್ರೀಡೆಗಳು, ಮಹಿಳಾ ಸಂವೇದನೆ, ಕಲೆ-ಸಂಸ್ಕೃತಿ, ಸಾಹಿತ್ಯ ಮುಂತಾದ ವಿವಿಧ ವಿಷಯಗಳ ಮೇಲೆ ವಾರದ ಬೇರೆ-ಬೇರೆ ದಿನಗಳಲ್ಲಿ ವಿಶೇಷ ಪುಟಗಳೂ ಪ್ರಕಟವಾಗುತ್ತಿವೆ. ಪಕ್ಷದ ಮುಖಂಡರಲ್ಲದೆ, ವಿವಿಧ ರಂಗಗಳ ಪ್ರತಿಷ್ಠಿತರಿಗೂ ಈ ದೈನಿಕದ ಪುಟಗಳು ತೆರೆದಿವೆ. ಹಲವು ರೀತಿಯ ಆರೋಗ್ಯಕರ ಸಂವಾದಗಳ ವೇದಿಕೆಯಾಗಿಯೂ ಇದು ಕೆಲಸ ಮಾಡುತ್ತಿದೆ.

ಈ ಐದು ದಶಕಗಳ 'ಗಣಶಕ್ತಿ'ಯ ಪ್ರಯಾಣ 'ಸುಗಮವೇನೂ ಆಗಿರಲಿಲ್ಲ. ದುಡಿಯುವ ಜನರ ದನಿಯಾಗಿ 1970ರ ದಶಕದಲ್ಲಿ ಪಶ್ಚಿಮ ಬಂಗಾಲದಲ್ಲಿ ಅರೆ-ಫ್ಯಾಸಿಸ್ಟ್ ಭಯೋತ್ಪಾದನೆಯನ್ನು ಇದೂ ಎದುರಿಸಬೇಕಾಯಿತು. 1975-77ರಲ್ಲಿ ತುರ್ತು ಪರಿಸ್ಥಿತಿಯ ಕಿರುಕುಳಗಳನ್ನೂ ಎದುರಿಸಬೇಕಾಯಿತು. ಈಗ 2011ರ ನಂತರ ಮತ್ತೆ 70ರ ದಶಕದ ಹಿಂಸಾಚಾರವನ್ನೂ ಮೀರಿದ ಹಿಂಸಾಚಾರವನ್ನು ಅದೀಗ ಸಮರ್ಥವಾಗಿ ಎದುರಿಸುತ್ತಿದೆ. ರಾಜ್ಯಾದ್ಯಂತ ವ್ಯಾಪಿಸಿರುವ 'ಗಣಶಕ್ತಿ'ಯ ಸಾವಿರಾರು ಫಲಕಗಳಲ್ಲಿ ಹಲವನ್ನು ನಾಶಪಡಿಸಲಾಗಿದೆ, ಸರಕಾರೀ ಜಾಹೀರಾತುಗಳನ್ನು ವಂಚಿಸಲಾಗುತ್ತಿದೆ. ಜತೆಗೆ ನವ-ಉದಾರವಾದಿ ಯುಗದಲ್ಲಿ ಗುತ್ತೇದಾರಿ ಪತ್ರಿಕೋದ್ಯಮದ ಸವಾಲುಗಳ ಎದುರೂ ಅದು ಧೃತಿಗೆಡದೆ ದುಡಿಯುವ ವರ್ಗಗಳ ದನಿಯಾಗಿಯೇ ಮನ್ನಡೆದಿದೆ.

ನಮ್ಮ ಟ್ವೀಟ್

@kavita_krishnan

ಮನೇಕಾ ಗಾಂಧಿಯವರ ಪ್ರಸ್ತಾವ ಡಾಕ್ಟರ್ ಬಚಾವೋ – ಮೋದಿ ಸರಕಾರದ 'ಬೇಟಿ ಬಚಾವೋ' ಘೋಷಣೆಯ ಟೊಳ್ಳುತನ ಬಯಲಾಗಿದೆ.

– *ಕವಿತಾ ಕೃಷ್ಣನ್, ಸಿಪಿಐ(ಎಂ.ಎಲ್.-ಲಿಬರೇಶನ್) ನಾಯಕಿ*

ಬಂಡವಾಳ ಹೂಡಿಕೆ ಸಮಾವೇಶ = ಭೂಕಸಿತ = ಕೈಗಾರಿಕೀಕರಣ ಇಲ್ಲದ ವಿನಾಶ

ಸಂಪಾದಕೀಯ

ಬೆಂಗಳೂರಿನಲ್ಲಿ 'ಇನ್‌ವೆಸ್ಟ್ ಕರ್ನಾಟಕ–2016' ಭರಾಟೆ ನಡೆದಿದೆ. ಪುನಃ ಲಕ್ಷಗಟ್ಟಲೆ ಕೋಟಿ ಕೋಟಿ ಬಂಡವಾಳ ಹೂಡಿಕೆ ಹಾಗೂ ಲಕ್ಷಾಂತರ ಉದ್ಯೋಗಗಳ ಕನಸು ಬಿತ್ತಲಾಗುತ್ತಿದೆ. ಹೂಡಿಕೆದಾರರ ಕಣ್ಣಿಗೆ ಬೆಂಗಳೂರಿನ 'ಟ್ರಾಫಿಕ್ ಜಾಮ್' ಬೀಳದಂತೆ ಬಸ್ಸುಗಳನ್ನು ಲಾರಿಗಳನ್ನು ನಗರದೊಳಗೆ ಬಿಡುತ್ತಿಲ್ಲ. ಪ್ರಮುಖ ರಸ್ತೆಗಳು ಚೊಕ್ಕವಾಗಿ ಕಾಣುವಂತೆ, ಪಂಚತಾರಾ ಹೊಟಲುಗಳ ಸುತ್ತ ಕಸ, ಒಳಗೆ ಜಿರಲೆಗಳು ಕಾಣದಿರುವಂತೆ ಕಟ್ಟೆಚ್ಚರ ವಹಿಸಲಾಗುತ್ತಿದೆ. ಆದರೂ ಸಮಾವೇಶ ನಡೆಯುವಾಗಲೇ ಆಫ್ರಿಕನ್ ಮಹಿಳೆಯ ಮೇಲೆ ಸಾರ್ವಜನಿಕವಾಗಿ ದೌರ್ಜನ್ಯ ನಡೆದರೂ ಅದು 'ಜನಾಂಗೀಯ ದ್ವೇಷ ಕೃತ್ಯ ಅಲ್ಲ' ಎಂದು ಗೃಹಮಂತ್ರಿಗಳು ಅಪ್ಪಣೆ ಕೊಡಿಸಿದ್ದಾರೆ. ಹೂಡಿಕೆದಾರರು ಗಾಬರಿಯಾದರೇ ಎಂದಿರಬಹುದು. ಆದರೆ ಹೂಡಿಕೆದಾರರ ಮತ್ತು ದೌರ್ಜನ್ಯಕ್ಕೆ ಒಳಗಾದವರ 'ವರ್ಣ'ದಿಂದಾಗಿಯೋ ಏನೋ ಅವರೂ ಈ ಬಗ್ಗೆ ತಲೆಕೆಡಿಸಿಕೊಂಡಂತಿಲ್ಲ. 'ಬೆಂಗಳೂರು–ಕರ್ನಾಟಕ ಬಂಡವಾಳ ಹೂಡಿಕೆಗೆ ಅತ್ಯಂತ ಪ್ರಶಸ್ತವಾದ ಜಾಗ' ಎಂದು ಯಾವಾಗಲೂ ಕೋಳಿಜಗಳದಲ್ಲಿ ತೊಡಗಿರುವ ಕೇಂದ್ರ/ರಾಜ್ಯ ಸರಕಾರಗಳ ಬಿಜೆಪಿ/ಕಾಂಗ್ರೆಸ್ ಮಂತ್ರಿಗಳು ಅಧಿಕಾರಿಗಳು ಸಮಾವೇಶದಲ್ಲಿ ಒಂದೇ ರಾಗದಲ್ಲಿ ಹಾಡಿದ್ದಾರೆ.

ಈ ಪತ್ರಿಕೆಯ ಕಳೆದ ಸಂಚಿಕೆಯ ಪ್ರಧಾನ ಲೇಖನದಲ್ಲಿ ಇಂತಹ ಸಮಾವೇಶ ಬಿತ್ತಿದ ಭ್ರಮೆ ಮತ್ತು ವಾಸ್ತವಗಳ ನಡುವಿನ ಅಗಾಧ ಅಂತರವನ್ನು ನಿರೂಪಿಸಲಾಗಿತ್ತು. "ಹಿಂದಿನ ಮೂರು ಜಿಮ್ ಸಮಾವೇಶಗಳಲ್ಲಿ ಅನುಮೋದನೆಯಾಗಿವೆ ಎಂದು ಘೋಷಣೆಯಾದ ಪ್ರತಿ 8 ಯೋಜನೆಗಳಲ್ಲಿ, ಕೇವಲ ಎರಡು ಘಟಕಗಳು ಅನುಷ್ಠಾನದ ಹಂತಕ್ಕೆ ಬಂದಿವೆ. ಅದರಲ್ಲಿ ಒಂದು ಘಟಕ ಮಾತ್ರ ಆರಂಭವಾಗಿದೆ. ಘೋಷಿತ ಬಂಡವಾಳದ ಕೇವಲ 10ರಲ್ಲಿ ಒಂದು ಭಾಗ ವಾಸ್ತವವಾಗಿ ಹೂಡಿಕೆಯಾಗಿದೆ. ಆದರೆ ಆರಂಭವಾಗದ ಅರ್ಧದಷ್ಟು ಘಟಕಗಳು ಸುಮಾರು ಶೇ. 70ರಷ್ಟು ಭೂಮಿಯನ್ನು ಇಟ್ಟುಕೊಂಡಿವೆ! ಎಷ್ಟು ಉದ್ಯೋಗಗಳನ್ನು ವಾಸ್ತವವಾಗಿ ಸೃಷ್ಟಿಸಿವೆ ಎಂಬುದಕ್ಕೆ ದಾಖಲೆಗಳಿಲ್ಲ." ಇದು ಆ ನಿರೂಪಣೆಯ ಸಾರಾಂಶವಾಗಿತ್ತು

ಜಿಮ್ 2010ರ ಮತ್ತು ಬಳ್ಳಾರಿಯ ನಿರ್ದಿಷ್ಟ ಅನುಭವ ತೆಗೆದುಕೊಂಡರೆ, ಭರವಸೆ 1.39 ಲಕ್ಷ ಕೋಟಿ ರೂ. ಹೂಡಿಕೆ, 35 ಕೈಗಾರಿಕೆಗಳು, 79 ಸಾವಿರ ಉದ್ಯೋಗಗಳು. ಕಳೆದ ಐದು ವರ್ಷಗಳಲ್ಲಿ ವಾಸ್ತವವಾಗಿ ಬಂದಿದ್ದು 15 ಕೈಗಾರಿಕೆಗಳು, 16.4 ಸಾವಿರ ಕೋಟಿ ರೂ. ಹೂಡಿಕೆ ಮತ್ತು ಉದ್ಯೋಗಗಳು ಕೇವಲ 9,229. ಹೂಡಿಕೆ ಸಮಾವೇಶದಲ್ಲಿ ಮಾತ್ರವಲ್ಲ, ಸಾಮಾನ್ಯ (ಉನ್ನತ ಮಟ್ಟದ ಒಪ್ಪಿಗೆ ಸಮಿತಿಯ ಪರಿಶೀಲನೆ) ಪ್ರಕ್ರಿಯೆಯಲ್ಲಿ ಮತ್ತು ಸಮಾವೇಶದಲ್ಲಿ ಅನುಮೋದನೆಯಾದ ಹೂಡಿಕೆ ಯೋಜನೆಗಳನ್ನು ಒಟ್ಟಾಗಿ ತೆಗೆದುಕೊಂಡರೂ ಪರಿಸ್ಥಿತಿಯೂ ಇದೇ ಎಂದು ಡೆಕ್ಕನ್ ಹೆರಾಲ್ಡ್ ವರದಿ ಮಾಡಿದೆ. ಕಳೆದ 7 ವರ್ಷಗಳಲ್ಲಿ 3063 ಒಟ್ಟು ಅನುಮೋದಿತ ಯೋಜನೆಗಳಲ್ಲಿ ಕೇವಲ 323 ಆರಂಭವಾಗಿವೆ.

ಆದ್ದರಿಂದಲೋ ಏನೋ ಈ ಸಮಾವೇಶದ ನಂತರ ಎಷ್ಟು ಹೂಡಿಕೆ ಆಗಲಿದೆ, ಎಷ್ಟು ಉದ್ಯೋಗಗಳು ಸೃಷ್ಟಿಯಾಗಲಿವೆ ಎಂಬ ಬಗ್ಗೆ ಸರಕಾರದ ಅಧಿಕೃತ ವಕ್ತಾರರು ಏನೂ ಹೇಳುತ್ತಿಲ್ಲ. ಇದು ಯಾರೂ ಅದನ್ನು ನಂಬುವುದಿಲ್ಲ ಅಂತ ಇರಬಹುದು ಅಥವಾ ಇನ್ನೇನಾದರೂ ಕಾರಣ ಇದೆಯೇ? ಆದರೂ 2 ಲಕ್ಷ ಕೋಟಿ ಬಂಡವಾಳ ಹೂಡಿಕೆಯ ಭರವಸೆ ಬಗ್ಗೆ ಅನಧಿಕೃತವಾಗಿ ಹೇಳಲಾಗುತ್ತಿದೆ. ಉದ್ಯೋಗಗಳ ಬಗ್ಗೆ ಇಂತಹ ಊಹಾಪೋಹವೂ ಇಲ್ಲ. ಈ ಬರಹ ಪ್ರಿಂಟಿಗೆ ಹೋಗುವವರೆಗೆ ಸಮಾವೇಶ ಇನ್ನು ನಡೆಯುತ್ತಿದೆ. ಅಂತಿಮ ಹೂಡಿಕೆಯ ಭರವಸೆ ಎಷ್ಟು ಎಂದು ಗೊತ್ತಾಗಿಲ್ಲ. ಆದರೆ ಇದಕ್ಕಿಂತ ಕೇಳಬೇಕಾದ ಮುಖ್ಯ ಪ್ರಶ್ನೆ – ಈ ಸಮಾವೇಶಗಳ ನಿಜವಾದ ಉದ್ದೇಶ ಏನು? 'ಕೈಗಾರಿಕೀಕರಣ ಅಥವಾ ವಿನಾಶ' ಎಂಬ ವಿಶ್ವೇಶ್ವರಯ್ಯ ಅವರ ಬಹುಶ್ರುತ ಹೇಳಿಕೆಯನ್ನು ಸಮಾವೇಶದಲ್ಲಿ ನೆನಪಿಸಿಕೊಂಡು, ಪ್ರಮುಖ ಉದ್ದೇಶ ಕೈಗಾರಿಕೀಕರಣ ಅಥವಾ ಕೈಗಾರಿಕೀಕರಣದ ಮೂಲಕ ಅಭಿವೃದ್ಧಿ ಎಂದು ಸಾರಲಾಯಿತು. ಅದೇ ಉಸಿರಿನಲ್ಲಿ 'ಭೂಮಿಯ ಲಭ್ಯತೆ ಬಗ್ಗೆ ಚಿಂತೆ ಬೇಡ. ನೀವು ಭೂಮಿ ಗುರುತಿಸಿ ಸರ್ವೇ ನಂಬರ್ ಹೇಳಿ. ಅದನ್ನು ಕೊಡಿಸುವುದು ನಮ್ಮ ಜವಾಬ್ದಾರಿ' ಎಂದು ಹೂಡಿಕೆದಾರರಿಗೆ ಓಪನ್ ಚೆಕ್ ಕೊಡಲಾಗಿದೆ.

ಕೈಗಾರಿಕೀಕರಣ ಅವರ ಉದ್ದೇಶ ಎಂದು ಒಪ್ಪಿಕೊಂಡರೂ, ಸಮಾವೇಶದ ಹಿಂದಿರುವ "ಅಭಿವೃದ್ಧಿ = ಕೈಗಾರಿಕೀಕರಣ = ಬಂಡವಾಳ ಹೂಡಿಕೆ = ಭೂಸ್ವಾಧೀನ" ಎಂಬ ಫಾರ್ಮುಲಾ ಒಪ್ಪಿಕೊಳ್ಳುವುದು ಖಂಡಿತಾ ಕಷ್ಟ. ಅಭಿವೃದ್ಧಿಗೆ ಕೈಗಾರಿಕೀಕರಣ ಖಂಡಿತ ಅಗತ್ಯ. ಆದರೆ ನಿಜವಾದ ಅಭಿವೃದ್ಧಿಗೆ – ಪರಿಸರ ಮಾಲಿನ್ಯ–ನಾಶ ಮಾಡದ, ಪರಿಸರ ತಾಳಿಕೊಳ್ಳುವ, ಪ್ರಾಕೃತಿಕ ಸಂಪನ್ಮೂಲಗಳ ದಕ್ಷ ಬಳಕೆ ಮಾಡುವ, ಉದ್ಯೋಗ ಸೃಷ್ಟಿಸುವ, ಮನುಷ್ಯರ ನಿಜವಾದ ಅಗತ್ಯಗಳನ್ನು ಪೂರೈಸುವ ಸರಕು–ಸೇವೆಗಳ ಉತ್ಪಾದನೆ ಮಾಡುವ, ಈಗ ಇರುವ ಕೃಷಿ–ಕೈಗಾರಿಕೆಗಳಿಗೆ ಪೂರಕವಾಗಿರುವ – ಕೈಗಾರಿಕೀಕರಣ ಬೇಕು. ಆದ್ದರಿಂದ ಯಾವ ರೀತಿಯ ಕೈಗಾರಿಕೆ ಬೇಕು ಎಂಬುದನ್ನು ಬಂಡವಾಳ ಹೂಡಿಕೆದಾರರ ಆಯ್ಕೆಗೆ (ಖಯಾಲಿ, ಆಸಕ್ತಿ ಅಥವಾ ಲಾಭದಾಸೆ) ಬಿಡಲು ಸಾಧ್ಯವಿಲ್ಲ. ಅದನ್ನು ಯೋಜಿತವಾಗಿ ನಿರ್ಧರಿಸಬೇಕು. ಇದೇ ರೀತಿ ಯಾವ ಕೈಗಾರಿಕೆಗೆ ಎಷ್ಟು ಭೂಮಿ ಮತ್ತು ಇತರ ಪ್ರಾಕೃತಿಕ ಸಂಪನ್ಮೂಲ ಬೇಕು, ಎಲ್ಲಿ ಎಂಬುದನ್ನೂ ಸಹ ವೈಜ್ಞಾನಿಕವಾಗಿ ಕೈಗಾರಿಕೆಯ ಸ್ವರೂಪದ ಮೇಲೆ ನಿರ್ಧರಿಸಬೇಕು. ಆಹಾರ ಉತ್ಪಾದನೆ–ಭದ್ರತೆ, ಈಗಿರುವ ಕೃಷಿ–ಕೈಗಾರಿಕೆಗಳ ರಕ್ಷಣೆ ಮುಂತಾದ ಅಭಿವೃದ್ಧಿಯ ಅಗತ್ಯಗಳ ಒಟ್ಟಾರೆ ಅಂದಾಜಿನ ಮೇಲೆ ಇದನ್ನೂ ನಿರ್ಧರಿಸಬೇಕು.

ಆದರೆ ಹಿಂದಿನ ಸಮಾವೇಶಗಳ ಮತ್ತು ಇತರ ಅನುಮೋದಿತ ಯೋಜನೆಗಳ ಒಟ್ಟು ಅನುಭವ ನೋಡಿದರೆ, 'ಹೂಡಿಕೆದಾರ'ರ ಉದ್ದೇಶ ಕೈಗಾರಿಕೀಕರಣವೂ ಅಲ್ಲ. ಉದ್ಯೋಗ ಸೃಷ್ಟಿಯೂ ಅಲ್ಲ. ಭೂಮಿ ಅಥವಾ ಇತರ ಸಾರ್ವಜನಿಕ ಪ್ರಾಕೃತಿಕ ಸಂಪನ್ಮೂಲಗಳನ್ನು ಬಿಟ್ಟಿಯಾಗಿ ಅಥವಾ ಮೂರು ಕಾಸಿಗೆ, ಇತರ ಹಣಕಾಸಿನ ಮತ್ತಿತರ ಸಬ್ಸಿಡಿಗಳನ್ನು ದೋಚುವುದು. ಅದನ್ನು ಕೈಗಾರಿಕೀರಣದ ಬದಲು ಕಡಿಮೆ ರಿಸ್ಕ್ ನಲ್ಲಿ ಸೂಪರ್ ಲಾಭ ಗಳಿಸುವ ಇತರ (ರೀಯಲ್ ಎಸ್ಟೇಟ್ ನಂತಹ) ಕ್ಷೇತ್ರಗಳಲ್ಲಿ ಹೂಡಿಕೆ ಮಾಡುವುದು –ಎ ಎಂಬುದು ಸ್ಪಷ್ಟವಾಗುತ್ತದೆ. ಬೇರೆ ಯಾವ ರೀತಿಯಲ್ಲಿ □ "ಘೋಷಿತ ಬಂಡವಾಳದ ಕೇವಲ 10ರಲ್ಲಿ ಒಂದು ಭಾಗ ವಾಸ್ತವವಾಗಿ ಹೂಡಿಕೆಯಾಗಿದೆ. ಆದರೆ ಆರಂಭವಾಗದ ಅರ್ಧದಷ್ಟು ಘಟಕಗಳು ಸುಮಾರು ಶೇ. 70ರಷ್ಟು ಭೂಮಿಯನ್ನು ಇಟ್ಟುಕೊಂಡಿವೆ!" □ ಭ್ರಮೆ–ವಾಸ್ತವಗಳ ಈ ಅಂತರವನ್ನು ಅರ್ಥ ಮಾಡಿಕೊಳ್ಳಬಹುದು? ಜಿಮ್ 2010ರಲ್ಲಿ ಬಳ್ಳಾರಿಗೆ ಕಬ್ಬಿಣ–ಉಕ್ಕು ಕೈಗಾರಿಕೆಗಳ ಹೂಡಿಕೆಯ ಘೋಷಣೆ ಅದರ ಜತೆ ದೀರ್ಘ ಗಣಿ ಲೀಸ್ ಕೊಡಲಾಗುತ್ತದೆ ಎಂಬ ನಿರೀಕ್ಷೆಯಿಂದ ಆಗಿತ್ತು. ಕಬ್ಬಿಣ–ಉಕ್ಕು ಕಾರ್ಖಾನೆ ಸ್ಥಾಪಿಸುವುದಕ್ಕಿಂತ ಕಚ್ಚಾ ಅದಿರಿನ ರಫ್ತು ಕಡಿಮೆ ರಿಸ್ಕಿನ ಸೂಪರ್ ಲಾಭದ್ದು ಎಂಬುದು ಎಲ್ಲರಿಗೂ ತಿಳಿದ ವಿಷಯ. ಗಣಿ ಹಗರಣದಿಂದ ಇದು ಸಾಧ್ಯವಿಲ್ಲದಾದಾಗ ಈ ಹೂಡಿಕೆಗಳನ್ನು ತಡೆ ಹಿಡಿಯಲಾಯಿತು. ಸರಕಾರದ (ರಾಜಕಾರಣಿಗಳು ಅಥವಾ ಅಧಿಕಾರಿಗಳ ಸಹ) ಉದ್ದೇಶ ಸಹ ಕೈಗಾರಿಕೀಕರಣವೂ ಅಲ್ಲ. ಉದ್ಯೋಗ ಸೃಷ್ಟಿಯೂ ಅಲ್ಲ. ಭೂಮಿ ಮತ್ತು ಇತರ ಪ್ರಾಕೃತಿಕ ಸಂಪನ್ಮೂಲಗಳ ಲೂಟಿಯಲ್ಲಿ ಹೂಡಿಕೆದಾರರ ಜತೆ ಶಾಮೀಲಾಗಿ ಅದರಲ್ಲಿ ಈಗಾಗಲೇ ಪಾಲುದಾರರಾಗಿರುವುದು ಅಥವಾ ಮುಂದೆ ಪಾಲುದಾರರಾಗಲು ಸಿದ್ಧತೆ ಮಾಡುವುದು.

ಇದರರ್ಥ ಕೈಗಾರಿಕೀಕರಣ ಬೇಡವೆಂದೇ? ಖಂಡಿತ ಅಲ್ಲ. ಕೈಗಾರಿಕೀಕರಣ ದೀರ್ಘವಾದ ಸಂಕೀರ್ಣ ಪ್ರಕ್ರಿಯೆ. ಬಂಡವಾಳ, ಪ್ರಾಕೃತಿಕ ಸಂಪನ್ಮೂಲಗಳ ಜತೆಗೆ ಅಗತ್ಯ ವಸ್ತುಗಳ ಉತ್ಪಾದನೆಗೆ ಶ್ರಮದ ಕೌಶಲ್ಯ, ಸೃಜನಶೀಲತೆ, ವಿಜ್ಞಾನ–ತಂತ್ರಜ್ಞಾನಗಳನ್ನು ಬೆಳೆಸುವ; ಅವನ್ನು ಶಿಕ್ಷಣ, ಸಮಾಜದ ಇತರ ಬೆಳವಣಿಗೆಗಳ ಜತೆಗೆ ತಳುಕು ಹಾಕುವ; – ದೀರ್ಘವಾದ ಸಂಕೀರ್ಣ ಪ್ರಕ್ರಿಯೆ. ಕರ್ನಾಟಕಕ್ಕೆ ಭಾರತಕ್ಕೆ ಇದು ಗೊತ್ತಿಲ್ಲದ್ದೂ ಅಲ್ಲ. ಹೊಸದೂ ಅಲ್ಲ. ಮೈಸೂರು ಪ್ರಾಂತ್ಯದ 'ವಿಶ್ವೇಶ್ವರಯ್ಯ ಮಾದರಿ', ಸ್ವಾತಂತ್ರ್ಯ ನಂತರದ 'ನೆಹರೂ ಮಾದರಿ', ಈ ಎರಡು ಮಾದರಿಗಳ ಫಲವಾಗಿ 1980ರ ದಶಕದ ಸಣ್ಣ–ಮಧ್ಯಮ ಕೈಗಾರಿಕೆಗಳ ಬೆಳವಣಿಗೆ, 1990ರ ದಶಕದ ಐಟಿ ಕ್ಷೇತ್ರದ ಬೆಳವಣಿಗೆಯ ಅನುಭವ ನಮ್ಮ ಮುಂದಿದೆ. ಇವೆಲ್ಲವೂ ಪೂರ್ಣ ಸಕಾರಾತ್ಮಕ ಅನುಭವಗಳಲ್ಲ. ಅವುಗಳ ಸಫಲತೆ ಮತ್ತು ವೈಫಲ್ಯಗಳಿಂದಲೂ ಪಾಠ ಕಲಿತು ಈಗಿನ ಸನ್ನಿವೇಶಕ್ಕೆ ಹೊಂದುವ ಕೈಗಾರಿಕೀಕರಣದ ನೀತಿ ರೂಪಿಸಬೇಕಿದೆ. ಸಾರ್ವಜನಿಕ ಸಂಪನ್ಮೂಲಗಳಿಂದ ಸಾರ್ವಜನಿಕ ಒಡೆತನದಲ್ಲಿ ಮೂಲ ಸೌಕರ್ಯಗಳನ್ನು ಸೃಷ್ಟಿಸುವುದು, ಸಾರ್ವಜನಿಕ ಕ್ಷೇತ್ರದಲ್ಲಿ ವಿಜ್ಞಾನ–ತಂತ್ರಜ್ಞಾನದ ಶಿಕ್ಷಣ–ಸಂಶೋಧನೆ, ಆಯಕಟ್ಟಿನ ಕ್ಷೇತ್ರಗಳಲ್ಲಿ ಸಾರ್ವಜನಿಕ ಒಡೆತನದ ಕೈಗಾರಿಕೆಗಳ ಸ್ಥಾಪನೆ, ರಾಜ್ಯ ಸರಕಾರದ ಒಡೆತನದ ಉದ್ಯಮಗಳ ಪುನರುಜ್ಜೀವನ, ಸಣ್ಣ–ಮಧ್ಯಮ ಉದ್ಯಮಗಳಿಗೆ ಉತ್ತೇಜನ (ಸಮಾವೇಶದಲ್ಲಿ ಸರಕಾರದ ಬಗ್ಗೆ ಸಣ್ಣ–ಮಧ್ಯಮ ಉದ್ಯಮಿಗಳು ಗರಂ ಆಗಿದ್ದರು ಎಂದು ವರದಿಯಾಗಿದೆ), ನಿಜವಾದ 'ಮೇಡ್–ಇನ್–ಇಂಡಿಯಾ' ಅಥವಾ 'ಮೇಡ್–ಇನ್–ಕರ್ನಾಟಕ'ಕ್ಕೆ ಉತ್ತೇಜನ – ಇಂತಹ ನೀತಿಯ ಆವಶ್ಯಕ ಅಂಶಗಳು. 'ಇನ್‌ವೆಸ್ಟ್ ಕರ್ನಾಟಕ–2016'ದಂತಹ ಸಮಾವೇಶಗಳಿಂದಂತೂ ನಿಜವಾದ ಕೈಗಾರಿಕೀಕರಣ ಸಾಧ್ಯವಿಲ್ಲ. ಇಂತಹ ಸಮಾವೇಶಗಳು ಸಾಧಿಸುವುದು 'ಕೈಗಾರಿಕೀಕರಣ ಇಲ್ಲದ ವಿನಾಶ'ವನ್ನು. ಈ ಸಮಾವೇಶಗಳ ನಿಜವಾದ ಫಾರ್ಮುಲಾ ಹೀಗಿದೆ:

ಬಂಡವಾಳ ಹೂಡಿಕೆದಾರರ ಸಮಾವೇಶ = ಭೂಕಸಿತ = ಕೈಗಾರಿಕೀಕರಣ ಇಲ್ಲದ ವಿನಾಶ.

janashakthi.co.in

ಜನಶಕ್ತಿ
ಕನ್ನಡ ವಾರಪತ್ರಿಕೆ

ವೆಬ್ ಸೈಟನಲ್ಲಿ ಏನಿದೆ?

1. ಬೆಂಗಳೂರು ಉತ್ತರ 3ನೇ ವಲಯ ಸಮ್ಮೇಳನ
2. ಮಾರ್ಚ್ 11ರಂದು ಕಾರ್ಮಿಕರಿಂದ ವಿಧಾನಸೌಧ ಚಲೋ (ಹುಬ್ಬಳ್ಳಿ ಸಿಐಟಿಯು ಪತ್ರಿಕಾ ಹೇಳಿಕೆ)
3. ಹಾಸನದಲ್ಲಿ ಗಾಂಧಿಜೀ ಹುತಾತ್ಮ ದಿನಾಚರಣೆ
4. ರೋಹಿತ್ ಆತ್ಮಹತ್ಯೆಗೆ ಕಾರಣವಾದವರ ಮೇಲೆ ಕ್ರಮಕ್ಕೆ ಆಗ್ರಹ(ಹಾವೇರಿ ಜಿಲ್ಲೆ)
5. ಪೌರ ಕಾರ್ಮಿಕರಿಗೆ ಕೆಲಸದ ಅಭದ್ರತೆ: ಸೂಕ್ತ ಕ್ರಮಕ್ಕೆ ಸಿಐಟಿಯು ಆಗ್ರಹ (ಉಡುಪಿ)
6. ಗಜೇಂದ್ರಗಢದಲ್ಲಿ ಎಸ್.ಎಫ್.ಐ. ನಗರ ಸಮ್ಮೇಳನ
7. ಜನತೆಯಿಂದ ದೂರವಾಗುತ್ತಿದೆ ಸಿನಿಮಾ–ಟಿ.ವಿ. ಮಾಧ್ಯಮ (ಹಾಸನ)

ನಾಳಿನ ಕಾರ್ಯಕ್ರಮಗಳು

1. **ಫೆಬ್ರವರಿ 16 –** ರಸ್ತೆ ಸಾರಿಗೆ ಕಾರ್ಮಿಕರ ರಾಜ್ಯ ಸಮಾವೇಶ, ಇ.ಎಂ.ಎಸ್.ಭವನ, ಬೆಂಗಳೂರು.
2. **ಫೆಬ್ರವರಿ 17 –** ರೋಹಿತ್ ವೇಮುಲ ನ್ಯಾಯಕ್ಕಾಗಿ ಶಾಲಾ, ಕಾಲೇಜ್, ವಿ.ವಿ.ಗಳ ಬಂದ್
3. **ಫೆಬ್ರವರಿ 19 –** ಬಿಸಿಯೂಟ ನೌಕರರ ವಿಧಾನಸೌಧ ಚಲೋ
4. **ಮಾರ್ಚ್ 01 –** ರಸ್ತೆ ಸಾರಿಗೆ ಕಾರ್ಮಿಕರ ದೆಹಲಿ ಚಲೋ
5. **ಮಾರ್ಚ್ 11 –** ಕಾರ್ಮಿಕರ ವಿಧಾನಸೌಧ ಚಲೋ, ಸಿಐಟಿಯು

ಜನಶಕ್ತಿ
ಕನ್ನಡ ವಾರಪತ್ರಿಕೆ

ಚಂದಾ ವಿವರ

ವಾರ್ಷಿಕ ಚಂದಾ : ರೂ.350.00
ದ್ವೈವಾರ್ಷಿಕ ಚಂದಾ : ರೂ.700.00

ಚಂದಾದಾರರು ಸಂರ್ಕಿಸಿ :
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.50/5, 2ನೇ 'ಬಿ' ಮೈನ್, 16ನೇ ಕ್ರಾಸ್,
ಸಂಪಂಗಿರಾಮನಗರ, ಬೆಂಗಳೂರು 560027
ಕಛೇರಿ ದೂರವಾಣಿ : 080–22234369
ಫೋನ್ : 9448578021, 9483966467

ಕಾರ್ಮಿಕ ಮಂತ್ರಿಯನ್ನು ವಜಾ ಮಾಡಬೇಕು..



ಕೆ. ಮಹಾಂತೇಶ್

2015 ರ ನವೆಂಬರ್ 24 ರಂದು ಕಾರ್ಮಿಕ ಸಚಿವ ಪಿ.ಟಿ. ಪರಮೇಶ್ವರ ನಾಯ್ಕ ರಾಜೀನಾಮೆ ನೀಡಬೇಕೆಂದು ಸಿಐಟಿಯು ರಾಜ್ಯ ಸಮಿತಿ ಕರೆಯಂತೆ ರಾಜ್ಯದ್ಯಂತ ಪ್ರತಿಭಟನೆ ನಡೆದಿದ್ದು ಓದುಗರಿಗೆ ನೆನಪಿದೆ. ಕೋಟ್ಯಾಂತರ ಸಂಖ್ಯೆಯಲ್ಲಿರುವ ಕಾರ್ಮಿಕ ವರ್ಗಕ್ಕೆ ಇಲಾಖೆ ಮೂಲಕ ಮಾಡಬೇಕಾದ ಕೆಲಸಗಳನ್ನು ಮಾಡದೆ, ಮಾಡಬಾರದ ಕೆಲಸಗಳಿಗೆ ಕೈ ಹಾಕಿ ಎಲ್ಲಾ ವಿಭಾಗಗಳಿಂದ ಧಿಕ್ಕಾರದ ಘೋಷಣೆಗಳನ್ನು ಕೂಗಿಸಿಕೊಂಡಿದ್ದೇ ಅವರ ಸಾಧನೆ. ಬೀಡಿ ಕಾರ್ಮಿಕರಿಗೆ ನ್ಯಾಯಬದ್ಧವಾಗಿ ಸಲ್ಲಬೇಕಾದ ತುಟ್ಟಿಭತ್ಯೆಯನ್ನು ಮಾಲೀಕರ ಒತ್ತಾಯಕ್ಕೆ ಮಣಿದು ತಡೆಹಿಡಿದಿದ್ದು, ಕಟ್ಟಡ ಕಾರ್ಮಿಕ ಮಂಡಳಿಯಲ್ಲಿ ಸಂಗ್ರಹವಾಗಿರುವ ಸಾವಿರಾರು ಕೋಟಿ ಹಣವನ್ನು ಮನಸೋ ಇಚ್ಛೆಯಂತೆ ವೆಚ್ಚ ಮಾಡಲು ತೀರ್ಮಾನಿಸಿರುವುದು, ವಿವಿಧ ಉಧ್ಯಮಗಳ ಕನಿಷ್ಟ ಕೂಲಿ ಪರಿಷ್ಕರಣೆ ಕರಡು ಅಧಿಸೂಚನೆ ಮಾಡಲು ವಿಳಂಬ ಮಾಡಿದ್ದು, ಅಧಿಕಾರಿಗಳ ಮೇಲೆ ನಿರಂತರ ದೌರ್ಜನ್ಯ.. ಹೀಗೆ ಸಚಿವರ ವಿಫಲತೆಗಳ ಪಟ್ಟಿಯೇ ಸಾಗುತ್ತದೆ. ಇಡೀ ಕಾರ್ಮಿಕ ವರ್ಗಕ್ಕೆ ಅನ್ಯಾಯ ಮಾಡುತ್ತಿರುವ ಈ ಸಚಿವರನ್ನು ಮುಖ್ಯಮಂತ್ರಿಗಳು ವಜಾಗೊಳಿಸಬೇಕು ಎಂಬ ಬೇಡಿಕೆಯನ್ನು ಮುಂದು ಮಾಡಿದ ರಾಜ್ಯ ಕಾರ್ಮಿಕರು ನಡೆಸಿದ ಹೋರಾಟ ಇನ್ನೂ ಹಸಿಯಾಗಿರುವಾಗಲೇ... ಇದೀಗ ಒಂದರ ಮೇಲೊಂದಂತೆ ಹಲವು ವಿವಾದಗಳನ್ನು ಸ್ವಯಂ ಸೃಷ್ಟಿಸಿಕೊಂಡು ರಾಜ್ಯದ ಸುದ್ದಿಮಾಧ್ಯಮದ ಕೆಂಗಣ್ಣಿಗೆ ಪಿ.ಟಿ ಪರಮೇಶ್ವನಾಯ್ಕ ಬಲಿಯಾಗಿದ್ದಲ್ಲದೆ ಜನರಿಂದಲೂ ಛೀಮಾರಿಗೊಳಗಾಗಿದ್ದಾರೆ.

ಬಳ್ಳಾರಿ ಜಿಲ್ಲೆಯ ಕೂಡ್ಲಿಗಿಯ ಡಿವೈಎಸ್‌ಪಿ ಅನುಪಮ ಶಣೈ ಅವರು ತನ್ನ ಫೋನ್ ಕರೆಯನ್ನು ಸ್ವೀಕರಿಸಿಲ್ಲವೆಂಬ ನೆಪವೊಡ್ಡಿ ಒಂದೇ ದಿನ ಎರಡು ಕಡೆ ವರ್ಗಾಯಿಸಿದ ಅಪಾದನೆ ಸಚಿವರ ಮೇಲೆ ಬಂದಿದೆ. ಕೊಲೆ ಪ್ರಕರಣವೊಂದನ್ನು ಆತ್ಮಹತ್ಯೆ ಪ್ರಕರಣವನ್ನಾಗಿ ದಾಖಲು ಮಾಡಲು ಆ ಮಹಿಳಾ ಅಧಿಕಾರಿ ಮೇಲೆ ಸಚಿವರು ಒತ್ತಡ ಹಾಕಲು ಯತ್ನಿಸಿದ್ದರಿಂದಲೇ ಡಿವೈಎಸ್‌ಪಿ ಸಹಜವಾಗಿ ಈ ಕರೆಯನ್ನು ಸ್ವೀಕರಿಸಿಲ್ಲ. ಇದನ್ನೇ ನೆಪಮಾಡಿ ತನ್ನ ಅಧಿಕಾರ ಬಳಸಿ ಆ ಅಧಿಕಾರಿಯನ್ನು ತನ್ನ ಮನಸೋ ಇಚ್ಛೆ ವರ್ಗಾಯಿಸಿದ್ದಲ್ಲದೇ ತಾನು ಮಾಡಿದ ಆ ವರ್ಗಾವಣೆಯನ್ನು ಬಹಿರಂಗವಾಗಿ ದರ್ಪದಿಂದ ಬೆನ್ನು ಚಪ್ಪರಿಸಿಕೊಂಡ ವಿಡಿಯೋ ಕ್ಲಿಪಿಂಗ್ ಮಾಧ್ಯಮಗಳ ಮೂಲಕ ಬಹಿರಂಗಗೊಂಡು ರಾಜ್ಯದಲ್ಲಿ ಕಾರ್ಮಿಕ ಸಚಿವರ ಆ ನಡೆಯ ವಿರುದ್ಧ ಬಂದ್, ಪ್ರತಿಭಟನೆಗಳು ನಡೆದಿವೆ. ರಾಜ್ಯದ ಮುಖ್ಯಂತ್ರಿಗಳು ಹಾಗೂ ಗೃಹಸಚಿವರು ಇಂತಹ ಆಯೋಗ್ಯ ಸಚಿವರನ್ನು ಸಮರ್ಥಿಸಿಕೊಳ್ಳುತ್ತಿರುವುದು ಖಂಡನಾರ್ಹವಾದ ಸಂಗತಿ.

ಗಣಿಧಣಿಗಳು ಸ್ಥಾಪಿಸಿಕೊಂಡಿದ್ದ ಬಳ್ಳಾರಿ ರಿಪಬ್ಲಿಕ್ ವಿರುದ್ಧ ತೊಡೆತಟ್ಟಿದ್ದ ಸಿದ್ದರಾಮಯ್ಯನವರು ಇದೀಗ ಅದೇ ಬಳ್ಳಾರಿ ಉಸ್ತುವಾರಿ ಸಚಿವರಿಂದಲೇ ಅಪಖ್ಯಾತಿ ಗಳಿಸುತ್ತಿದ್ದಾರೆ. ಆರಂಭದಿಂದಲೂ ಒಂದಲ್ಲ ಒಂದು ಹಗರಣ ಮತ್ತು ಕಾರ್ಮಿಕ ವಿರೋಧಿ ನೀತಿಗಳನ್ನೇ ಪ್ರದರ್ಶಿಸುತ್ತಿರುವ ಕಾರ್ಮಿಕ ಸಚಿವ ಪಿ.ಟಿ. ಪರಮೇಶ್ವರ ನಾಯ್ಕ ಅವರನ್ನು ಸ್ವತಃ ಮುಖ್ಯಮಂತ್ರಿಗಳೇ ವಜಾ ಮಾಡಬೇಕು ಮತ್ತು ಅವರ ಕುರಿತಾಗಿ ರಾಜ್ಯದ ಕಾರ್ಮಿಕ ವರ್ಗ ಹಾಗೂ ಮಾಧ್ಯಮಗಳು ಎತ್ತಿರುವ ಹಲವು ಪ್ರಶ್ನೆಗಳ ಕುರಿತು ತನಿಖೆ ನಡೆಸಬೇಕು ಆ ಮೂಲಕ ಮುಂಬರುವ ದಿನಗಳಲ್ಲಿ ಎದ್ದುಬರುವ ಮತ್ತಷ್ಟು ಪ್ರತಿರೋಧಗಳನ್ನು ತಡೆಹಿಡಿಯುವ ಬುದ್ಧಿವಂತಿಕೆಯನ್ನು ಸಿದ್ದರಾಮಯ್ಯನವರು ಪ್ರದರ್ಶಿಸಬೇಕು. ■

ಮಾರ್ಚ 11 ರ ಕಾರ್ಮಿಕರ 'ವಿಧಾನ ಸೌಧ ಚಲೋ' ದ ಹಕ್ಕೊತ್ತಾಯಗಳು


- ಕೇಂದ್ರ ಸರ್ಕಾರವು ಬೋನಸ್ ಪಾವತಿ ಕಾಯ್ದೆಯಲ್ಲಿ ಕನಿಷ್ಠ ಬೋನಸ್ ಮಿತಿಯನ್ನು ರೂ.7000/-ಕ್ಕೆ ಹಾಗೂ ಅರ್ಹತಾ ಮಿತಿಯನ್ನು ರೂ.21,000/-ಕ್ಕೆ ಹೆಚ್ಚಿಸಿ ತಿದ್ದುಪಡಿ ಮಾಡಿದೆ. 2014-15ರ ಸಾಲಿನಿಂದ ಇದು ಜಾರಿಗೊಂಡಿರುವ ಕಾರಣ, ಬಾಕಿ ಬೋನಸ್ ಪಡೆಯಲು ಕಾರ್ಮಿಕರು ಅರ್ಹರಾಗಿದ್ದಾರೆ. ಆದರೆ ಇದುವರೆಗೆ ಅದನ್ನು ಜಾರಿಗೊಳಿಸದ ಮಾಲೀಕರು ಇದೀಗ ಹೈಕೋರ್ಟ ಮೂಲಕ ತಡೆಯಾಜ್ಞೆ ತಂದಿದ್ದಾರೆ. ಇದನ್ನು ಸರಕಾರ ತೆರವುಗೊಳಿಸಲು ಕ್ರಮವಹಿಸಬೇಕು.
- ರಾಜ್ಯ ಸರ್ಕಾರವು ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿ ಶಿಫಾರಸ್ಸಿನಂತೆ 9 ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಠ ವೇತನವನ್ನು ರೂ. 10,050ಕ್ಕೆ ಹೆಚ್ಚಿಸಿ ಪರಿಷ್ಕರಿಸಿದೆ. ಉಳಿದಂತೆ ಒಮ್ಮೆ 4 ಮತ್ತು 23 ಸೇರಿ ಒಟ್ಟು 27 ಅನುಸೂಚಿತ ಉದ್ದಿಮೆಗಳ ಕನಿಷ್ಠ ವೇತನ ಪರಿಷ್ಕರಣೆಯ ಕರಡು ಅಧಿಸೂಚನೆಗಳನ್ನು ಹೊರಡಿಸಿದೆ. ಅವುಗಳಿಗೆ ಮಾಲೀಕರು ಇಲ್ಲಸಲ್ಲದ ಕುಂಟು ನೆಪಮಾಡಿ, ಪರಿಷ್ಕರಿಸಿರುವ 9 ಉದ್ದಿಮೆಗಳ ಕನಿಷ್ಠ ವೇತನವನ್ನು ಹಿಂಪಡೆಯಲು ಹಾಗು ಕರಡು ಅಧಿಸೂಚನೆಗಳನ್ನು ಅಂತಿಮಗೊಳಿಸದಿರಲು ಒತ್ತಡ ಹೇರುತ್ತಿದ್ದಾರೆ. ಬೀಡಿ ಕಾರ್ಮಿಕರಿಗೆ ಕನಿಷ್ಠ ವೇತನ ಕಾಯಿದೆಯಡಿ ಸಿಗಬೇಕಾಗದ ತುಟ್ಟಿಭತ್ಯೆ ಹೆಚ್ಚಳವನ್ನು ತಡೆಹಿಡಿದಿರುವ ಸರ್ಕಾರ ಆದೇಶ ರದ್ದು ಮಾಡಬೇಕು. ಮತ್ತು ಕಾರ್ಮಿಕರಿಗೆ ಪರ್ಯಾಯ ಉದ್ಯೋಗ ಒದಗಿಸಿದ ನಂತರವೇ ತಂಬಾಕು ನಿಷೇಧದ ಕ್ರಮಕ್ಕೆ ಮುಂದಾಗಬೇಕು.
- ಕನಿಷ್ಠ ವೇತನ ವ್ಯಾಪ್ತಿಗೆ ಒಳಪಡದ ಸರ್ಕಾರದ ಸ್ಕೀಂ ನೌಕರರಾದ ಅಂಗನವಾಡಿ, ಬಿಸಿಊಟ, ಆಶಾ ಮುಂತಾದ ನೌಕರರನ್ನು ಕನಿಷ್ಠ ವೇತನ ಅನುಸೂಚಿಗೆ ಒಳಪಡಿಸಬೇಕು ಮತ್ತು 7ನೇ ಕೇಂದ್ರ ವೇತನ ಆಯೋಗದ ಶಿಫಾರಸ್ಸಿನಂತೆ ರೂ.18,000/- ಮಾಸಿಕ ಸಮಾನ ಕನಿಷ್ಠ ವೇತನ ನಿಗದಿ ಮಾಡಬೇಕು.
- ಕಳೆದ 2 ವರ್ಷಗಳಿಂದ ರಾಜ್ಯದಲ್ಲಿ ಕನಿಷ್ಠ ವೇತನ ಅರ್ಜಿ ಸಲ್ಲಿಸಲು ಪ್ರಾಧಿಕಾರಿಗಳೇ ಇಲ್ಲದಂತಾಗಿದೆ. ಕೂಡಲೆ ಪ್ರಾಧಿಕಾರವನ್ನು ಅಧಿಸೂಚಿಸಬೇಕಾಗಿ ಒತ್ತಾಯ.
- ಕಾರ್ಮಿಕ ನ್ಯಾಯಾಲಯಗಳು ಇಲ್ಲದ ಜಿಲ್ಲೆಗಳಲ್ಲಿ ಕೈಗಾರಿಕಾ ವಿವಾದಗಳನ್ನು ಸಿವಿಲ್ ನ್ಯಾಯಾಲಯಗಳಿಗೆ ವರ್ಗಾಯಿಸಲಾಗಿದೆ. ಪರಿಣಾಮವಾಗಿ ಈಗಾಗಲೇ ವಿಳಂಬವಾಗಿ ಇತ್ಯರ್ಥವಾಗುತ್ತಿರುವ ವಿವಾದಗಳು ಮತ್ತಷ್ಟು ವಿಳಂಬವಾಗಲಿವೆ. ಆದಕಾರಣ ಕಾರ್ಮಿಕ ನ್ಯಾಯಾಲಯಗಳು ಇಲ್ಲದ ಎಲ್ಲಾ ಜಿಲ್ಲೆಗಳಲ್ಲೂ ಕಾರ್ಮಿಕ ನ್ಯಾಯಾಲಯಗಳ ಸ್ಥಾಪನೆ ಆಗಬೇಕು.
- ವ್ಯಾಪಕವಾಗಿ ಹೆಚ್ಚುತ್ತಿರುವ ಗುತ್ತಿಗೆ ಕಾರ್ಮಿಕರಿಗೆ ನ್ಯಾಯ ಒದಗಿಸಲು ಗುತ್ತಿಗೆ ಕಾರ್ಮಿಕರು, ಟ್ರೈನಿಗಳು ಮುಂತಾದವರನ್ನು ಕಾಯಂಗೊಳಿಸಲು ಅನುವಾಗುವಂತೆ, ಗುತ್ತಿಗೆ ಕಾರ್ಮಿಕರ ಕೆಲಸವನ್ನು ಕಾಯಂಗೊಳಿಸುವ ಶಾಸನ ಜಾರಿ ಮಾಡಬೇಕು. ಸಂಘ ರಚನೆ ಮಾಡಿದ ಕಾರ್ಮಿಕರ ಹಕ್ಕುಗಳ ರಕ್ಷಣೆಗಾಗಿ ಸಂಘ ಮಾನ್ಯತಾ ಶಾಸನ ರಚನೆಯಾಗಬೇಕು. ಗ್ರಾಮ ಪಂಚಾಯ್ತಿ, ಮುನ್ಸಿಪಲ್, ಬಿಎಸ್‌ಎನ್‌ಎಲ್, ವಿದ್ಯುತ್ ಕಂಪನಿಗಳಲ್ಲಿ ದುಡಿಯುತ್ತಿರುವ ನೌಕರರನ್ನು ಕಾಯಂಗೊಳಿಸಬೇಕು.
- ಕೇಂದ್ರ ಸರ್ಕಾರವು ಮೇಕ್-ಇನ್-ಇಂಡಿಯಾ, ಸ್ಟಾರ್ಟ್-ಅಪ್-ಇಂಡಿಯಾ ಹೆಸರಿನಲ್ಲಿ ಕಾರ್ಖಾನೆ ಪ್ರಾರಂಭಿಸಿದ ಮೊದಲ 5 ವರ್ಷಗಳು ಎಲ್ಲಾ ಕಾರ್ಮಿಕ ಕಾನೂನುಗಳಿಂದ ವಿನಾಯ್ತಿ ನೀಡಿರುವುದನ್ನು ವಿರೋಧಿಸಿ, ಅದನ್ನು ಜಾರಿಗೊಳಿಸಬಾರದು.
- ಅಸಂಘಟಿತ ಕಾರ್ಮಿಕರಿಗೆ ಸರಕಾರವೇ ಭವಿಷ್ಯ ನಿಧಿ ಯೋಜನೆ ರೂಪಿಸಿ ಜಾರಿಗೊಳಿಸಲು, ಸಾಮಾಜಿಕ ಭದ್ರತಾ ಮಂಡಳಿಗೆ ಹಣ ನೀಡಿ ಯೋಜನೆಗಳ ರೂಪಿಸಿ ಜಾರಿಗೊಳಿಸಲು, ಆಮ್ ಆದ್ಮೀ ಮತ್ತು ಆರ್.ಎಸ್.ಬಿ.ವೈ ವಿಮಾ ಮೊತ್ತವನ್ನು ವಾರ್ಷಿಕ ಲಕ್ಷ ರೂಗಳಿಗೆ ಹೆಚ್ಚಿಸಬೇಕು.
- ಕೇಂದ್ರ ಸರಕಾರದ ರಸ್ತೆ ಸಾರಿಗೆ ಸುರಕ್ಷತಾ ಮಸೂದೆ 2015 ಮತ್ತು ರಾಜ್ಯ ಸರಕಾರದ 'ಎಸ್ಮಾ' ಕಾನೂನು ಜಾರಿ ಮಾಡಬಾರದು.

ಈಗಾಗಲೇ ಈ ಬೇಡಿಕೆಗಳ ಆಧಾರದಲ್ಲಿ ಫೆಬ್ರವರಿ-5ರಂದು ಪ್ರತಿಭಟನೆ ನಡೆಸಲಾಗಿದೆ. ಹಾಗೂ ಮಾರ್ಚ್ 11ರ ವಿಧಾನ ಸೌಧ ಚಲೋಗೆ ಈಗಾಗಲೇ ವಿವಿಧ ಕಾರ್ಮಿಕ ವಿಭಾಗಗಳ ಮಧ್ಯೆ ತಯಾರಿ ಆರಂಭಿಸಲಾಗಿದೆ. ■

aAiÁvEÁzÀgÉ EzÀÄ

ಪ್ರಕೃತಿ ನಿರ್ವಾತ ಬಯಸುವುದಿಲ್ಲ ಎಂದ ಹಾಗೆ ಬಂಡವಾಳ ಯಾವ ಲಾಭವನ್ನೂ ಅದು ಎಷ್ಟು ಸಣ್ಣದಾದರೂ ಬಿಟ್ಟುಕೊಡುವುದಿಲ್ಲ. ಸಾಕಷ್ಟು ಲಾಭ ಇದ್ದರೆ ಬಂಡವಾಳಕ್ಕೆ ಭಾರೀ ಧೈರ್ಯ ಬರುತ್ತದೆ. ಶೇ. 10 ಲಾಭ ಸಿಕ್ಕಿದರರೆ ಅದು ಎಲ್ಲಿ ಹೋಗಲೂ ತಯಾರು. ಶೆ. 20 ಲಾಭ ಸಿಕ್ಕಿದರೆ ಅತಿ ಉತ್ಸುಕವಾಗುತ್ತದೆ, ಶೇ. 50 ಲಾಭ ಸಿಕ್ಕಿದರೆ ಭಾರೀ ದಾಷ್ಟ್ಯ ತೋರಿಸುತ್ತದೆ, ಶೇ. 100 ಲಾಭದ ಸಾಧ್ಯತೆ ಕಂಡರೆ ಅದು ಎಲ್ಲಾ ಮಾನವೀಯ ನಿಯಮಗಳನ್ನು ತುಳಿಯಲು ತಯಾರಿರುತ್ತದೆ. ಶೇ. 300 ಲಾಭ ಕಂಡರೆ ಅದು ಯಾವ ಅಪರಾಧಕ್ಕೂ ಹೇಸುವುದಿಲ್ಲ, ಅದರ ಒಡೆಯ ನೇಣುಗಂಬ ಏರಬೇಕಾದ ಅಪಾಯ ಸೇರಿದಂತೆ ಯಾವ ಅಪಾಯಕ್ಕೂ ಅಂಜುವುದಿಲ್ಲ. ಪ್ರಕ್ಷುಬ್ಧತೆ ಮತ್ತು ಘರ್ಷಣೆ ಲಾಭ ತಂದುಕೊಡುವುದಾದರೆ ಅವೆರಡಕ್ಕೂ ಕುಮ್ಮಕ್ಕು ಕೊಡಲು ಸಿದ್ಧವಾಗುತ್ತದೆ. ಕಳ್ಳಸಾಗಾಣಿಕೆ ಮತ್ತು ಗುಲಾಮರ ವ್ಯಾಪಾರದಲ್ಲಿ ಬಂಡವಾಳದ ಪಾತ್ರ ಈ ವರೆಗೆ ಹೇಳಿದ್ದಕ್ಕೆ ಪುರಾವೆಗಳು.

– ಕಾರ್ಲ್ ಮಾರ್ಕ್ಸ್, ಬಂಡವಾಳ ಗ್ರಂಥದಲ್ಲಿ (ಬಂಡವಾಳದ ಲಾಭದಾಸೆ ಬಗ್ಗೆ ಡನ್ನಿಂಗ್ ಎಂಬ ಚಿಂತಕನನ್ನು ಉದ್ಧರಿಸುತ್ತಾ)





ಗುತ್ತಿಗೆ ಕಾರ್ಮಿಕರ ಖಾಯಂಗೆ ಒತ್ತಾಯಿಸಿ, ಕನಿಷ್ಟ ವೇತನ ಪರಿಷ್ಕರಣೆ ಅಧಿಸೂಚನೆ ಹಾಗೂ ಕರಡು ಅಧಿಸೂಚನೆಗೆ ವಿರೋಧ ವ್ಯಕ್ತಪಡಿಸಿರುವ ಮಾಲೀಕರ ಒತ್ತಡಕ್ಕೆ ಮಣಿಯದೆ ಜಾರಿಗೊಳಿಸಬೇಕೆಂದು, ಎಲ್ಲಾ ಕಾರ್ಮಿಕರಿಗೂ ಕನಿಷ್ಟ ಕೂಲಿಯನ್ನು ರೂ.18,000ಕ್ಕೆ ಹೆಚ್ಚಿಸಬೇಕೆಂದು, ಅಸಂಘಟಿತ ಕಾರ್ಮಿಕರಿಗೂ ಭವಿಷ್ಯ ನಿಧಿ ಜಾರಿಗಾಗಿ, ಎಲ್ಲಾ ಜಿಲ್ಲೆಗಳಲ್ಲಿ ಕಾರ್ಮಿಕ ನ್ಯಾಯಾಲಯಗಳ ಸ್ಥಾಪನೆಗಾಗಿ, ಇನ್ನಿತರೆ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಜಂಟಿ ಕಾರ್ಮಿಕ ಸಂಘಟನೆಗಳ ಒಕ್ಕೂಟ(ಜೆಸಿಟಿಯು) ನೇತೃತ್ವದಲ್ಲಿ ಫೆ. 05ರಂದು ದೇಶದ ವಿವಿದೆಡೆ ಪ್ರತಿಭಟನೆಗಳು ನಡೆದಿದೆ. ಬೆಂಗಳೂರಿನ ಟೌನ್‌ಹಾಲ್ ಬಳಿ ಸೇರಿದ ನೂರಾರು ಕಾರ್ಮಿಕರು ಮೇಲಿನ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿದರು. ಸಿಐಟಿಯುವಿನ ರಾಜ್ಯ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಜಿಲ್ಲಾ ಮುಖಂಡರಾದ ಪ್ರತಾಪ್‌ಸಿಂಹ ಸೇರಿದಂತೆ ನೂರಾರು ಕಾರ್ಮಿಕರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಹೋರಾಟದ ಭಾಗವಾಗಿ ಫೆ.2ರಂದು ಸಿಐಟಿಯು ನೇತೃತ್ವದಲ್ಲಿ ಕಾರ್ಮಿಕ ಆಯುಕ್ತರ ಕಛೇರಿ ಬಳಿ ಕಾರ್ಮಿಕರು ಪ್ರತಿಭಟನೆ ನಡೆಸಿದ್ದಾರೆ. ಅದೇ ರೀತಿಯಲ್ಲಿ ಕರ್ನಾಟಕ ವರ್ಕರ್ಸ್ ಯೂನಿಯನ್ ನೇತೃತ್ವದಲ್ಲೂ ಪ್ರತಿಭಟನೆಗಳು ನಡೆದಿದೆ. ■

ಕಾಮ್ರೇಡ್ ಅಬ್ರಹಾಂ ಕರ್ಕಡ ಲಾಲ್ ಸಲಾಮ್!

– ಕೆ. ಶಂಕರ್





ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ರೈತ–ಕಾರ್ಮಿಕರ ನೆಚ್ಚಿನ ಮುಖಂಡರಾಗಿದ್ದ ಮತ್ತು ಸಿಪಿಐ(ಎಂ) ಪಕ್ಷದ ಹಿರಿಯ ನಾಯಕರಾಗಿದ್ದ ಕಾ. ಅಬ್ರಹಾಂ ಕರ್ಕಡ ಇನ್ನಿಲ್ಲ! ಅವರು ಜನವರಿ 31 ರ ರಾತ್ರಿ 8 ಗಂಟೆಗೆ ಮಂಗಳೂರಿನಲ್ಲಿ ನಿಧನ ಹೊಂದಿದರು. ಅವರಿಗೆ 3 ಮಂದಿ ಹೆಣ್ಣು ಮಕ್ಕಳು.

81 ವರ್ಷಗಳ ವಯಸ್ಸಿನ ಕಾ। ಅಬ್ರಹಾಂ ಕರ್ಕಡ್‌ರವರು ಕಳೆದ ಮೂರು ತಿಂಗಳುಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರನ್ನು 2 ಬಾರಿ ಹಿಂದೆ ಮಂಗಳೂರಿನ ಖಾಸಗಿ ಆಸ್ಪತ್ರೆಗೆ ಸೇರಿಸಲಾಗಿತ್ತು. ನಾಲ್ಕು ದಿವಸಗಳಿಂದ ಆಸ್ಪತ್ರೆಯ ಐ.ಸಿ.ಯು.ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

ಅವರ ಅಂತಿಮ ದರ್ಶನಕ್ಕಾಗಿ ಫೆಬ್ರುವರಿ 1 ರಂದು ಅಪರಾಹ್ನ 2.00 ಗಂಟೆಗೆ ಸ್ವಗೃಹದಲ್ಲಿ ಪಾರ್ಥಿವ ಶರೀರವನ್ನು ಇಡಲಾಗಿದ್ದು, ಅನಂತರ ಅಂತ್ಯಕ್ರಿಯೆಯು ಸಂಜೆ 4.00 ಗಂಟೆಗೆ ವೆಲೆನ್ಸಿಯ ಚರ್ಚ್ ಬಳಿಯ ಸ್ಮಶಾನದಲ್ಲಿ ನೆರವೇರಿತು. ಪಕ್ಷದ ಮುಖಂಡರು, ಸದಸ್ಯರು ಹಾಗೂ ಸಾಮೂಹಿಕ ಸಂಘಟನೆಗಳ ಮುಖ್ಯ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಅದೇ ದಿವಸ ಕುಂದಾಪುರದಲ್ಲಿ ಸಂಜೆ 4.00 ಗಂಟೆಗೆ ಸರಿಯಾಗಿ ಶ್ರದ್ಧಾಂಜಲಿ ಸಭೆಯೊಂದನ್ನು ಏರ್ಪಡಿಸಿ, ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು. ಪಕ್ಷದ ಸದಸ್ಯರು, ಹಂಚು ಕಾರ್ಮಿಕರು ಹಾಗೂ ಇತರ ಸಾಮೂಹಿಕ ಸಂಘಟನೆಗಳ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲುಗೊಂಡಿರುತ್ತಾರೆ.

ಹಂಚು ಕಾರ್ಮಿಕರ ನಾಯಕ

ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ತಮ್ಮ ರಾಜಕೀಯ ಜೀವನವನ್ನು ಆರಂಭಿಸಿದ ಕಾ. ಅಬ್ರಹಾಂ ಕರ್ಕಡ ರವರು ಕುಂದಾಪುರದಲ್ಲಿ ಹಂಚು ಕಾರ್ಮಿಕರನ್ನು ಹಾಗೂ ರೈತರನ್ನು ಸಂಘಟಿಸಲು 1960 ರಲ್ಲಿ ಮುಂದಾದರು.

ಕುಂದಾಪುರದಲ್ಲಿ ಒಂದು ಹಂಚಿನ ಕಾರ್ಖಾನೆಯಲ್ಲಿ ಕಾ। ಅಬ್ರಹಾಂ ಕರ್ಕಡ ರವರು ಕೆಲಸಕ್ಕಾಗಿ ಸೇರಿ, ಕಾರ್ಮಿಕರ ಮಧ್ಯೆ ಸಂಘಟನೆ ಕೆಲಸ ಮಾಡಿದ್ದಕ್ಕಾಗಿ ಕೆಲಸ ಕಳಕೊಳ್ಳಬೇಕಾಗಿ ಬಂತು. ಆಡಳಿತ ವರ್ಗ ಅವರನ್ನು ಕೆಲಸದಿಂದ ವಜಾ ಮಾಡಿ, ಸಂಘಟನೆಯಾಗದಂತೆ ಅಡ್ಡಿಪಡಿಸಿದರು. ಕ್ರಾಂತಿಕಾರಿ ಗುಣ ಹೊಂದಿದ್ದ ಅವರು ಹತ್ತಿರದ ಒಂದು ಅಂಗಡಿಯಲ್ಲಿ ಬಾಡಿಗೆಗೆ ಒಂದು ಕೋಣೆ ಪಡೆದು, ಬಟ್ಟೆ ಇಸ್ತ್ರಿ ಮಾಡಿ ಬದುಕು ಸಾಗಿಸುತ್ತ, 4–5 ಕಾರ್ಖಾನೆಗಳಲ್ಲಿ ಕಾರ್ಮಿಕರ ಸಂಪರ್ಕ ಬೆಳೆಯಿಸಿ ಸಂಘಟನೆಯನ್ನು ಬೆಳೆಯಿಸಿದರು. ಸಂಘ ರಚನೆಯಾದ ಬಳಿಕ ಕಾರ್ಮಿಕ ಮುಖಂಡರಾಗಿ, ಯಾವ ಕಾರ್ಖಾನೆಯಲ್ಲಿ ಅವರು ಕೆಲಸದಿಂದ ವಜಾ ಆಗಿದ್ದರೋ ಅದೇ ಕಾರ್ಖಾನೆಯಲ್ಲಿ ಹೋಗಿ ಆಡಳಿತ ವರ್ಗದಿಂದ ಮನ್ನಣೆ ಪಡೆದು, ವಿವಾದಗಳನ್ನು ಇತ್ಯರ್ಥಗೊಳಿಸುವುದರ ಮೂಲಕ ಕುಂದಾಪುರದಲ್ಲಿ ಇತರ ಸಂಗಾತಿಗಳ ಸಹಕಾರ ಪಡೆದು, ಸಂಘಟನೆಯನ್ನು ವಿಸ್ತರಿಸಲು ಶ್ರಮಿಸಿದರು. ಈ ಸಂದರ್ಭ ಮಾಲಕರ ದಬ್ಬಾಳಿಕೆಯನ್ನು ಎದುರಿಸಬೇಕಾಗಿ ಬಂತು.

ಸೌತ್ ಕೆನರಾ ಟ್ಯಾಲ್ ವರ್ಕರ್ಸ್ ಯೂನಿಯನ್‌ನ ಪದಾಧಿಕಾರಿಯಾಗಿ ದ.ಕ.ಜಿಲ್ಲಾ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಕೂಡ ಸಂಘಟನೆಯನ್ನು ವಿಸ್ತರಿಸಲು ಶ್ರಮಿಸಿದರು. ಆರ್ಥಿಕ ಬೇಡಿಕೆಗಳಿಗಾಗಿ ಮುಖ್ಯವಾಗಿ ಕನಿಷ್ಠ ಕೂಲಿ ನಿರ್ಣಯವಾಗಲು ಹಾಗೂ ನಿರ್ಣಯವಾದ ಕನಿಷ್ಠ ಕೂಲಿಯನ್ನು ಜ್ಯಾರಿಗೊಳಿಸಲು ಹೋರಾಟ ಕಾರ್ಯಕ್ರಮಗಳಲ್ಲಿ ನೇತೃತ್ವ ವಹಿಸಿದರು.

ಬೇಡಿಕೆಗಳಿಗಾಗಿ, ವಿವಾದಗಳ ಇತ್ಯರ್ಥಕ್ಕಾಗಿ ಹೆಚ್ಚಿನ ಹಂಚು ಕಾರ್ಖಾನೆಗಳಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ದೀರ್ಘ ಕಾಲದ ಹೋರಾಟ ನಡೆಸುವ ಸಂದರ್ಭ ಬಂತು. ಶ್ರಮ ಭಾರದ ಒಪ್ಪಂದಗಳಿಗಾಗಿ ಕೂಲಿಯ ಹೆಚ್ಚಳಕ್ಕಾಗಿ ನಡೆದ ಹೋರಾಟಗಳಲ್ಲಿ ನಿರ್ಣಾಯಿಕ ಪಾತ್ರ ವಹಿಸಿದ್ದರು.

ಹಂಚು ಕಾರ್ಮಿಕರಿಗೆ ಕನಿಷ್ಠ ಕೂಲಿ ನಿಗದಿಗೊಳಿಸಲು ಸರಕಾರವನ್ನು ಒತ್ತಾಯಿಸಿ 3–4 ಬಾರಿ ಹೋರಾಟದ ಕಾರ್ಯಕ್ರಮ ನಡೆದಿದೆ. ನಿಗದಿಯಾದ ಕನಿಷ್ಠ ಕೂಲಿ ಜ್ಯಾರಿಗೊಳಿಸಲು ಕುಂದಾಪುರದಲ್ಲಿ ದೀರ್ಘ ಕಾಲದ ಹೋರಾಟ ನಡೆದು, ಇತ್ಯರ್ಥವಾಯಿತು. ಈ ಸಂದರ್ಭದಲ್ಲಿ ಕೆಲವು ಮಾಲಕರ ಗೂಂಡಾಗಳಿಂದ ಫೋನ್ ಕರೆ ಬರುತ್ತಿದ್ದು, ಬೆದರಿಕೆ ವಾತಾವರಣ ಇತ್ತು. ಕೆಲವು ಸಂದರ್ಭ ಗೂಂಡಾಗಳನ್ನು ಮುಂದಿಟ್ಟು ಕಾರ್ಮಿಕರನ್ನು ಬೆದರಿಸುವ ಪರಿಸ್ಥಿತಿ ಇತ್ತು. ಸುಸಂಘಟಿತರಾದ ಕಾರ್ಮಿಕರು ಇದೆನ್ನೆಲ್ಲ ಎದುರಿಸಿ ಗ್ರಾಮಾಂತರ ಪ್ರದೇಶಗಳಲ್ಲಿ ರೈತರ ಸಂಘಟನೆಯನ್ನು ಕಟ್ಟಿ ಬೆಳೆಸಲು ಸಹಕರಿಸಿದರು.

ಗೇಣಿದಾರ ರೈತರ ನಾಯಕ

ಹಂಚು ಕಾರ್ಮಿಕರು ಹೆಚ್ಚಿನವರು ಸಣ್ಣ ರೈತ ಕುಟುಂಬಗಳಿಂದ ಬಂದುದರಿಂದ, ಅವರು ಬೆಳೆಯಿಸಿದ ಫಸಲನ್ನು ಮುಖ್ಯವಾಗಿ ಗೇಣಿದಾರರಿಂದ ಧನಿಗಳೇ ಬಂದು ಬಲತ್ಕಾರದಿಂದ ಕಟಾವು ಮಾಡುವ ಪರಿಸ್ಥಿತಿ 1968ರ ನಂತರ ಹೆಚ್ಚಾಗತೊಡಗಿತು. ಕಾ। ಅಬ್ರಹಾಂ ಕರ್ಕಡ ರವರ ಮಾರ್ಗದರ್ಶನದಲ್ಲಿ ಕುಂದಾಪುರದ ಗ್ರಾಮೀಣ ಪ್ರದೇಶಗಳಲ್ಲಿ ರೈತ ಸಂಘಟನೆ ವಿಸ್ತೃತವಾಗಿ ಬೆಳೆದು ಬಂತು.

ಕರ್ನಾಟಕದಲ್ಲಿ ಭೂ ಮಸೂದೆಗೆ ತಿದ್ದುಪಡಿಯೊಂದು ಬಂದು ಗೇಣಿದಾರರಿಗೆ ಅವರ ಭೂಮಿಯ ಒಡೆತನ ಕೊಡಲು, ಭೂ ನ್ಯಾಯ ಮಂಡಳಿಯ ರಚನೆಯಾಯಿತು. ಗೇಣಿದಾರರು ತಮ್ಮ ಭೂಮಿಯ ಸರ್ವೆ ನಂಬ್ರ ಪಡೆಯಲು, ಅರ್ಜಿ ಸಲ್ಲಿಸಲು ಆರಂಭಿಸಿದಾಗ ಧನಿಗಳಿಂದ ವಿರೋಧ ಹಾಗೂ ದಬ್ಬಾಳಿಕೆ ಎದುರಿಸಬೇಕಾಯಿತು. ರೈತ ಸಂಘದ ಮೂಲಕ ಅರ್ಜಿ ಸಲ್ಲಿಸಲಾಯಿತು. ಭೂ ನ್ಯಾಯ ಮಂಡಳಿಯಲ್ಲಿ ಧನಿಗಳ ಪರವಾದ ಸದಸ್ಯರು ಇದ್ದು, ಗೇಣಿದಾರರ ಪರವಾಗಿ ತೀರ್ಪು ನೀಡಲು ಅಡ್ಡಿ ಪಡಿಸಿದರು.

ಕೆದೂರು, ವಳ್ಳೂರು, ಶಿರಿಯಾರ, ಆನಗಳ್ಳಿ, ಬಸ್ರೂರು, ಕೋಣಿ, ಕಾವ್ರಾಡಿ, ಕರ್ಕುಂಜೆ, ಕೆರಾಡಿ, ಬೆಳ್ಳಾಲ್ ಮತ್ತು ಅಂಪಾರ್ ಇಂತಹ ಗ್ರಾಮೀಣ ಪ್ರದೇಶಗಳಲ್ಲಿ ಗೇಣಿದಾರರನ್ನು ಬೆದರಿಸಿ, ಅವರು ಬಿತ್ತು, ಉತ್ತು ಬೆಳೆಯಿಸಿದ ಫಸಲನ್ನು ಬಲತ್ಕಾರದಿಂದ ಗೂಂಡಾಗಳ ಮೂಲಕ ಕೊಂಡೊಯ್ಯಲು ಆರಂಭವಾದಾಗ, ಸಂಘದ ನೇತೃತ್ವದಲ್ಲಿ ಎದುರಿಸಲಾಯಿತು. ಹಲವು ಪ್ರದೇಶಗಳಲ್ಲಿ ಘರ್ಷಣೆಗಳಾದವು. ಹಲವು ಕಾರ್ಯಕರ್ತರ ಮೇಲೆ ಕೇಸುಗಳನ್ನು ದಾಖಲು ಮಾಡಿ, ಹಲವು ವರ್ಷಗಳವರೆಗೆ ಕೋರ್ಟಿಗೆ ಅಲೆದಾಡುವ ಪರಿಸ್ಥಿತಿ ಬಂತು.

ಒಕ್ಕಲೆಬ್ಬಿಸುವುದರ ವಿರುದ್ಧ ಹೋರಾಟ

ಕೋಣಿಯಲ್ಲಿ ಫರಂಗಿಮನೆ ಎಂಬಲ್ಲಿ ಒಕ್ಕಲೆಬ್ಬಿಸುವ ಸಂದರ್ಭ ನಡೆದ ಘರ್ಷಣೆ, ಬೆಳೆದ ಫಸಲನ್ನು ಬಲತ್ಕಾರದಿಂದ ಕೊಂಡು ಹೋಗುವಾಗ ನಡೆದ ಪ್ರತಿಭಟನೆ, ಕೆರಾಡಿ ಮತ್ತು ಬೆಳ್ಳಾಲ್‌ದಲ್ಲಿ ರೈತರ ಮೇಲಿನ ದಬ್ಬಾಳಿಕೆ, ಅರ್ಜಿ ಸಲ್ಲಿಸಲು ಅಡ್ಡಿಪಡಿಸಿದಾಗ ನಡೆದ ಪ್ರತಿಭಟನೆಗಳಿಂದಾಗಿ ಧನಿಗಳು ಮಾತುಕತೆಗೆ ಬಂದು ಗೇಣಿದಾರರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಯಿತು. ಈ ಎಲ್ಲಾ ಹೋರಾಟಗಳಲ್ಲಿ ಕಾ। ಅಬ್ರಹಾಂ ಕರ್ಕಡರವರ ಮಾರ್ಗದರ್ಶನ ಇತ್ತು. ಸಂಘಟನೆ ಮತ್ತು ಹೋರಾಟಗಳಿಂದ ಗೇಣಿದಾರರ ಭೂಮಿಯ ಹಕ್ಕು ಪತ್ರ ಸಿಕ್ಕಿದಂತಾಗಿದೆ. ಈ ಹೋರಾಟಗಳಲ್ಲಿ ಕೋಣಿಯಲ್ಲಿ ಫರಂಗಿಮನೆ ಎಂಬಲ್ಲಿ ಒಕ್ಕಲೆಬ್ಬಿಸುವ ಸಂದರ್ಭದ ಸಮರಶೀಲ ಹೋರಾಟ ಒಂದು ಪ್ರಮುಖ ತಿರುವಾಗಿತ್ತು. ಈ ಬಗ್ಗೆ ಹಿಂದೆ “ಐಕ್ಯರಂಗ” ವಾರಪತ್ರಿಕೆಯಲ್ಲಿ ಪ್ರಕಟವಾದ ಬರಹದಲ್ಲಿ ಕಾ. ಕರ್ಕಡ ಅವರ ಮಾತುಗಳಲ್ಲೇ ಇದನ್ನು ಓದಬಹುದು. ಅದರ ಭಾಗವನ್ನು ಇಲ್ಲಿ ಬಾಕ್ಸ್ ನಲ್ಲಿ ಕೊಡಲಾಗಿದೆ. ಈ ಪ್ರಕರಣದಲ್ಲಿ ಒಕ್ಕಲೆಬ್ಬಿಸುವ ಪ್ರಯತ್ನದಲ್ಲಿ ದೌರ್ಜನ್ಯಕ್ಕೆ ಒಳಗಾಗಿದ್ದ ಅನಂತ ಪೂಜಾರಿ ಕಾಕತಾಳೀಯವೋ ಎಂಬಂತೆ ಕಾ. ಕರ್ಕಡ ನಿಧನರಾದ ಮರುದಿನ ನಿಧನರಾದ ಸುದ್ದಿ ಬಂದಿದೆ.

1986 ರಲ್ಲಿ ಆನಗಳ್ಳಿಯಲ್ಲಿ ದಲಿತರ ಮೇಲಿನ ದಬ್ಬಾಳಿಕೆ, ಭೂಮಿಯನ್ನು ಕಬಳಿಸಲು ಮಾಡಿದ ಪಿತೂರಿಯನ್ನು ನಿರಂತರ ಪ್ರತಿಭಟನೆ ಮತ್ತು ಹೋರಾಟದಲ್ಲಿ ಭೂಮಿಯನ್ನು ಉಳಿಸಲು ಸಾಧ್ಯವಾಯಿತು.

ಕಾರ್ಮಿಕರ ಸಂಘಟಿತ ಹೋರಾಟ ಹಾಗೂ ಗ್ರಾಮೀಣ ಪ್ರದೇಶದಲ್ಲಿ ರೈತರ ಹೋರಾಟದ ಪ್ರಭಾವದಿಂದಾಗಿ, ಪಕ್ಷದ ಪ್ರಭಾವ ಹೆಚ್ಚಾಗುವುದನ್ನು ತಡೆಯಲು ಭೂ ಮಾಲಕರು ಮತ್ತು ಅವರ ಗೂಂಡಾಗಳು ಬಸ್ರೂರಿನಲ್ಲಿ ರೈತ–ಕಾರ್ಮಿಕರ ಮೆರವಣಿಗೆಯ ಮೇಲೆ ದಾಳಿ ಮಾಡಲಾಯಿತು. ಪೋಲಿಸ್‌ರಿಂದ ದಬ್ಬಾಳಿಕೆ ನಡೆಸಲು ಪಿತೂರಿ ಮಾಡಲಾಯಿತು.

ಇಂತಹ ಪರಿಸ್ಥಿತಿಯಲ್ಲಿ ಧೈರ್ಯದಿಂದ ಕಾ। ಅಬ್ರಹಾಂ ಕರ್ಕಡ್‌ರವರು ಹಾಗೂ ಕುಂದಾಪುರ

ಪುಟ 6 ಕ್ಕೆ



ಅವತ್ತು ಬಸ್ರೂರಲ್ಲಿ ನಮ್ಮ ರಕ್ತ ಬಿದ್ದಿತ್ತು .. .. . ಭೂಮಾಲಕರ ಸದ್ದೂ ಅಡಗಿತ್ತು

(ಐಕ್ಯರಂಗ 1998 ವಿಶೇಷಾಂಕದಿಂದ)

ಸುಮಾರು 1968–69ರಲ್ಲಿ ಕುಂದಾಪುರದ ಒಕ್ಕಲೆಬ್ಬಿಸುವುದರ ವಿರುದ್ಧ ಹೋರಾಟದಲ್ಲಿ ಗಮನಾರ್ಹ ತಿರುವು ಕೊಟ್ಟ ಬಸ್ರೂರು ಎಂಬಲ್ಲಿ ನಡೆದ ಇಂತಹ ಘಟನೆ ಬಗ್ಗೆ ಕಾಮ್ರೇಡ್ ಅಬ್ರಹಾಂ ಕರ್ಕಡ ಹೇಳುತ್ತಾರೆ:

“..ಕೋಣಿ ಫರಂಗಿಮನೆಯ ಅನಂತ ಪೂಜಾರಿ ಅವರ ಕುಟುಂಬದ ಒಕ್ಕಲೆಬ್ಬಿಸುವುದರ ವಿರುದ್ಧ ಕೋರ್ಟು ಇಂಜಕ್ಷನ್ ಇದ್ದರೂ, ರೈತ ಸಂಘದ ಕಾರ್ಯಕರ್ತರು ಹಂಚು ಕಾರ್ಮಿಕರು ರಕ್ಷಣೆ ಕೊಟ್ಟು ನೆಟ್ಟದ್ದು, ಕುಯ್ಲು ಮಾಡಿದ್ದು ಭೂಮಾಲಕರ ಕಣ್ಣು ಕೆಂಪು ಮಾಡಿತ್ತು. ಅನಗಳ್ಳಿಯಲ್ಲಿ ಗೋವಿಂದ ಎಂಬ ದಲಿತ ಕುಟುಂಬ ಒಕ್ಕಲು ಏಳದ್ದಕ್ಕೆ ಲಾಕಪ್ಪಿಗೆ ಹಾಕಿದಾಗ, ಮೂರು ಸಾವಿರ ರೈತ–ಕಾರ್ಮಿಕರು ಮುತ್ತಿಗೆ ಹಾಕಿದ್ದರು. ಭೂಮಾಲಕರು ಸುಮ್ಮನೆ ಕುಳಿತುಕೊಳ್ಳಲಿಲ್ಲ. ‘ಕಟ್ಟೆಮಾರ್ ರತ್ನಾಕರ ಸೇನೆ’ ಎಂಬ ಗೂಂಡಾ ಪಡೆ ಕಟ್ಟಿದರು. ಸಂಕಪ್ಪ ಶೆಟ್ಟಿ ಎಂಬವರ ಕೊಲೆ ಮಾಡಿದರು. ಅವರಿಗೆಲ್ಲಾ ಒಂದು ಬಿಳಿ ನಾಮ! ನಾವೂ ಸ್ವಯಂ–ಸೇವಾ ಪಡೆ ಕಟ್ಟಿದೆವು.

ಭೂಮಾಲಕರ ದಬ್ಬಾಳಿಕೆ ವಿರುದ್ಧ ರೈತಸಂಘದಿಂದ ಬಸ್ರೂರು ಪೇಟೆಯಲ್ಲಿ ಸಭೆ ಮಾಡಿದೆವು. ರೈತರು ಮೆರವಣಿಗೆಯಲ್ಲಿ ಬಂದು ಸಭೆ ಆರಂಭವಾಯಿತು. ಮಾಸ್ತ್ರು (ಪಿ.ರಾಮಚಂದ್ರ ರಾವ್) ಭಾಷಣ ಶುರು ಮಾಡಿದರು. ಬಿಳಿ ನಾಮದ ಸೇನೆ ಬಂತು. ಸಭೆಯಲ್ಲಿ ಕೂತವರ ಮೇಲೆ ಕಲ್ಲು ಬಿಸಾಡಲು ಶುರು ಮಾಡಿದರು. ಒಂದು ಬಾರಿ ರೈತರನ್ನು ಚದುರಿಸಿಯೇ ಬಿಟ್ಟರು. ಆದರೆ ನಮ್ಮ ಕೆಲವು ಕಾರ್ಯಕರ್ತರು ‘ಮಾಸ್ತ್ರೆ, ನಿಮ್ಮ ಭಾಷಣ ನಿಲ್ಲಿಸಬೇಡಿ, ನಮ್ಮ ರಕ್ತ ಹೆಣ ಬಿದ್ದರೂ ಸರಿಯೇ. ಇವತ್ತು ನೋಡೇಬಿಡೋಣ’ ಎಂದರು. ಅವರ ಕಲ್ಲು ಕ್ಯಾಚ್ ಹಿಡಿದು ವಾಪಸು ಬಿಸಾಡಲು ಶುರು ಮಾಡಿದರು.

ಮಾಸ್ತ್ರ ಭಾಷಣ ನಡೀತಾನೇ ಇತ್ತು. ಚದುರಿದ ರೈತರು ಪುನಃ ಕೂತರು. ಸೇನೆಯವರಲ್ಲಿ ಸ್ವಲ್ಪ ಗಲಿಬಿಲಿ ಆಯಿತು. ಆದರೂ ಕಲ್ಲು ನಿಲ್ಲದಿದ್ದಾಗ ತರಬೇತಿ ಪಡೆದ ನಮ್ಮ ಸ್ವಯಂಸೇವಕರು ಕೆಂಬಾವುಟ ಕಟ್ಟಿ ತಂದಿದ್ದ ಸೋಟೆ (ದೊಣ್ಣೆ) ಬೀಸಲು ಶುರು ಮಾಡಿದಾಗ ಕಲ್ಲು ವೇಗವಾಗಿ ವಾಪಸು ಸೇನೆಯ ಗೂಂಡಾಗಳ ಮೇಲೆ ಬೀಳಲು ಶುರುವಾಯಿತು. ಗೂಂಡಾಗಳಿಗೂ ಸಾಕಷ್ಟು ಗಾಯವಾಯಿತು. ಈಗ ಅವರಿಗೆ ಭಯವಾಗಿ ಓಡಲು ಶುರುಮಾಡಿದರು. ಅವತ್ತು ಬಸ್ರೂರಲ್ಲಿ ನಮ್ಮ ರಕ್ತ ಬಿದ್ದಿತ್ತು. ಆದರೂ ಮಾಸ್ತ್ರ ಭಾಷಣ ನಿಲ್ಲಲು ಬಿಡಲಿಲ್ಲ. ಭೂಮಾಲಕರ ಸದ್ದಡಗಿತ್ತು..”

●



ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತೆ ಕಾಯಿದೆಯ ನ್ಯೂನತೆಗಳು

ನ್ಯಾ.ಹೆಚ್.ಎನ್. ನಾಗಮೋಹನ ದಾಸ್

ಭಾರತ ದೇಶದ ಒಟ್ಟು ಜನಸಂಖ್ಯಾ ಸುಮಾರು 128 ಕೋಟಿಯೆಂದು ಅಂದಾಜಿಸಲಾಗಿದೆ. ಇವರ ಪೈಕಿ ಸುಮಾರು 55 ಕೋಟಿ ದುಡಿಯುವ ವರ್ಗದವರು ಎಂದು ಹೇಳಲಾಗಿದೆ. ಇವರಲ್ಲಿ ಕೇವಲ ಶೇ. 10 ರಷ್ಟು ಸಂಘಟಿತ ವಲಯದಲ್ಲಿ ದುಡಿಯುತ್ತಿದ್ದರೆ, ಉಳಿದ ಶೇ. 90ರಷ್ಟು ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ. ಅಸಂಘಟಿತ ವಲಯದಲ್ಲಿ ದುಡಿಯುವ ಕಾರ್ಮಿಕರಿಗೆ ಕನಿಷ್ಟ ವೇತನ ನೀಡುತ್ತಿಲ್ಲ. ಒಪ್ಪಿಕೊಂಡ ವೇತನವನ್ನೂ ಸಹ ಸರಿಯಾದ ಸಮಯಕ್ಕೆ ಕೊಡುತ್ತಿಲ್ಲ. ಅವರ ಕೆಲಸದ ವೇಳೆ ಮತ್ತು ಅವಧಿಯನ್ನು ಸರಿಯಾಗಿ ನಿಯಂತ್ರಿಸುತ್ತಿಲ್ಲ. ಅವರ ಹೆಚ್ಚಿನ ಕೆಲಸಕ್ಕೆ ಹೆಚ್ಚಿನ ವೇತನ (ಓವರ್ ಟೈಮ್ ವೇಜಸ್) ನೀಡುತ್ತಿಲ್ಲ. ಅವರು ತುಂಬಾ ಅಪಾಯಕಾರಿಯಾದ ಸನ್ನಿವೇಶಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸುರಕ್ಷಿತ ಕ್ರಮಗಳನ್ನು ತೆ-ಗೆದು ಕೊಳ್ಳಲಾಗುತ್ತಿಲ್ಲ. ಅಫಘಾತ ಸಂಭವಿಸಿದಾಗ ಆರ್ಥಿಕ ಸಹಾಯ ಹಾಗೂ ವೈದ್ಯಕೀಯ ಸಹಾಯ ದೊರೆಯುತ್ತಿಲ್ಲ. ಸಾವು ಸಂಭವಿಸಿದಾಗ ಅದಕ್ಕೆ ಯಾರೂ ಹೊಣೆ ಹೊರುತ್ತಿಲ್ಲ.

ಇವರಿಗೆ ಮನರಂಜನಾ ಸವಲತ್ತುಗಳು, ಕುಡಿಯುವ ನೀರು, ಉಪಹಾರ (ಕ್ಯಾಂಟಿನ್), ಶೌಚಾಲಯಗಳು ಅಲಭ್ಯ. ಮಹಿಳಾ ಕಾರ್ಮಿಕರ ಸಮಸ್ಯೆಗಳು ಇನ್ನೂ ಹೆಚ್ಚು ಗಂಭೀರವಾದವುಗಳಾಗಿವೆ. ಈ ಕಾರ್ಮಿಕರು ಮತ್ತು ಅವರ ಮಕ್ಕಳಿಗೆ ಸಾಮಾಜಿಕ ಭದ್ರತೆಯ ಸವಲತ್ತುಗಳಾದ ಪಿಂಚಣಿ, ವಿಮಾ ಯೋಜನೆಗಳು, ಹೆರಿಗೆ ರಜೆ, ಅಪಘಾತದಿಂದಾಗಿ ಮೃತರಾದಾಗ ನಷ್ಟ ಪರಿಹಾರ, ರಿಯಾಯಿತಿ ದರದಲ್ಲಿ ಸಾಲ, ಶೈಕ್ಷಣಿಕ ಹಾಗು ವೈದ್ಯಕೀಯ ಅಗತ್ಯಗಳನ್ನು ಪೂರೈಸುತ್ತಿಲ್ಲ. ಒಟ್ಟಾರೆ ಯಾವುದೆ ಕಾನೂನಿನ ರಕ್ಷಣೆ ಇಲ್ಲ.

ಅಸಂಘಟಿತ ಕಾರ್ಮಿಕರಿಗೆ ಕಾನೂನು ಇರಲಿಲ್ಲ

ಅಸಂಘಟಿತ ಕಾರ್ಮಿಕರ ಒಂದು ಭಾಗ ಕಟ್ಟಡ ಕಾರ್ಮಿಕರು. ದೇಶದಲ್ಲಿ ಸುಮಾರು 4.4 ಕೋಟಿ ಕಟ್ಟಡ ಕಾರ್ಮಿಕರಿದ್ದಾರೆಂದು ಅಂದಾಜಿಸಲಾಗಿದೆ. ಧೀರ್ಘಕಾಲದ ಹೋರಾಟಗಳ ನಂತರ ಭಾರತ ಸರ್ಕಾರ 1996 ರಲ್ಲಿ "ಕಟ್ಟಡ ಹಾಗೂ ಇತರ ನಿರ್ಮಾಣ ಕಾರ್ಯದ ಕಾರ್ಮಿಕರ (ಉದ್ಯೋಗ ನಿಯಂತ್ರಣ ಹಾಗೂ ಸೇವಾ ಷರತ್ತುಗಳ) ಕಾಯಿದೆ"ಯನ್ನು ಜಾರಿಗೆ ತಂದಿತು. ಆದರೆ ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಇತರೆ 40 ಕೋಟಿ ಕಾರ್ಮಿಕಗಾಗಿ ಯಾವುದೆ ಕಾನೂನು ತರಲಿಲ್ಲ. ಬದಲಾಗಿ ಕೆಲವು ಯೋಜನೆಗಳನ್ನು ತರಲಾಯಿತು ಅವುಗಳೆಂದರೆ.

1) ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ
2) ರಾಷ್ಟ್ರೀಯ ಕುಟುಂಬ ನೆರವು ಯೋಜನೆ
3) ಜನನಿ ಸುರಕ್ಷಾ ಯೋಜನೆ
4) ಕೈ ಮಗ್ಗ ನೇಕಾರರಿಗೆ ಸಮಗ್ರವಾದ ಕಲ್ಯಾಣ ಯೋಜನೆ
5) ಕರಕುಶಲ ಕಾರ್ಮಿಕರ ಸಮಗ್ರವಾದ ಕಲ್ಯಾಣ ಯೋಜನೆಗಳು
6) ರಾಜೀವ್‌ಗಾಂಧಿ ಶಿಲ್ಪಿ ಸ್ವಾಸ್ಥ್ಯ ಭೀಮಾ ಯೋಜನೆ
7) ಮೀನುಗಾರರ ಕ್ಷೇಮಾಭಿವೃದ್ಧಿಗೆ ರಾಷ್ಟ್ರೀಯ ಕಲ್ಯಾಣ ಯೋಜನೆ
8) ಜನಶ್ರೀ ಬೀಮಾ ಯೋಜನೆ
9) ಆಮ್ ಆದ್ಮಿ ಬೀಮಾ ಯೋಜನೆ
10) ರಾಷ್ಟ್ರೀಯ ಸ್ವಾಸ್ಥ್ಯ ಬೀಮಾ ಯೋಜನೆ

ಈ ಮೇಲ್ಕಂಡ ಯೋಜನೆಗಳನ್ನು ವಿವಿಧ ಇಲಾಖೆಗಳು ಜಾರಿ ಮಾಡುತ್ತವೆ. ಕೆಲವು ಯೋಜನೆಗಳನ್ನು ಹಲವು ರಾಜ್ಯ ಸರ್ಕಾರಗಳು ಜಾರಿಗೊಳಿಸುತ್ತಿಲ್ಲ. ಫಲಾನುಭವಿಗಳಿಗೆ ವಿವಿಧ ರೀತಿಯ ಮಾನದಂಡಗಳನ್ನು ವಿಧಿಸಲಾಗಿದೆ. ಹಣದ ಕೊರತೆ, ಇಚ್ಛಾಶಕ್ತಿಯ ಕೊರತೆ, ಕ್ಲಿಷ್ಟಕರವಾದ ಪ್ರಕ್ರಿಯೆ ಇತ್ಯಾದಿಗಳ ಕಾರಣಗಳಿಂದ ಅರ್ಹ ಫಲಾನುಭವಿಗಳಿಗೆ ಈ ಯೋಜನೆಗಳ ಅನುಕೂಲಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ.

ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯಿದೆ 2008

ಅಸಂಘಟಿತ ಕಾರ್ಮಿಕರ ಜೀವನ ಮಟ್ಟವನ್ನು ಉತ್ತಮಪಡಿಸಿ ಅವರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸಲು ದೇಶದ ಅನೇಕ ಕಾರ್ಮಿಕ ಸಂಘಗಳು, ಸ್ವಯಂ-ಸೇವಾ ಸಂಸ್ಥೆಗಳು ಮತ್ತು ಪ್ರಗತಿಪರರು ನಡೆಸಿದ ಹೋರಾಟಗಳ ಪರಿಣಾಮವಾಗಿ ಕೇಂದ್ರ ಸರ್ಕಾರ 2008 ರಲ್ಲಿ "ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯಿದೆ"ಯನ್ನು ಜಾರಿಗೆ ತಂದಿತು. ಮುಂದುವರಿದು ಕರ್ನಾಟಕ ರಾಜ್ಯ ಸರ್ಕಾರ 2009 ರಲ್ಲಿ ಅಸಂಘಟಿತ ಕಾಮಿಕರ ಸಾಮಾಜಿಕ ಭದ್ರತಾ (ಕರ್ನಾಟಕ) ನಿಯಮಗಳನ್ನು ಜಾರಿಗೆ ತಂದಿದೆ. ಕೇಂದ್ರ ಸರ್ಕಾರ ರೂಪಿಸಿರುವ ನಿಯಮಗಳಲ್ಲಿ ಅನೇಕ ನ್ಯೂನತೆಗಳಿವೆ.

ಈ ಕಾಯಿದೆಯಲ್ಲಿ ಅಸಂಘಟಿತ ಕಾರ್ಮಿಕರಿಗೆ ಜಾರಿಗೊಳಿಸಬಹುದಾದ ಹಕ್ಕನ್ನು ನೀಡಿಲ್ಲ. ರಾಜ್ಯ ಸರ್ಕಾರಗಳು ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕೆ ಯೋಜನೆಗಳನ್ನು ರೂಪಿಸಬಹುದೆಂದು ಮಾತ್ರ ಸೂಚಿಸುತ್ತದೆ. ದೇಶದ ಎಲ್ಲಾ ಅಸಂಘಟಿತ ಕಾರ್ಮಿಕರನ್ನು ಕಾಯಿದೆಯ ಅಡಿಯಲ್ಲಿ ತರುವಂತಹ ಪ್ರಯತ್ನ ನಡೆದಿಲ್ಲ ಮತ್ತು ಕಾಲಮಿತಿಯಲ್ಲಿ ತರಬೇಕೆಂದು ಸೂಚಿಸುವುದಿಲ್ಲ. ಕಾಯಿದೆಯಲ್ಲಿ ಸೂಚಿಸಿರುವ ಸೂಕ್ತಿಗಳ ಪ್ರಕಾರ ಅನೇಕ ಅಸಂಘಟಿತ ಕಾರ್ಮಿಕರು ಈ ಕಾನೂನಿಂದ ಹೊರಗುಳಿಯುತ್ತಾರೆ. ಯೋಜನೆಗಳ ಜಾರಿಗೆ ಆರ್ಥಿಕ ಶಕ್ತಿಯನ್ನು ಕೂಡಿಸಿಕೊಳ್ಳಲು ಯಾವ ಸೂಚನೆಯನ್ನೂ ನೀಡಿಲ್ಲ. ಏಕ ಗವಾಕ್ಷಿಯಲ್ಲಿ ಸವಲತ್ತುಗಳನ್ನು ಪಡೆಯಲು ಸೂಚಿಸಿಲ್ಲ. ಹತ್ತು ಯೋಜನೆಗಳನ್ನು ಕಾಯ್ದೆಯ ಅಡಿಯಲ್ಲಿ ತಂದಿದ್ದರೂ ಸಹ ಕಾರ್ಮಿಕರು ವಿವಿಧ ಇಲಾಖೆಗಳಿಂದ ಸವಲತ್ತುಗಳನ್ನು ಪಡೆಯಬೇಕಾಗಿದೆ. ಈ ವಿವಿಧ ಇಲಾಖೆಗಳ ಮೇಲೆ ಕಾಯಿದೆಯ ಅಡಿಯಲ್ಲಿ ಸ್ಥಾಪನೆಯಾಗಿರುವ ಮಂಡಳಿಯು ತನ್ನ ಅಧಿಕಾರವನ್ನು ಚಲಾಯಿಸುವಂತಿಲ್ಲ.

ಅಸಂಘಟಿತ ಕಾರ್ಮಿಕರಿಗೆ ಮುಖ್ಯವಾಗಿ ಬೇಕಾಗಿರುವುದು ದುಡಿಮೆಗೆ ಸಮಾನವಾದ ವೇತನ, ಆರೋಗ್ಯ ಸೇವೆ, ನಿವೃತ್ತ ಜೀವನ ನಡೆಸಲು ಪಿಂಚಣಿ ಮತ್ತು ತಮ್ಮ ಮಕ್ಕಳಿಗೆ ಶಿಕ್ಷಣ. ಈ ಕನಿಷ್ಟ ಅವಶ್ಯಕತೆಗಳನ್ನು ನೀಡುವ ಪ್ರಯತ್ನ ಸಾಮಾಜಿಕ ಭದ್ರತೆ ಕಾಯಿದೆಯಲ್ಲಿ ನಡೆದಿಲ್ಲ. ನೆಪಮಾತ್ರಕ್ಕೆ ಕಾಯಿದೆ ತಂದರೆ ಸಾಲದು. ಪರಿಣಾಮಕಾರಿಯಾಗಿ ಜಾರಿಗೊಳಿಸಬಹುದಾದ ಕಾಯಿದೆಯನ್ನು ತರಬೇಕು. ಜಾರಿ ಮಾಡಲು ಸಾಧ್ಯವಾಗದ ಕಾನೂನುಗಳನ್ನು ತರುವುದು ಸರ್ಕಾರಕ್ಕೆ ಹೆಚ್ಚು ವಿನಾಶಕಾರಿಯಾದದ್ದು ಮತ್ತು ಅವಮಾನಕರವಾದದ್ದು.

ಕಾಯಿದೆ ಉತ್ತಮಪಡಿಸಲು ಹಕ್ಕೊತ್ತಾಯಗಳು

"ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ವೇದಿಕೆ" ಇತ್ತೀಚೆಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಾನು ಭಾಗಿಯಾಗಿದ್ದೆ. ಈ ಸಭೆಯಲ್ಲಿ ಈ ಕೆಳಕಂಡ ಹಕ್ಕೊತ್ತಾಯಗಳನ್ನು ಮಂಡಿಸಲು ತೀರ್ಮಾನಿಸಲಾಯಿತು.

1) ಅಸಂಘಟಿತ ಕಾರ್ಮಿಕ ಕ್ಷೇತ್ರದ ಕಾರ್ಮಿಕರ ನೊಂದಣಿಗೆ ತಕ್ಷಣ ಕ್ರಮಕೈಗೊಳ್ಳಬೇಕು.
2) ಕಾರ್ಮಿಕರು ಸ್ವಯಂಘೋಷಿತ ಪ್ರಮಾಣ ಪತ್ರದ ಮೂಲಕವೇ ನೊಂದಣಿ ಮಾಡಿಸಿಕೊಳ್ಳಲು ಅವಕಾಶ ಕಲ್ಪಿಸಬೇಕು.
3. ಪ್ರದೇಶ ಆಧಾರಿತ ಹಾಗೂ ಕ್ಷೇತ್ರ ಆಧಾರಿತ ನೊಂದಣಿ ಮಾಡಿಸಬೇಕು.
4. ಕಾರ್ಮಿಕರ ಕುಂದುಕೊರತೆಗಳ ಪರಿಹಾರಕ್ಕಾಗಿ ಏಕಗವಾಕ್ಷಿ ವ್ಯವಸ್ಥೆಯ ಸೇವಾ ಕೇಂದ್ರಗಳನ್ನು ಸ್ಥಾಪಿಸಬೇಕು.
5. ಕಾರ್ಮಿಕರ ಕುಟುಂಬಗಳಿಗೆ ವೈದ್ಯಕೀಯ ಸೌಲಭ್ಯ ಕಲ್ಪಿಸಬೇಕು.
6. ಕರ್ನಾಟಕ ಕಟ್ಟಡ ನಿರ್ಮಾಣ ಕಾರ್ಮಿಕರ ಕಲ್ಯಾಣ ನಿಧಿಯ ಮಾದರಿಯಲ್ಲೇ ಅಸಂಘಟಿತ ಕಾರ್ಮಿಕರ ಮಂಡಳಿಯ ಯೋಜನೆಗಳನ್ನು ರೂಪಿಸಬೇಕು.

ಈಗ ಜಾರಿಯಲ್ಲಿರುವ ಕಾಯಿದೆ ಮತ್ತು ನಿಯಮಗಳಲ್ಲಿ ಅನೇಕ ನ್ಯೂನತೆಗಳು ಇವೆ. ತಜ್ಞರ ಸಮಿತಿಯನ್ನು ರಚಿಸಿ ಸಲಹೆಗಳನ್ನು ಪಡೆದು ಕಾಯಿದೆಗೆ ಸೂಕ್ತ ತಿದ್ದುಪಡಿಗಳನ್ನು ತಂದು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕಾಗಿದೆ. ಅಸಂಘಟಿತ ಕಾರ್ಮಿಕರ ಜೀವನ ಮಟ್ಟ ಉತ್ತಮಗೊಂಡರೆ ಮಾತ್ರ ಹೆಚ್ಚಿನ ಅಭಿವೃದ್ಧಿಯನ್ನು ಸಾಧಿಸಬಹುದು. ಶೇ.20ರಷ್ಟು ಜನರ ಅಭಿವೃದ್ಧಿ ದೇಶದ ಜನತೆಯ ಅಭಿವೃದ್ಧಿಯೆನ್ನಲು ಸಾಧ್ಯವೇ? ●

ಕಾಮ್ರೇಡ್ ಅಬ್ರಹಾಂ ಕರ್ಕಡ ಪುಟ 5 ರಿಂದ

ತಾಲೂಕು ಪಕ್ಷದ ಮುಖಂಡರು ಎದುರಿಸಿದರು.

ಹಂಚು ಕಾರ್ಮಿಕನಿಂದ ಸಿಪಿಐ(ಎಂ) ರಾಜ್ಯ ನಾಯಕನ ವರೆಗೆ

ಅವರು ಕುಂದಾಪುರದ ಹಂಚು ಕಾರ್ಮಿಕರ ಸಂಘಟನೆಯಿಂದ ಆರಂಭಿಸಿ ಜಿಲ್ಲಾ-ರಾಜ್ಯ ಮಟ್ಟದ ರೈತ-ಕಾರ್ಮಿಕರ ಜನತೆಯ ನಾಯಕರಾಗಿ ಬೆಳೆದರು. ಅವರು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ರೈತ ಸಂಘದ ಜಿಲ್ಲಾ ನಾಯಕರಾಗಿದ್ದು ಸತತವಾಗಿ 1960ರ ದಶಕದಿಂದ ಕಳೆದ ದಶಕದ ವರೆಗೆ ಜಿಲ್ಲಾ ಸಮಿತಿಯ ಸದಸ್ಯರಾಗಿದ್ದು, ಹಲವು ಅವಧಿಗಳ ವರೆಗೆ ದ.ಕ. ಜಿಲ್ಲಾ ಸಂಘದ ಅಧ್ಯಕ್ಷರಾಗಿದ್ದರು. ಕರ್ಕಡ ಅವರು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ನಾಯಕತ್ವದ ಭಾಗವಾಗಿದ್ದು ರಾಜ್ಯ ಉಪಾಧ್ಯಕ್ಷರಾಗಿದ್ದರು.

ಅವರು ಕುಂದಾಪುರದಲ್ಲಿ ಜನಪ್ರಿಯ ರಾಜಕೀಯ ನಾಯಕರಾಗಿದ್ದು ಸತತವಾಗಿ 4 ಬಾರಿ ನಗರಸಭೆಯ ಸದಸ್ಯರಾಗಿ ಚುನಾಯಿತರಾಗಿದ್ದರು. ಒಂದು ಅವಧಿಯಲ್ಲಿ ನಗರಸಭೆಯ ಉಪಾಧ್ಯಕ್ಷರಾಗಿದ್ದರು. ಅವಿಭಜಿತ ದ.ಕ.ಜಿಲ್ಲೆಯಲ್ಲಿ ಸಿಪಿಐ(ಎಂ)ನ ಸ್ಥಾಪಕ ಸದಸ್ಯರಾಗಿದ್ದ ಕರ್ಕಡ ಅವರು ದೀರ್ಘ ಕಾಲ ಕುಂದಾಪುರ ತಾಲೂಕು ಕಾರ್ಯದರ್ಶಿಯಾಗಿದ್ದರು. ಅವರು ಸಿಪಿಐ(ಎಂ) ಅವಿಭಜಿತ ದ.ಕ. ಜಿಲ್ಲಾ ಮತ್ತು ಮುಂದೆ ರಾಜ್ಯ ನಾಯಕತ್ವದ ಭಾಗವಾಗಿದ್ದರು. ಅವರು 1960ರ ದಶಕದಿಂದ 2012 ವರೆಗೆ ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿಯ ಸದಸ್ಯರಾಗಿಯೂ, ಹಲವು ಅವಧಿಗಳವರೆಗೆ ಸೆಕ್ರೆಟಾ-ರಿಯಟ್ ಸದಸ್ಯರಾಗಿಯೂ ಇದ್ದರು. ಕರ್ಕಡ 12ನೇ ರಾಜ್ಯ ಸಮ್ಮೇಳನದಲ್ಲಿ (1985) ರಾಜ್ಯ ಸಮಿತಿಯ ಸದಸ್ಯರಾಗಿ ಆಯ್ಕೆಯಾಗಿದ್ದು 2002 ವರೆಗೆ ಪಕ್ಷದ ರಾಜ್ಯ ನಾಯಕತ್ವದ ಭಾಗವಾಗಿದ್ದರು.

ರೈತ-ಕಾರ್ಮಿಕರ ಸಂಘಟನೆ, ಹೋರಾಟ, ಐಕ್ಯ ಹೋರಾಟ ಮತ್ತು ಕೋಮು ಸೌಹಾರ್ದತೆಗಾಗಿ ನಡೆದ ಕಾರ್ಯಕ್ರಮಗಳಲ್ಲಿ ಕಾಮ್ರೇಡ್ ಅಬ್ರಹಾಂ ಕರ್ಕಡ್‌ರವರ ಪಾತ್ರ ಮುಖ್ಯವಾಗಿತ್ತು. ಅವರ ರಾಜಕೀಯ ಜೀವನದಲ್ಲಿ ಹೊಂದಿದ ಸಾಮಾಜಿಕ ಬದಲಾವಣೆಯ ಭಾಗವಾಗಿ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ವಿಷಯಗಳ ಸುತ್ತ ನಡೆಸುತ್ತಾ ಬಂದಂತಹ ಹೋರಾಟವನ್ನು, ಇನ್ನೂ ವಿಸ್ತೃತವಾಗಿ ನಡೆಸುವುದರ ಮೂಲಕ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳನ್ನು ಬಲಗೊಳಿಸಲು ಶ್ರಮಿಸುವುದೇ ಅವರಿಗೆ ಸಲ್ಲಿಸುವ ಶ್ರದ್ಧಾಂಜಲಿ. ●

ಪರಿಷ್ಕೃತ ದರದಲ್ಲಿ ವೇತನ ನೀಡಲು ಆಗ್ರಹ



2015 ಏಪ್ರಿಲ್ 1ರಿಂದ ಜಾರಿಗೆ ಬರುವಂತೆ ರಾಜ್ಯ ಸರ್ಕಾರ ರಿಷ್ಕರಿಸಿರುವ ನೂತನ ವೇತನ ದರಗಳಲ್ಲಿ ಎಸ್.ಸಿ. ಎಸ್.ಟಿ., ಹಿಂದುಳಿದ ವರ್ಗಗಳ ಹಾಗೂ ಮೊರಾರ್ಜಿದೇಸಾಯಿ, ರಾಣಿಚೆನ್ನಮ್ಮ ಹಾಗೂ ಆಶ್ರಮ ವಸತಿ ಶಾಲೆಗಳ ಹೊರಗುತ್ತಿಗೆ ನೌಕರರಿಗೆ ವೇತನ ಸಂದಾಯ ಮಾಡಬೇಕೆಂದು ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲೆಗಳ ಹೊರಗುತ್ತಿಗೆ ನೌಕರರ ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿರವರು ಒತ್ತಾಯಿಸಿದರು.

ಕಳೆದ ಐದಾರು ತಿಂಗಳುಗಳಿಂದ ಹಾಸ್ಟೆಲ್ ಹೊರಗುತ್ತಿಗೆ ನೌಕರರಿಗೆ ಮಾಸಿಕ ವೇತನ ಸಂದಾಯ ಮಾಡದೆ ಸತಾಯಿಸುತ್ತಿರುವುದನ್ನು ಖಂಡಿಸಿದರು. ಅವರು ಗುತ್ತಿಗೆದಾರರು ಮತ್ತು ಸ್ಥಳೀಯ ಅಧಿಕಾರಿಗಳು ಶಾಮೀಲಾಗಿ ನೌಕರರಿಗೆ ಅನಗತ್ಯ ಕಿರುಕುಳ ನೀಡುತ್ತಿದ್ದಾರೆ ಎಂದು ಟೀಕಿಸಿದರು.

ಬಳ್ಳಾರಿಯಲ್ಲಿ ಹಾಸ್ಟೆಲ್ ಹೊರಗುತ್ತಿಗೆ ನೌಕರರ ಜಿಲ್ಲಾ ಮಟ್ಟದ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು. ●



ಕೇರಳ: ಅಧಿಕಾರಕ್ಕೆ ಅಂಟಿಕೊಂಡಿರುವ ಕಳಂಕಿತ ಮುಖ್ಯಮಂತ್ರಿ

ಕೇರಳದಲ್ಲಿ ಭ್ರಷ್ಟಾಚಾರದ ಹಗರಣದಲ್ಲಿ ಮುಳಿಗೇಳುತ್ತಿರುವ ಒಬ್ಬ ಮುಖ್ಯಮಂತ್ರಿ ರಾಜೀನಾಮೆ ಕೊಡಲು ಭಂಡತನದಿಂದ ನಿರಾಕರಿಸುತ್ತಿರುವ ಒಂದು ದೃಶ್ಯ ಅನಾವರಣಗೊಳ್ಳುತ್ತಿದೆ. ಸೌರ ವಿದ್ಯುತ್ ಉತ್ಪಾದನೆಗೆ ಬಳಸುವ ಸೌರ ಪ್ಯಾನಲ್‌ಗಳ ಹಗರಣ ಎರಡೂವರೆ ವರ್ಷಗಳ ಹಿಂದೆ ಬಯಲಿಗೆ ಬಂದಂದಿನಿಂದಲೂ ಕಾಂಗ್ರೆಸ್ ಮುಖ್ಯಮಂತ್ರಿ ಓಮನ್ ಚಾಂಡಿಯವರು ಇದರಲ್ಲಿ ಸಿಲುಕಿಕೊಂಡಿದ್ದರು. ಹಗರಣಕೋರರಾದ ಬಿಜು ರಾಧಾಕೃಷ್ಣನ್ ಮತ್ತು ಅವರ ಭಾಗೀದಾರರಾದ ಸರಿತಾ ನಾಯರ್ ಮುಖ್ಯಮಂತ್ರಿಗಳ ವೈಯಕ್ತಿಕ ಸಿಬ್ಬಂದಿಯೊಂದಿಗೆ ಶಾಮೀಲಾಗಿಯೇ ಕಾರ್ಯ ನಿರ್ವಹಿಸುತ್ತಿದ್ದುದು ಕಂಡು ಬಂದಿತ್ತು.

ಹಗರಣ ಬಯಲಾದಾಗ ಅವರ ವೈಯಕ್ತಿಕ ಸಿಬ್ಬಂದಿಯ ಮೂವರು ಇದರಲ್ಲಿದ್ದುದು ಸ್ಪಷ್ಟವಾಗಿಯೇ ಕಂಡು ಬಂತು. ಇವರನ್ನೆಲ್ಲ ವಜಾ ಮಾಡಲಾಯಿತು. ಅವರಲ್ಲಿ ಇಬ್ಬರನ್ನು, ಟೆನ್ನಿ ಜೊಪ್ಪನ್ ಮತ್ತು ಸಲೀಮ್ ರಾಜ್, ಮುಖ್ಯಮಂತ್ರಿಗಳ ಭದ್ರತಾ ಗಾರ್ಡ್ ಇವರನ್ನು ಬಂಧಿಸಲಾಯಿತು. ವೈಯಕ್ತಿಕ ಸಿಬ್ಬಂದಿ ಎಂದರೆ ಅವೆಲ್ಲ ಮುಖ್ಯಮಂತ್ರಿಗಳ ರಾಜಕೀಯ ನೇಮಕಗಳೇ. ಬೇರೆ ಯಾವುದಕ್ಕಲ್ಲದಿದ್ದರೂ, ಕೇವಲ ಈ ಕಾರಣಕ್ಕಾದರೂ ಓಮನ್ ಚಾಂಡಿ ರಾಜಿನಾಮೆ ಕೊಡಬೇಕಾಗಿತ್ತು. ಆದರೆ ಈ ಎಲ್ಲ ಆಪಾದನೆಗಳೂ ರಾಜಕೀಯ ಪ್ರೇರಿತ ಎನ್ನುತ್ತ ಅವರು ರಾಜಿನಾಮೆ ನೀಡಲು ನಿರಾಕರಿಸಿದರು.

ಈಗ ನ್ಯಾಯಾಂಗ ಆಯೋಗದ ಎದುರು ಸರಿತಾ ನಾಯರ್ ತಾನು ಒಬ್ಬ ಸಹಾಯಕರ ಮೂಲಕ ಮುಖ್ಯಮಂತ್ರಿಗಳಿಗೆ 1.9 ಕೋಟಿ ರೂ. ಕೊಟ್ಟಿರುವುದಾಗಿ ಹೇಳಿರುವಾಗ, ವಿಜಿಲೆನ್ಸ್ ಕೋರ್ಟ್ ಈ ಸಂಗತಿಯ ತನಿಖೆಗೆ ಎಫ್‌ಐಆರ್ ಸಲ್ಲಿಸಬೇಕು ಎಂದು ಆದೇಶಿಸಿರುವಾಗ, ಚಾಂಡಿಯವರಿಗೆ ಉಳಿದಿದ್ದ ಏಕೈಕ ಮಾರ್ಗವೆಂದರೆ ಎಲ್ಲ ಸಂಗತಿಗಳ ತನಿಖೆ ಮಾಡಿ ಇತ್ಯರ್ಥ ಮಾಡುವ ವರೆಗೆ ಅಧಿಕಾರದಿಂದ ಇಳಿಯುವುದು.

ಆದರೆ ಚಾಂಡಿಯವರು ಅದನ್ನು ಮಾಡಲಿಲ್ಲವಷ್ಟೇ ಅಲ್ಲ, ಹಾಗೆ ಮಾಡದಿರಲು ಅವರಿಗೆ ಕಾಂಗ್ರೆಸ್ ಮುಖಂಡತ್ವದ ಬೆಂಬಲವೂ ದಕ್ಕಿತು. ಈ ವಿಷಯದಲ್ಲಿ ಚಾಂಡಿ ರಾಜೀನಾಮೆ ಕೊಡಬೇಕಾಗಿಲ್ಲ ಎಂದು ಕಾಂಗ್ರೆಸ್ ವಕ್ತಾರರು ಹೇಳಿದ್ದಾರೆ. ಈ ಮೂಲಕ ಕಾಂಗ್ರೆಸ್ ಹೈಕಮಾಂಡ್ ತನ್ನ ಸ್ವಭಾವಕ್ಕೆ ಅನುಗುಣವಾಗಿಯೇ ವರ್ತಿಸಿದೆ. ಯುಪಿಎ ಸರಕಾರದ ಅವಧಿಯಲ್ಲಿ ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರವನ್ನು ಸಮರ್ಥಿಸಿಕೊಳ್ಳುವುದು ಸಾಮಾನ್ಯ ನಿಲುವಾಗಿತ್ತು. ಕಾಂಗ್ರೆಸ್ ಮುಖಂಡತ್ವದ ಮಟ್ಟಿಗೆ 2ಜಿ ತರಂಗಾಂತರ ನೀಡಿಕೆಯಲ್ಲಾಗಲೀ, ಕಲ್ಲಿದ್ದಲು ಗಣಿ ನೀಡಿಕೆಯಲ್ಲಾಗಲೀ ಯಾವುದೇ ತಪ್ಪುಗಳು ಸಂಭವಿಸಲೇ ಇಲ್ಲ! ಸೌರ ಪ್ಯಾನೆಲ್ ಹಗರಣದಲ್ಲೂ ಮುಖ್ಯಮಂತ್ರಿಗಳು ಮತ್ತು ಇತರ ಕಾಂಗ್ರೆಸ್ ಮುಖಂಡರ ಸಹಾಯದಿಂದ ಜುಜುಬಿ 7 ಕೋಟಿ ರೂ.ಗಳನ್ನು ನುಂಗಿ ಹಾಕಿದ್ದು ಕಾಂಗ್ರೆಸ್ ಶಬ್ದಕೋಶದಲ್ಲಿ ಭ್ರಷ್ಟಾಚಾರ ಎಂದು ಅನಿಸಲೂ ಅರ್ಹವಲ್ಲ.

ಚಾಂಡಿ ಮೊಕದ್ದಮೆಯಲ್ಲಿ ವಿಜಿಲೆನ್ಸ್ ಕೋರ್ಟಿನ ಆದೇಶಕ್ಕೆ ಹೈಕೋರ್ಟ್ ನೀಡಿರುವ ತಡೆಯಾಜ್ಞೆ ಮತ್ತು ಇದಕ್ಕೆ ಮೊದಲು ಬಾರ್ ಲಂಚದ ಕೇಸಿನಲ್ಲಿ ಅಬಕಾರಿ ಸಚಿವ ಕೆ ಬಾಬುರವರಿಗೆ ನೀಡಿರುವ ತಡೆಯಾಜ್ಞೆ ತಮ್ಮನ್ನು ಈ ಆಪಾದನೆಗಳಿಂದಲೇ ಮುಕ್ತಗೊಳಿಸಿವೆಯೇನೋ ಎಂಬಂತೆ ಪೋಸು ಕೊಡುತ್ತಿದ್ದಾರೆ. ಮುಖ್ಯಮಂತ್ರಿಗಳು ಬಾಬು ರಾಜೀನಾಮೆಯನ್ನು ಸ್ವೀಕರಿಸಲು ನಿರಾಕರಿಸಿದ್ದಾರೆ, ಅವರನ್ನು ಅಧಿಕಾರದಲ್ಲಿ ಮುಂದುವರೆಯಿರೆಂದು ಹೇಳಿದ್ದಾರೆ. ಹೇಳಿದಂತೆ ಕೇಳುವ ವಿಜಿಲೆನ್ಸ್ ಇಲಾಖೆಯನ್ನು ಬಳಸಿಕೊಂಡು ಮಾಜಿ ಹಣಕಾಸು ಮಂತ್ರಿ ಕೆ.ಎಂ.ಮಣಿಯವರಿಗೆ ಲಂಚ ನೀಡಿರುವ ಬಗ್ಗೆ ವಿಶ್ವಾಸಾರ್ಹ ಸಾಕ್ಷ್ಯ ಏನೂ ಇಲ್ಲ ಎಂಬ ವರದಿಯನ್ನು ಸಲ್ಲಿಸಲಾಗಿದೆ. ಚಾಂಡಿ ಮತ್ತು ಯುಡಿಎಫ್ ಮಣಿಯವರಿಗೆ ಮತ್ತೆ ಸಂಪುಟ ಸೇರಿ ಎಂದಿದ್ದಾರೆ. ಅವರಿನ್ನೂ ಅದನ್ನು ಸ್ವೀಕರಿಸಿಲ್ಲ.

ಆದರೆ ಸೌರ ಹಗರಣವನ್ನು ಮುಚ್ಚಿ ಹಾಕುವ ಒರಟು ಪ್ರಯತ್ನಗಳು ನಡೆಯುತ್ತಿವೆ ಎಂಬುದಕ್ಕೆ ಪ್ರತಿದಿನ ಹೆಚ್ಚೆಚ್ಚು ಪುರಾವೆಗಳು ರಾಶಿ ಬೀಳುತ್ತಿವೆ. ಒಂದು ಆಡಿಯೋ ಟೇಪ್, ಈ ಹಗರಣದ ತನಿಖೆ ನಡೆಸುವ ನ್ಯಾಯಾಂಗ ಆಯೋಗದ ಎದುರು ಸರಿತಾ ನಾಯರ್ ಏನು ಹೇಳಬೇಕೆಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಲ್ಲಿ ಒಬ್ಬರು ಹೇಳಿಕೊಡುತ್ತಿದ್ದುದನ್ನು ಮಾಧ್ಯಮಗಳಲ್ಲಿ ಸೋರಿ ಬಂದಿದೆ. ಸರಿತಾ ವ್ಯವಹಾರದಲ್ಲಿ ವಿವಿಧ ಕಾಂಗ್ರೆಸ್ ಮುಖಂಡರು ವಹಿಸಿರುವ ಜಾಳುಜಾಳಾದ ಪಾತ್ರ ಆಯೋಗದ ಎದುರು ಅನಾವರಣಗೊಳ್ಳುತ್ತಿದೆ.

ಸೌರ ಪ್ಯಾನಲ್ ಹಗರಣವಾಗಲೀ, ಬಾರ್ ಲಂಚ ಕೇಸಾಗಲೀ ಮರೆಯಾಗಲು ನಿರಾಕರಿಸುತ್ತಿವೆ; ಅವು ಕಾಂಗ್ರೆಸ್ ಮತ್ತು ಯುಡಿಎಫ್‌ನ್ನು ಕಾಡಿಸುತ್ತಲೇ ಇವೆ.

ಓಮೆನ್ ಚಾಂಡಿ ಅಧಿಕಾರದಿಂದ ಇಳಿಯಲು ತಡಮಾಡಿದಷ್ಟೂ ಯುಡಿಎಫ್ ಸರಕಾರಕ್ಕೆ ಅದು ಹೆಚ್ಚೆಚ್ಚು ಮರಣಾಂತಿಕವಾಗುತ್ತದೆ. ಅದು ಈಗಾಗಲೇ ತನ್ನದೇ ಲಂಚಕೋರತನ ಮತ್ತು ತಪ್ಪು ಕೃತ್ಯಗಳ ಭಾರದಲ್ಲಿ ಮುಳುಗುತ್ತಿದೆ. ಇಲ್ಲಿಂದ ಮೂರು ತಿಂಗಳಲ್ಲಿ ಕೇರಳದ ಜನತೆ ವಿಧಾನಸಭಾ ಚುನಾವಣೆಗಳಲ್ಲಿ ಅವರಿಗೆ ಒಂದು ಬಲವಾದ ಶಿಕ್ಷೆ ವಿಧಿಸಲಿದ್ದಾರೆ.

> ಯುಪಿಎ ಸರಕಾರದ ಅವಧಿಯಲ್ಲಿ ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರವನ್ನು ಸಮರ್ಥಿಸಿಕೊಂಡ ಕಾಂಗ್ರೆಸ್ ಹೈಕಮಾಂಡ್‌ಗೆ ಮತ್ತೆ ಅದರ ಸ್ವಭಾವಕ್ಕನುಗುಣವಾಗಿ ಜುಜುಬಿ 7 ಕೋಟಿ ರೂ.ಗಳನ್ನು ನುಂಗಿ ಹಾಕಿದ್ದು ಭ್ರಷ್ಟಾಚಾರ ಎಂದು ಅನಿಸುತ್ತಲೇ ಇಲ್ಲ. ಆದರೆ ಓಮೆನ್ ಚಾಂಡಿ ಅಧಿಕಾರದಿಂದ ಇಳಿಯಲು ತಡಮಾಡಿದಷ್ಟೂ ಯುಡಿಎಫ್ ಸರಕಾರಕ್ಕೆ ಅದು ಹೆಚ್ಚೆಚ್ಚು ಮರಣಾಂತಕವಾಗುತ್ತದೆ. ಅದು ಈಗಾಗಲೇ ತನ್ನದೇ ಲಂಚಕೋರತನ ಮತ್ತು ತಪ್ಪು ಕೃತ್ಯಗಳ ಭಾರದಲ್ಲಿ ಮುಳುಗುತ್ತಿದೆ.



> ಅರುಣಾಚಲ ಪ್ರದೇಶದಲ್ಲಿ ರಾಷ್ಟ್ರಪತಿ ಆಳ್ವಿಕೆಯ ಹೇರಿಕೆ ರಾಜ್ಯಪಾಲರುಗಳ ನೇಮಕದಲ್ಲೂ, ಕಲಮು 356ರಲ್ಲೂ ತೀವ್ರತರವಾದ ಬದಲಾವಣೆ ಮಾಡದಿದ್ದರೆ ಒಕ್ಕೂಟ ವ್ಯವಸ್ಥೆ ಮತ್ತು ರಾಜ್ಯಗಳ ಹಕ್ಕುಗಳಿಗೆ ಬೆದರಿಕೆ ಇದ್ದೇ ಇರುತ್ತದೆ ಎಂದು ಮತ್ತೆ ನೆನಪಿಸಿದೆ. ಸುಪ್ರಿಂ ಕೋರ್ಟ್ ರಾಜ್ಯಗಳ ಹಕ್ಕುಗಳನ್ನು ರಕ್ಷಿಸಲು ಮತ್ತು ಸಂವಿಧಾನಿಕ ಪ್ರಕ್ರಿಯೆಯಲ್ಲಿ ರಾಜ್ಯಪಾಲರ ನಗ್ನ ಹಸ್ತಕ್ಷೇಪವನ್ನು ತಡೆಯಲು ತ್ವರಿತವಾಗಿ ಕ್ರಮ ವಹಿಸಬೇಕು.

ಅರುಣಾಚಲ ಪ್ರದೇಶ : ರಾಜ್ಯಪಾಲರುಗಳ ಮೂಲಕ ಕಲಮು 356ರ ದುರ್ಬಳಕೆಯ ಇನ್ನೊಂದು ಪ್ರಸಂಗ

ಅರುಣಾಚಲ ಪ್ರದೇಶದಲ್ಲಿ ರಾಷ್ಟ್ರಪತಿ ಆಳ್ವಿಕೆಯ ಹೇರಿಕೆ ಒಕ್ಕೂಟ ತತ್ವದ ಮೇಲೊಂದು ಪ್ರಹಾರ ಮತ್ತು ಸಂವಿಧಾನದ 356ನೇ ಕಲಮಿನ ಮತ್ತೊಂದು ದುರುಪಯೋಗ. ಈ ಇಡೀ ಪ್ರಸಂಗದಲ್ಲಿ ಕೇಂದ್ರದ ಬಿಜೆಪಿ ಸರಕಾರ ಮತ್ತು ರಾಜ್ಯದ ರಾಜ್ಯಪಾಲ ಜೆ ಪಿ ರಾಜ್‌ಖೋವ ಒಂದು ತುಚ್ಛ ಪಾತ್ರವನ್ನು ವಹಿಸಿದ್ದಾರೆ.

ಕಳೆದ ವರ್ಷ ಅರುಣಾಚಲ ಪ್ರದೇಶದ ಆಳುವ ಕಾಂಗ್ರೆಸ್ ಪಕ್ಷಕ್ಕೆ ಸೇರಿದ ಒಂದು ಶಸಕರ ಗುಂಪು ಬಂಡೆದ್ದಾಗ ರಾಜಕೀಯ ಬಿಕ್ಕಟ್ಟು ಆರಂಭವಾಯಿತು. ಅವರು ವಿಧಾನ ಸಭಾಧ್ಯಕರ ಮೇಲೆ ದೋಷಾರೋಪಣೆ ಮಾಡಬೇಕೆಂದು ರಾಜ್ಯಪಾಲರ ಬಳಿ ಹೋದರು.

ರಾಜ್ಯಪಾಲರು ದೋಷಾರೋಪಣೆಯ ನಿಲುವಳಿಯನ್ನು ಕೈಗೆತ್ತಿಕೊಳ್ಳಲು ಡಿಸೆಂಬರ್ 15ರಂದು ವಿಧಾನಸಭೆಯ ಒಂದು ತುರ್ತು ಅಧಿವೇಶನವನ್ನು ಕರೆದರು. ವಿಧಾನ ಸಭೆಯ ಚಳಿಗಾಲ ಅಧಿವೇಶನವನನು ಅವಧಿಗೆ ಮೊದಲೇ ಕರೆಯುವ, ಮತ್ತು ವಿಧಾನಸಭಾಧ್ಯಕ್ಷರ ನ್ನು ತೆಗೆದು ಹಾಕಬೇಕೆನ್ನುವ ನಿರ್ಣಯದ ಮೇಲೆ ಮತದಾನ ನಡೆಯಬೇಕು ಎಮದು ನಿರ್ದೇಶನಗಳನ್ನು ನೀಡುವ ರಾಜ್ಯಪಾಲರ ಕ್ರಮ ಎಲ್ಲ ವಿಧಿವಿಧಾನಗಳ ಉಲ್ಲಂಘನೆಯಾಗಿತ್ತು. ಗುವಾಹಾಟಿ ಹೈಕೋರ್ಟ್ ರಾಜ್ಯಪಾಲರ ನಿರ್ಧಾರಕ್ಕೆ ತಡೆಯಾಜ್ಞೆ ನೀಡಿತು, ಆದರೆ ನಂತರ ಅದನ್ನು ತೆರವು ಮಾಡಿತು. ವಿಧಾನಸಭಾಧ್ಯಕ್ಷರು ಸುಪ್ರಿಂ ಕೋರ್ಟಿಗೆ ಹೋದರು. ಅದು ಆ ಕೇಸನ್ನು ಒಂದು ಸಂವಿಧಾನ ಪೀಠಕ್ಕೆ ಒಪ್ಪಿಸಿತು.

ಈ ಮಧ್ಯೆ, ಒಂದು ಸಮುದಾಯ ಭವನದಲ್ಲಿ ಒಂದು 'ವಿಶೇಷ ಅಧಿವೇಶನ' ನಡೆಯಿತು, ಅದರಲ್ಲಿ ಬಂಡಾಯ ಕಾಂಗ್ರೆಸ್ ಶಾಸಕರು, ಬಿಜೆಪಿ ಶಾಸಕರು ಮತ್ತು ಇಬ್ಬರು ಪಕ್ಷಾತೀತರೊಂದಿಗೆ ವಿಧಾನಸಭಾಧ್ಯಕ್ಷರ ವಿರುದ್ಧ ದೋಷಾರೋಪಣೆಯ ನಿಲುವಳಿಯನ್ನು ಮತ್ತು ಮುಖ್ಯಮಂತ್ರಿಯ ವಿರುದ್ಧ ಅವಿಶ್ವಾಸ ಠರಾವನ್ನು ಅಂಗೀಕರಿಸಿದರು. ಈ ಸಂಪೂರ್ಣ ಕಾನೂನುಬಾಹಿರವಾದ ಸಭೆಯನ್ನು ರಾಜ್ಯಪಾಲರು ಖಂಡಿಸಲಿಲ್ಲ. ಇದಕ್ಕೆ ಪ್ರತಿಕ್ರಮವಾಗಿ ವಿಧಾನಸಭಾಧ್ಯಕ್ಷರು 14 ಬಂಡಾಯ ಕಾಂಗ್ರೆಸ್ ಶಾಸಕರನ್ನು ಅನರ್ಹಗೊಳಿಸುವ ಆದೇಶ ನೀಡಿದರು. ಈ ಸಂಗತಿಯೂ ಹೈಕೋರ್ಟಿಗೆ ಹೋಯಿತು, ಅನರ್ಹತೆಗೆ ತಡೆಯಾಜ್ಞೆ ನೀಡಲಾಯಿತು. ಈ ನಿರ್ಧಾರದ ವಿರುದ್ಧವೂ ವಿಧಾನಸಭಾಧ್ಯಕ್ಷರು ಸುಪ್ರಿಂ ಕೋರ್ಟಿಗೆ ಹೋಗಿದ್ದಾರೆ.

ಇವೆಲ್ಲಾ ಅರ್ಜಿಗಳು ಸುಪ್ರಿಂ ಕೋರ್ಟಿನ ಸಂವಿಧಾನ ಪೀಠದ ಎದುರು ಇವೆ.

ಇಂತಹ ಒಂದು ಸನ್ನಿವೇಶದಲ್ಲಿ ರಾಜ್ಯಪಾಲರು ಹಿಡಿಯಬೇಕಾಗಿದ್ದ ಸರಿಯಾದ ದಾರಿಯೆಂದರೆ ಒಮದು ನಿರ್ದಿಷ್ಟ ಸಮಯದೊಳಗೆ ವಿಧಾನಸಭೆಯನ್ನು ಕರೆದು ತನ್ನ ಬಹುಮತವನ್ನು ಸಾಬೀತು ಪಡಿಸಿ ಎಂದು ಹೇಳುವುದು. ಅದರ ಬದಲು, ರಾಜ್ಯಪಾಲರು ರಾಜ್ಯದಲ್ಲಿ ಸಂವಿಧಾನಿಕ ಸ್ಥಿತಿ ಕುಸಿದು ಬಿದ್ದಿದೆ ಎಂಬ ಹಾಸ್ಯಾಸ್ಪದ ವರದಿಗಳನ್ನು ಸಲ್ಲಿಸಿದರು. ಒಂದು ವರದಿಯಲ್ಲಿ ತನ್ನ ನಿವಾಸದ ಮುಂದೆ ಆಳುವ ಪಕ್ಷದ ಶಾಸಕರಿಂದ 'ಗೋವಧೆ'ಯ ಪ್ರಸಂಗದ ಬಗ್ಗೆ ಹೇಳಲಾಗಿದೆ. ಅಲ್ಲಿ ಆಗಿದೆಯೆಂದ ವಧೆ ಗೋವಿನದಲ್ಲ, ಬದಲಿಗೆ ಮಿಥುನ್ ಎಂಬ ಅದೇ ಜಾತಿಗೆ ಸೇರಿದ ಪ್ರಾಣಿಯ ವಧೆ, ಇದರ ಮಾಂಸವನ್ನು ಆ ರಾಜ್ಯದಲ್ಲಿ ಬಹಳ ಮಂದಿ ಆಹಾರವಾಗಿ ಸೇವಿಸುತ್ತಾರೆ.


ಅರುಣಾಚಲ ಪ್ರದೇಶದ ರಾಜ್ಯಪಾಲರ ವರ್ತನೆ ಮೋದಿ ಸರಕಾರ ಈಶಾನ್ಯ ಪ್ರದೇಶದಲ್ಲಿ ಎಂತಹ ರಾಜ್ಯಪಾಲರುಗಳನ್ನು ನೇಮಿಸಿದೆ ಎಂಬುದನ್ನು ಎತ್ತಿ ತೋರಿಸುತ್ತದೆ. ಹೆಚ್ಚಿನವರನ್ನು ಆರಿಸಿಕೊಂಡದ್ದು ಅವರ ಆರೆಸ್ಸೆಸ್ ಹಿನ್ನೆಲೆಗಳ ಆಧಾರದಲ್ಲಿ. ಉದಾಹರಣೆಗೆ, ತ್ರಿಪುರ ರಾಜ್ಯಪಾಲ ತಥಾಗತ ರಾಯ್, ತನ್ನ ಫೇಸ್‌ಬುಕ್ ನಲ್ಲಿ ಹಾಕುವ ಅಂಶಗಳು ಮತ್ತು ಟ್ವಿಟರ್ ಮೂಲಕ ಅತ್ಯಂತ ಉದ್ರೇಕಕಾರಿ ಕೋಮುವಾದಿ ಹೇಳಿಕೆಗಳನ್ನು ಕೊಡುತ್ತಾರೆ.

ಈ ಇಡೀ ಪ್ರಸಂಗ ಸಂವಿಧಾನದ 356ನೇ ಕಲಮಿನ ಪ್ರಜಾಪ್ರಭುತ್ವ-ವಿರೋಧಿ ಮತ್ತು ಒಕ್ಕೂಟ ತತ್ವ-ವಿರೋಧಿ ಸ್ವರೂಪವನ್ನು ಮತ್ತೆ ಎತ್ತಿ ತೋರಿದೆ. 1994ರಲ್ಲಿ ಸುಪ್ರಿಂ ಕೋರ್ಟಿನ ಬೊಮ್ಮಾಯಿ ತೀರ್ಪು ಅದರ ದುರುಪಯೋಗವನ್ನು ಸೀಮಿತಗೊಳಿಸುವ ಪ್ರಯತ್ನ ಮಾಡಿತ್ತು. ಒಂದು ರಾಜ್ಯ ಸರಕಾರದ ಅದೃಷ್ಟವನ್ನು ರಾಜಭವನದಲ್ಲಿ ನಿರ್ಧರಿಸಲು ಸಾಧ್ಯವಿಲ್ಲ, ಅದನ್ನು ಕೇವಲ ವಿಧಾನ ಸಭೆಯಲ್ಲಿ ಒಂದು ಬಲಪರೀಕ್ಷೆಯ ಮೂಲಕ ಮಾತ್ರ ಮಾಡಲು ಸಾಧ್ಯ ಎಂದು ಸ್ಪಷ್ಟಪಡಿಸಿತ್ತು. ಅಲ್ಲದೆ, ಒಂದು ಸರಕಾರದ ವಜಾ ಮತ್ತು ರಾಷ್ಟ್ರಪತಿ ಆಳ್ವಿಕೆಯ ಆಧಾರಗಳು ನ್ಯಾಯಾಂಗ ಪರಾಮರ್ಶೆಗೆ ಒಳಪಡುತ್ತದೆ ಎಂದಿತ್ತು.

ಬಿಜೆಪಿ ಸರಕಾರ ಕೂಡ ಹಿಂದಿನ ಕಾಂಗ್ರೆಸ್ ಸರಕಾರಗಳಂತೆ ಈ ಕರಾಳ ಕಲಮನ್ನು ತನ್ನ ಸಂಕುಚಿತ ರಾಜಕೀಯ ಹಿತಾಸಕ್ತಿಗಳಿಗೆ ಬಳಸಿಕೊಳ್ಳಲು ಕಾತುರವಾಗಿದೆ ಎಂಬುದನ್ನು ಮತ್ತೊಮ್ಮೆ ತೋರಿಸಿ ಕೊಟ್ಟಿದೆ. ಸುಪ್ರಿಂ ಕೋರ್ಟ್ ರಾಜ್ಯಗಳ ಹಕ್ಕುಗಳನ್ನು ರಕ್ಷಿಸಲು ಮತ್ತು ಸಂವಿಧಾನಿಕ ಪ್ರಕ್ರಿಯೆಯಲ್ಲಿ ರಾಜ್ಯಪಾಲರ ನಗ್ನ ಹಸ್ತಕ್ಷೇಪವನ್ನು ತಡೆಯಲು ತ್ವರಿತವಾಗಿ ಕ್ರಮ ವಹಿಸಬೇಕು.

ರಾಜ್ಯಪಾಲರುಗಳ ನೇಮಕದಲ್ಲೂ, ಕಲಮು 356ರಲ್ಲೂ ತೀವ್ರತರವಾದ ಬದಲಾವಣೆ ಮಾಡದಿದ್ದರೆ ಒಕ್ಕೂಟ ವ್ಯವಸ್ಥೆ ಮತ್ತು ರಾಜ್ಯಗಳ ಹಕ್ಕುಗಳಿಗೆ ಬೆದರಿಕೆ ಇದ್ದೇ ಇರುತ್ತದೆ. ರಾಷ್ಟ್ರಪತಿಗಳು ಸರ್ಕಾರಿಯಾ ಆಯೋಗ ಪ್ರಸ್ತಾವಿಸಿರುವ ಮಾನದಂಡವನ್ನು ಅನುಸರಿಸಿ, ಮುಖ್ಯಮಂತ್ರಿಗಳು ಸೂಚಿಸುವ ಮೂವರು ಪ್ರತಿಷ್ಠಿತ ವ್ಯಕ್ತಿಗಳ ಪಟ್ಟಿಯಲ್ಲಿ ಒಬ್ಬರನ್ನು ರಾಜ್ಯಪಾಲರಾಗಿ ನೇಮಿಸುವಂತಿರಬೇಕು ಎಂದು ಸಿಪಿಐ(ಎಂ) ಆಗ್ರಹಿಸುತ್ತ ಬಂದಿದೆ. ಬಹಳಷ್ಟು ಪ್ರಾದೇಶಿಕ ಪಕ್ಷಗಳೂ ಈ ನಿಲುವನ್ನು ಬೆಂಬಲಿಸಿವೆ.

ಕಲಮು 356ರ ಬಗ್ಗೆ ಹೇಳುವುದಾದರೆ, ಅದನ್ನು ರಾಷ್ಟ್ರೀಯ ಐಕ್ಯತೆಗೆ, ಅಥವ ದೇಶದ ಜಾತ್ಯಾತೀತ ಹಂದರಕ್ಕೆ ಒಂದು ಗಂಭೀರ ಬೆದರಿಕೆ ಇದ್ದಾಗ ಮಾತ್ರವೇ ಬಳಸಲು ಆಗುವಂತೆ ತಿದ್ದುಪಡಿ ಮಾಡಬೇಕು. ಹಾಗೆ ಮಾಡುವ ವರೆಗೆ ಬೊಮ್ಮಾಯಿ ತೀರ್ಪು ನೀಡಿದ ಮಾರ್ಗದರ್ಶಕ ಸೂತ್ರಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.



ಗೋಕುಲ್, ಡೆಕ್ಕನ್ ಕ್ರಾನಿಕಲ್

ಜನಪರ ವಿಕೇಂದ್ರಿಕರಣಕ್ಕಾಗಿ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿ ಚುನಾವಣೆಗಳಲ್ಲಿ ಸಿಪಿಐ(ಎಂ) ಸ್ಪರ್ಧೆ

ಫೆಬ್ರುವರಿ 13 ಮತ್ತು 20 ರಂದು ಜಿಲ್ಲಾ ಮತ್ತು ತಾಲೂಕು ಪಂಚಾಯತ್ ಚುನಾವಣೆಗಳು ನಡೆಯಲಿದ್ದು, ಸಿಪಿಐ(ಎಂ) ಹಲವು ಕಡೆ ಸ್ಪರ್ಧಿಸಲಿದೆ. ಮೊದಲ ಹಂತದಲ್ಲಿ (ಫೆಬ್ರವರಿ 13ರಂದು) ಮತದಾನ ನಡೆಯುವ ಜಿಲ್ಲೆಗಳ ಒಟ್ಟು ಕ್ಷೇತ್ರಗಳ ಸಂಖ್ಯೆ ಮತ್ತು ಸಿಪಿಐ(ಎಂ) ಸ್ಪರ್ಧಿಸಲಿರುವ ಕ್ಷೇತ್ರಗಳ ಸಂಖ್ಯೆ, ಹೆಸರು, ಸ್ಪರ್ಧಿಗಳ ಹೆಸರು, ಕಿರು ಪರಿಚಯ, ಪಕ್ಷ ಚುನಾವಣೆಯಲ್ಲಿ ಎತ್ತಲಿರುವ ವಿಷಯಗಳ ವಿವರಗಳು ಇಲ್ಲಿವೆ. ಮುಂದಿನ ವಾರ ಎರಡನೇ ಸುತ್ತಿನ ಚುನಾವಣೆಯಲ್ಲಿ ಸಿಪಿಐ(ಎಂ) ಸ್ಪರ್ಧೆಯ ಇಂತಹ ವಿವರಗಳು ಇರುತ್ತವೆ.

ಮೊದಲ ಸುತ್ತಿನಲ್ಲಿ 15 ಜಿಲ್ಲೆಗಳಲ್ಲಿ ಚುನಾವಣೆಗಳು ನಡೆಯಲಿದ್ದು 5 ಜಿಲ್ಲೆಗಳಲ್ಲಿ ಸಿಪಿಐ(ಎಂ) ಸ್ಪರ್ಧಿಸಲಿದೆ. ಸಿಪಿಐ(ಎಂ) ಸ್ಪರ್ಧೆಯ ವಿವರಗಳು ಈ ರೀತಿ ಇವೆ.

ಜಿಲ್ಲೆ	ಜಿಲ್ಲಾ ಪಂಚಾಯತಿ		ತಾಲ್ಲೂಕು ಪಂಚಾಯತಿ	
	ಒಟ್ಟು	ಸ್ಪರ್ಧೆ	ಒಟ್ಟು	ಸ್ಪರ್ಧೆ
1. ಬೆಂಗಳೂರು ನಗರ	50	(01)	97	(03)
2. ಕೋಲಾರ	30	(07)	111	(18)
3. ಚಿಕ್ಕಬಳ್ಳಾಪುರ	28	(13)	108	(34)
4. ಗದಗ	19	(02)	75	(02)
5. ಉತ್ತರ ಕನ್ನಡ	39	(05)	130	(01)

ಬೆಂಗಳೂರು ಗ್ರಾಮಾಂತರ, ರಾಮನಗರ, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ , ತುಮಕೂರು, ಬೆಳಗಾವಿ, ಬಾಗಲಕೋಟೆ, ಧಾರವಾಡ, ಹಾವೇರಿ ಜಿಲ್ಲೆಗಳಲ್ಲಿ ಸಿಪಿಐ(ಎಂ) ಸ್ಪರ್ಧಿಸುತ್ತಿಲ್ಲ.

ಚುನಾವಣೆಗೆ ಸ್ಪರ್ಧೆ ಮಾಡಿರುವ ಸಿಪಿಐ(ಎಂ) ಅಭ್ಯರ್ಥಿಗಳು

ಉತ್ತರ ಕನ್ನಡ ಜಿಲ್ಲೆ

1. ನಾಯ್ಕ ಶಂಕರ ವಿಷ್ಣು (ಮಲ್ಲಾಪುರ ಜಿ.ಪಂ. ಕಾರವಾರ ತಾಲ್ಲೂಕು)
2. ಪ್ರೇಮಾನಂದ ವೆಳಿಪ್ (ಜೋಯಿಡಾ ಜಿ.ಪಂ. ಜೋಯಿಡಾ ತಾಲ್ಲೂಕು)
3. ಚಿನ್ನವ್ವ ಭೀಮಣ್ಣ ವಡ್ಡರ್ (ಪಾಳಾ ಜಿ.ಪಂ. ಮಂಡಗೊಡ ತಾಲ್ಲೂಕು)
4. ಮುಲ್ಲಾ ರಾಜೇಸಾಬ್ ಮೊಯಿದ್ದೀನ್ ಸಾಬ್ (ತೇರಗಾಂ ಜಿ.ಪಂ. ಹಳಿಯಾಳ ತಾಲ್ಲೂಕು)
5. ಶಶಿಕಲಾ ಧರಣೇಂದ್ರ ಬನ್ನಿಕೊಪ್ಪ (ಕಾವಲವಾಡ ಜಿ.ಪಂ.(ಸಾ.ಮ) ಹಳಿಯಾಳ ತಾಲ್ಲೂಕು)
6. ವೆಂಕಟೇಶ ಹೊನ್ನಪ್ಪ ನಾಯ್ಕ (ಸುಗಾವಿ ತಾ.ಪಂ. ಶಿರಸಿ ತಾಲ್ಲೂಕು)

ಗದಗ ಜಿಲ್ಲೆ

1. ಮಹೇಶ ಹಿರೇಮಠ (ಬೆಳವಣಿಕೆ ಜಿ.ಪಂ. ರೋಣ ತಾಲ್ಲೂಕು)
2. ಕರಿಯಮ್ಮ ಗುರಿಕಾರ (ನಿಡಗುಂದಿ ಜಿ.ಪಂ.)
3. ಬಸವರಾಜ ಮಂತೂರ (ಬೆಳವಣಿಕೆ ತಾ.ಪಂ.)
4. ರೇವಣ್ಣ ಚವ್ಹಾಣ (ಗೋಗೇರಿ ತಾ.ಪಂ.)

ಬೆಂಗಳೂರು ನಗರ ಜಿಲ್ಲೆ

1. ಮಧುರಾಜ್ (ಸಮಂದೂರು ಜಿ.ಪಂ. ಆನೇಕಲ್)
2. ಶಿವರಾಜ್ (ಸಮಂದೂರು ತಾ.ಪಂ. ಆನೇಕಲ್)
3. ಅರ್ಚನ (ಮಯಸಂದ್ರ ತಾ.ಪಂ. ಆನೇಕಲ್)
4. ತಿಮ್ಮಾರೆಡ್ಡಿ (ಬಳ್ಳೂರು ತಾ.ಪಂ. ಆನೇಕಲ್)

ಸಮಂದೂರು ಸಮಸ್ಯೆ ಪರಿಹರಿಸಲು ಸಿಪಿಐ(ಎಂ) ಬದ್ಧ

ಸಮಂದೂರು ಜಿಲ್ಲಾ ಪಂಚಾಯತಿ (ಮೀಸಲು ಕ್ಷೇತ್ರ) ಚುನಾವಣೆಗೆ ಸಿಪಿಐ(ಎಂ) ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಡಿ.ಮಧುರಾಜ್ ರವರು ಚನ್ನೇನ ಅಗ್ರಹಾರ ಗ್ರಾಮದ ಸಾಮಾನ್ಯ ಬಡ ಕುಟುಂಬವರಾಗಿದ್ದು, ಯುವಜನ ಮುಖಂಡರಾಗಿದ್ದಾರೆ. ಆನೇಕಲ್ ತಾಲ್ಲೂಕಿನ ಜನಪರ ಹೋರಾಟಗಳಲ್ಲಿ ತೊಡಗಿಸಿಕೊಂಡಿರುವ ಹಲವಾರು ಜನಪರ ಹೋರಾಟಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.

ಮಾಯಸಂದ್ರ ತಾಲ್ಲೂಕು ಪಂಚಾಯತಿ (ಸಾಮಾನ್ಯ ಮಹಿಳಾ



ಮೀಸಲು) ಕ್ಷೇತ್ರದಿಂದ ಶ್ರೀಮತಿ ಅರ್ಚನ ರವರು ಜನವಾದಿ ಮಹಿಳಾ ಸಂಘಟನೆ ಮುಖಂಡರಾಗಿ, ಮನೆಕೆಲಸಗಾರರ ಗಾರ್ಮೆಂಟ್ಸ್ ಕಾರ್ಮಿಕರ ಮುಖಂಡರಾಗಿ ದುಡಿಯುತ್ತಿದ್ದಾರೆ.

ಸಮಂದೂರು ತಾಲ್ಲೂಕು ಪಂಚಾಯತಿ(ಮೀಸಲು ಕ್ಷೇತ್ರ) ಸ್ಪರ್ಧಿಸಿರುವ ಶಿವರಾಜುವರು ಕುವೆಂಪುನಗರ ಗ್ರಾಮದ ಬಡ ಕುಟುಂಬದಿಂದ ಬಂದವರಾಗಿದ್ದು, ಈಸ್ಟರ್ನ್ ಸಿಲ್ಕ್ ಇಂಡಸ್ಟ್ರೀಸ್ ಕಾರ್ಖಾನೆಯಲ್ಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ. ಕಾರ್ಮಿಕರಾಗಿ ಕೆಲಸ ಮಾಡುತ್ತಾ, ಕ್ಷೇತ್ರದಲ್ಲಿ ಕಾರ್ಮಿಕರ, ಜನ ಸಾಮಾನ್ಯರ ನಾಗರಿಕ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಬಳ್ಳೂರು ತಾಲ್ಲೂಕು ಪಂಚಾಯತಿ ಚುನಾವಣೆಗೆ ಸ್ಪರ್ಧಿಸಿರುವ ತಿಮ್ಮಾರೆಡ್ಡಿ.ಎಂ(ಸತೀಶ್ ರೆಡ್ಡಿ) ರವರು ಹಳೇಹಳ್ಳಿ ಗ್ರಾಮದ ಸಾಮಾನ್ಯ ರೈತ ಕುಟುಂಬದಿಂದ ಬಂದಿದ್ದು, ರೈತ ಸಂಘದ ಮುಖಂಡರಾಗಿ, ಬಗರ್ ಹುಕ್ಕುಂ ಸಾಗುವಳಿದಾರ ಹೋರಾಟ ಸಮಿತಿ ಅ ಧ್ಯಕ್ಷರಾಗಿ ಕ್ಷೇತ್ರದಲ್ಲಿ ರೈತರ, ಜನ ಸಾಮಾನ್ಯರ ಜಲ್ವಂತ ಸಮಸ್ಯೆಗಳ ಪರಿಹಾರಕ್ಕಾಗಿ ಹಲವಾರು ಜನಪರ ಹೋರಾಟಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.

ಕ್ಷೇತ್ರದ ಸಮಸ್ಯೆಗಳು

ಮನೆ ನಿರ್ಮಿಸಿಕೊಳ್ಳಲು ಮತ್ತು ಶೌಚಾಲಯ ನಿರ್ಮಿಸಲು ಸರ್ಕಾರದಿಂದ ಸಿಗುವ ಸಹಾಯ ಧನ ವರ್ಷವಾದರು ಬಿಡುಗಡೆ ಆಗಿಲ್ಲ, ಬಗರ್ ಹುಕ್ಕುಂ ಸಾಗುವಳಿದಾರರಿಗೆ ಸಾಗುವಳಿ ಚೀಟಿ ನೀಡಿಲ್ಲ. ರೇಷನ್ ಸರಿಯಾಗಿ ಸಿಗುವುದಿಲ್ಲ, ಕೆಲವು ಹಳ್ಳಿಗಳಲ್ಲಿ ದೂರದ ಊರಿಗಳಿಂದ ರೇಷನ್ ತರಬೇಕು. ಕೃಷಿಗೆ ವಿದ್ಯುತ್ ಸಮರ್ಪಕವಾಗಿ ನೀಡುತ್ತಿಲ್ಲ – ಇವುಗಳಿಗಾಗಿ ನಿರಂತರವಾಗಿ ಚಳುವಳಿ ನಡೆಸಲಾಗುತ್ತಿದೆ.

ಪಂಪ್ ಸೆಟ್‌ಗಳಿಗೆ ಮೀಟರ್ ಅಳವಡಿಕೆ ವಿರುದ್ಧ, ಆಲುಗಡ್ಡೆ ಬೆಳೆ ನಷ್ಟದ ಪರಿಹಾರಕ್ಕಾಗಿ, ಬಳ್ಳೂರು–ಮಾಯಸಂದ್ರ–ಸಮಂದೂರು ಪಂಚಾಯತಿಗಳಿಗೆ ನಿವೇಶನ ರಹಿತರಿಂದ ನಿವೇಶನಕ್ಕಾಗಿ ನೂರಾರು ಅರ್ಜಿಗಳನ್ನು ಹಾಕಿಸಲಾಗಿದ್ದು, ನಿವೇಶನ ನೀಡಬೇಕೆಂದು ಹೋರಾಟ, ಕುಡಿಯುವ ನೀರು ಮತ್ತು ರಸ್ತೆ ಸರಿಪಡಿಸಲು ಸಮಂದೂರುನಲ್ಲಿ ಹೋರಾಟ, ಮೂಲ ದಾಖಲಾತಿ ಇಲ್ಲವೆಂದು ರೈತರ ವಿರುದ್ಧ ಹಾಕಿರುವ ಕೇಸ್‌ಗಳನ್ನು ವಜಾ ಮಾಡಬೇಕೆಂದು, ಬಗರ್ ಹುಕ್ಕುಂ ಸಾಗುವಳಿದಾರರಿಗೆ ಸಾಗುವಳಿ ಚೀಟಿಗಾಗಿ ಹೋರಾಟ ಸಮಿತಿಗಳನ್ನು ರಚಿಸಿ ಪಂಚಾಯತಿವಾರು ಹೋರಾಟಗಳನ್ನು ನಡೆಸಲಾಗಿದೆ. ಎಲ್ಲರಿಗೂ ರೇಷನ್ ಕಾರ್ಡ್ ನೀಡಲು ಹೋರಾಟ ನಡೆಸಲಾಗಿದೆ. ಪ್ರತಿ ಗ್ರಾಮದಲ್ಲಿ ಸ್ಮಶಾನ ಭೂಮಿಯನ್ನು ಗುರ್ತಿಸಿ, ಅದರ ಅಭಿವೃದ್ಧಿ ಪಡಿಸಬೇಕು. ಒತ್ತುವರಿ ತೆರವುಗೊಳಿಸಬೇಕೆಂದು ಹೋರಾಟ ನಡೆಸಲಾಗುತ್ತಿದೆ.

ಜನತೆಯ ಹೋರಾಟದ ಮೂಲಕ ಕೆಲವು ಸಮಸ್ಯೆಗಳು ಪರಿಹರಿಸಲಾಗಿದೆ. ಮಾಯಸಂದ್ರ ಪ್ರದೇಶದಲ್ಲಿ ಕ್ಯಾರೆಟ್ ಬೆಳಗಾರರಿಗೆ ಬೆಳೆ ನಷ್ಟ ಪರಿಹಾರ ಕೊಡಿಸಲಾಗಿದೆ. ಕಳಪೆ ಬಿತ್ತನೆ ಬೀಜ ಮತ್ತು ಔಷದಿ ಕಂಪನಿಗಳ ವಿರುದ್ಧ ಹೋರಾಟ ಮತ್ತು ಪರಿಹಾರ. ಈ ಕ್ಷೇತ್ರವು ಕೃಷಿ ಪ್ರಧಾನವಾಗಿತ್ತು, ಈಗ ಅಂತರ್‌ಜಲ ಬತ್ತಿ ಹೋಗುತ್ತಿರುವುದರಿಂದ ಕೃಷಿ ಅವಲಂಬನೆ ಕಡಿಮೆ ಆಗುತ್ತಿದೆ. ಲೇಔಟ್‌ಗಳು, ಅಪಾರ್ಟ್‌ಮೆಂಟ್‌ಗಳ ಸಂಖ್ಯೆ ಹೆಚ್ಚಾಗುತ್ತಿದೆ. ಇದರಿಂದ ಕೃಷಿ ಕೂಲಿಕಾರರು ಕಟ್ಟಡ ಕಾರ್ಮಿಕರು ಮನೆ ಕೆಲಸಗಾರ, ಗಾರ್ಮೆಂಟ್, ಕಾರ್ಮಿಕರಾಗಿ ಮಾರ್ಪಾಡು ಆಗಿದ್ದಾರೆ. ಸ್ಥಳೀಯ ಕಾರ್ಖಾನೆಗಳಲ್ಲಿ ಸ್ಥಳೀಯ ಯುವಜನರಿಗೆ ಉದ್ಯೋಗ ಇಲ್ಲವಂತಾಗಿದೆ.



ಚಿಕ್ಕಬಳ್ಳಾಪುರ ಜಿಲ್ಲೆಯ ಜಿಲ್ಲಾ ಪಂಚಾಯ್ತಿ ಅಭ್ಯರ್ಥಿಗಳ ಪಟ್ಟಿ

ಬಾಗೇಪಲ್ಲಿ ತಾಲ್ಲೂಕು

1. ಗೂಳೂರು ಕ್ಷೇತ್ರ :ಚೆನ್ನರಾಯಪ್ಪ, ಎಸ್.ಟಿ
2. ಬಾಗೇಪಲ್ಲಿ ಕಸಬಾ ಕ್ಷೇತ್ರ :ನಾರಾಯಣಮ್ಮ, ಎಸ್.ಸಿ, ಮಹಿಳೆ
3. ಮಿಟ್ಟೇಮರಿ ಕ್ಷೇತ್ರ :ಪಿ.ಮಂಜುನಾಥ್, ಸಾಮಾನ್ಯ
4. ಚೇಳೂರು ಕ್ಷೇತ್ರ :ಪಾತಿಮಾಬೀ, ಸಾಮಾನ್ಯ, ಮಹಿಳೆ

ಗುಡಿಬಂಡೆ ತಾಲ್ಲೂಕು

1. ಬೀಚಗಾನಹಳ್ಳಿ ಕ್ಷೇತ್ರ :ಎಂ.ಎನ್.ವರಲಕ್ಷ್ಮೀ, ಎಸ್.ಸಿ, ಮಹಿಳೆ
2. ಸೋಮೇನಹಳ್ಳಿ ಕ್ಷೇತ್ರ :ಗೌತಮಿ, ಸಾಮಾನ್ಯ, ಮಹಿಳೆ

ಗೌರಿಬಿದನೂರು ತಾಲ್ಲೂಕು

1. ನಗರಗೆರೆ ಕ್ಷೇತ್ರ : ಆದಿಲಕ್ಷ್ಮಮ್ಮ, ಎಸ್.ಟಿ, ಮಹಿಳೆ
2. ಡಿ.ಪಾಳ್ಯ ಕ್ಷೇತ್ರ : ಲಕ್ಷ್ಮಮ್ಮ, ಎಸ್.ಸಿ, ಮಹಿಳೆ
3. ಹಿರೆಬಿದನೂರು ಕ್ಷೇತ್ರ: ಶ್ರೀನಿವಾಸ್.ಜಿ.ಎನ್, ಎಸ್.ಸಿ
4. ಹೊಸೂರು ಕ್ಷೇತ್ರ : ಆರ್.ಎನ್.ರಾಜು, ಸಾಮಾನ್ಯ

ಚಿಕ್ಕಬಳ್ಳಾಪುರ ತಾಲ್ಲೂಕು

1. ಮಂಚನಬಳೆ ಕ್ಷೇತ್ರ : ಮಧುರ, ಸಾಮಾನ್ಯ, ಮಹಿಳೆ

ಶಿಡ್ಲಘಟ್ಟ ತಾಲ್ಲೂಕು

1. ಗಂಜಿಗುಂಟೆ ಕ್ಷೇತ್ರ : ಸದಾನಂದಚಾರಿ, ಸಾಮಾನ್ಯ

ಚಿಂತಾಮಣಿ ತಾಲ್ಲೂಕು

1. ಊಲವಾಡಿ ಕ್ಷೇತ್ರ : ಲಕ್ಷ್ಮೀನಾರಾಯಣರೆಡ್ಡಿ, ಸಾಮಾನ್ಯ

ತಾಲ್ಲೂಕು ಪಂಚಾಯ್ತಿ ಅಭ್ಯರ್ಥಿಗಳ ಪಟ್ಟಿ

ಬಾಗೇಪಲ್ಲಿ ತಾಲ್ಲೂಕು

1. ಪರಗೋಡು ಕ್ಷೇತ್ರ :ಜಯಲಕ್ಷ್ಮಮ್ಮ, ಎಸ್.ಸಿ, ಮಹಿಳೆ
2. ನಲಪರೆಡ್ಡಿಪಲ್ಲಿ ಕ್ಷೇತ್ರ :ಎಸ್.ಜಿ.ಕುಮಾರಿ ಅರುಣ, ಎಸ್.ಸಿ, ಮಹಿಳೆ
3. ದೇವರಗುಡಿಪಲ್ಲಿ ಕ್ಷೇತ್ರ :ವೈ.ಶಶಿಕಲಾ, ಸಾಮಾನ್ಯ, ಮಹಿಳೆ
4. ಯಲ್ಲಂಪಲ್ಲಿ ಕ್ಷೇತ್ರ :ಶ್ರೀರಾಮನಾಯಕ, ಎಸ್.ಸಿ
5. ಗೂಳೂರು ಕ್ಷೇತ್ರ :ಮಂಜುಳ, ಎಸ್.ಟಿ, ಮಹಿಳೆ
6. ಕೊತ್ತಕೋಟೆ ಕ್ಷೇತ್ರ :ಟಿ.ಗಾಯತ್ರಿ, ಎಸ್.ಟಿ, ಮಹಿಳೆ
7. ಗೊರ್ತಪಲ್ಲಿ ಕ್ಷೇತ್ರ :ಜಿ.ಕೃಷ್ಣಪ್ಪ, ಎಸ್.ಸಿ
8. ಪಾತಪಾಳ್ಯ ಕ್ಷೇತ್ರ :ಸುಧಾಕರರೆಡ್ಡಿ, ಸಾಮಾನ್ಯ
9. ಮಿಟ್ಟೇಮರಿ ಕ್ಷೇತ್ರ :ವಿಮಲಮ್ಮ, ಸಾಮಾನ್ಯ
10. ಸೋಮನಾಥಪುರ ಕ್ಷೇತ್ರ :ಮದ್ದಿರೆಡ್ಡಿ, ಸಾಮಾನ್ಯ
11. ಪೋಲನಾಯಕನಹಳ್ಳಿ ಕ್ಷೇತ್ರ :ಸಾಲೆಪ್ಪ, ಸಾಮಾನ್ಯ
12. ಚೇಳೂರು ಕ್ಷೇತ್ರ :ಎಸ್.ನಾರಾಯಣರೆಡ್ಡಿ, ಸಾಮಾನ್ಯ
13. ಪಾಳ್ಯಕೆರೆ ಕ್ಷೇತ್ರ :ರತ್ನಮ್ಮ, ಸಾಮಾನ್ಯ ಮಹಿಳೆ
14. ಪುಲಗಲ್ ಕ್ಷೇತ್ರ :ಸಾವಿತ್ರಮ್ಮ, ಎಸ್.ಸಿ, ಮಹಿಳೆ
15. ಚಾಕವೇಲು ಕ್ಷೇತ್ರ :ವಿ.ಬಾಲಕೃಷ್ಣ,
16. ಬಿಳ್ಳೂರು ಕ್ಷೇತ್ರ :ಸುಬ್ಬಿರೆಡ್ಡಿ, ಸಾಮಾನ್ಯ

ಗೌರಿಬಿದನೂರು ತಾಲ್ಲೂಕು

1. ಮೇಳ್ಯ ಕ್ಷೇತ್ರ	:ಮೋಹನ್‌ರಾವ್, ಸಾಮಾನ್ಯ
2. ಡಿ.ಪಾಳ್ಯ ಕ್ಷೇತ್ರ	:ರತ್ನಮ್ಮ, ಎಸ್.ಟಿ, ಮಹಿಳೆ
3. ನಕ್ಕಲಹಳ್ಳಿ ಕ್ಷೇತ್ರ	:ವೆಂಕಟಸ್ವಾಮಿ, ಸಾಮಾನ್ಯ
4. ಹೊಸೂರು ಕ್ಷೇತ್ರ	:ಲಕ್ಷ್ಮೀಪತಿ, ಸಾಮಾನ್ಯ

ಗುಡಿಬಂಡೆ ತಾಲ್ಲೂಕು

1. ಯಲ್ಲೋಡು ಕ್ಷೇತ್ರ	:ಜಯರಾಮರೆಡ್ಡಿ, ಸಾಮಾನ್ಯ
2. ಹಂಪಸಂದ್ರ ಕ್ಷೇತ್ರ	:ತ್ಯಾಗನ್ನ, ಎಸ್.ಟಿ
3. ಚೆಂಡೂರು ಕ್ಷೇತ್ರ	:ಗೋವಿಂದಪ್ಪ, ಎಸ್.ಟಿ
4. ಬೀಚಗಾನಹಳ್ಳಿ ಕ್ಷೇತ್ರ	:ಸೌಂದರ್ಯ, ಎಸ್.ಟಿ, ಮಹಿಳೆ
5. ಉಲ್ಲೋಡು ಕ್ಷೇತ್ರ	:ಗಂಗಮ್ಮ, ಎಸ್.ಸಿ, ಮಹಿಳೆ
6. ವರ್ಲಕೊಂಡ ಕ್ಷೇತ್ರ	:ಕೆ.ಶ್ರೀವಾಣಿ, ಸಾಮಾನ್ಯ, ಮಹಿಳೆ
7. ಪೊಲಂಪಲ್ಲಿ ಕ್ಷೇತ್ರ	:ಮಂಜುನಾಥರೆಡ್ಡಿ, ಸಾಮಾನ್ಯ
8. ತಿರುಮಣಿ ಕ್ಷೇತ್ರ	:ಗಾಯಿತ್ರಮ್ಮ, ಸಾಮಾನ್ಯ, ಮಹಿಳೆ
9. ದೊಡ್ಡನಂಚರ್ಲು ಕ್ಷೇತ್ರ	:ಗಾಯಿತ್ರಮ್ಮ, ಎಸ್.ಸಿ, ಮಹಿಳೆ
10. ಸೊಮೇನಹಳ್ಳಿ ಕ್ಷೇತ್ರ	:ಗೌರಮ್ಮ, ಸಾಮಾನ್ಯ, ಮಹಿಳೆ
11. ಕಾಟೇನಹಳ್ಳಿ ಕ್ಷೇತ್ರ	:ವೆಂಕಟೇಶಪ್ಪ, ಸಾಮಾನ್ಯ

ಚಿಂತಾಮಣಿ ತಾಲ್ಲೂಕು

1. ಆನೂರು ಕ್ಷೇತ್ರ	:ಕೃಷ್ಣಪ್ಪ, ಸಾಮಾನ್ಯ
2. ಕುರುಬೂರು ಕ್ಷೇತ್ರ	:ಆಂಜಪ್ಪ, ಸಾಮಾನ್ಯ
3. ಕಂಚಾರ್ಲಹಳ್ಳಿ ಕ್ಷೇತ್ರ	:ವೆಂಕಟರವಣಪ್ಪ, ಎಸ್.ಸಿ



ಕೋಲಾರ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯಿತಿಗೆ ಸ್ಪರ್ಧಿಸಿರುವ ಅಭ್ಯರ್ಥಿಗಳ ವಿವರ

ಜಿಲ್ಲಾ ಪಂಚಾಯಿತಿ ಕ್ಷೇತ್ರಗಳು

ಹುತ್ತೂರು	:ವೆಂಕಟಲಕ್ಷ್ಮಮ್ಮ
ದಳಸನೂರು	:ಎಂ.ರಾಮಪ್ಪ
ಗೌನಿಪಲ್ಲಿ	:ಮಂಜುಳ ವೆಂಕಟೇಶ್
ದೊಡ್ಡೂರು ಕರಪನಹಳ್ಳಿ	:ಪಿಚ್ಚಕಣ್ಣು
ಕುಡಿಯನೂರು	:ಬಿ.ವಿ.ಸಂಪಂಗಿ

ತಾಲ್ಲೂಕು ಪಂಚಾಯಿತಿ

ಎಸ್.ಅಗ್ರಹಾರ	:ಗಂಗಮ್ಮ
ಜನ್ನಘಟ್ಟ	:ಎನ್.ಯಲ್ಲಪ್ಪ
ಸುಗಟೂರು	:ನಾರಾಯಣಪ್ಪ
ಅರಹಳ್ಳಿ	:ನಾಗರಾಜಪ್ಪ
ಹುತ್ತೂರು	:ಟಿ.ಸುಬ್ರಮಣಿ
ಶಾಪೂರು	:ಎಂ.ರಮೇಶ್
ಗದ್ದೆಕಣ್ಣೂರು	:ಸುಶೀಲ
ದಳಸನೂರು	:ಬೈಯಮ್ಮ
ಚಲ್ದಿಗಾನಹಳ್ಳಿ	:ಜಿ.ರತ್ನಮ್ಮ
ಜೆ.ತಿಮ್ಮಸಂದ್ರ	:ನಾರಾಯಣಮ್ಮ
ಬೈರಗಾನಹಳ್ಳಿ	:ಎನ್.ನಾಗಭೂಷಣ್
ಗೌನಿಪಲ್ಲಿ	:ಶ್ರೀನಿವಾಸ್
ನೆಲವಂಕಿ	:ಎನ್.ವೀರಪ್ಪರೆಡ್ಡಿ
ಗೌಡತಾತನಗಡ್ಡ	:ನಾರಾಯಣಮ್ಮ
ಅರಳೇರಿ	:ಜಿ.ಸುಬ್ರಮಣಿ
ಹೆಬ್ಬಣಿ	:ಸಿಂಧೂ ಚಂದ್ರಶೇಖರ್



ಉತ್ತರ ಕನ್ನಡದ ಅಭ್ಯರ್ಥಿಗಳು

ವಿಷ್ಣು ಶಂಕರ ನಾಯ್ಕ

ಇವರು ರೈತಾಪಿ ಕುಟುಂಬದಿಂದ ಬಂದವರು. ಅಖಿಲ ಭಾರತ ಕಿಸಾನ್ ಸಭಾ (ಎ.ಐ.ಕೆ.ಎಸ್.) ನೇತೃತ್ವದ ಹಲವು ಸ್ಫೂರ್ತಿದಾಯಕ ಐತಿಹಾಸಿಕ ಹೋರಾಟದಲ್ಲಿ ಭಾಗವಹಿಸಿದ ಕುಟುಂಬದಿಂದ ಬಂದ ಇವರು 1962ರಿಂದ ಜಿಲ್ಲೆಯ ತೀರಾ ಗ್ರಾಮೀಣ ಭಾಗದಲ್ಲಿ ಸತತ 40 ವರ್ಷ ಶಿಕ್ಷಕರಾಗಿ ಸೇವಾವಧಿ ಪೂರೈಸಿದ್ದಾರೆ. ತನ್ನ ಶಿಕ್ಷಕ ವೃತ್ತಿಯಿಂದ ನಿವೃತ್ತರಾದ ನಂತರವೂ ನಿರಂತರ ಈ ಭಾಗದ ಜನತೆಯ ಒಳಿತಿಗಾಗಿ ದುಡಿಯುತ್ತಿದ್ದಾರೆ. ಕರ್ನಾಟಕ ಪ್ರಾಂತ ರೈತ ಸಂಘದ ತಾಲೂಕಾ ಅಧ್ಯಕ್ಷರಾಗಿ, ಘಾಡಸಾಯಿ ಗ್ರಾಮ ಪಂಚಾಯತ್ ಮಾಜಿ ಸದಸ್ಯರಾದ ಇವರು ಈಗ ಅಸ್ನೋಟಿಯಿಂದ ಬಾಳೆಮನೆ ಭಾಗದ ಎಪಿಎಂಸಿ ಗೆ ಚುನಾಯಿತ ಪ್ರತಿನಿಧಿಯಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ.

ಪ್ರೇಮಾನಂದ ಕೇಶವ ವೇಳಿಪ

ಅತ್ಯಂತ ಕುಗ್ರಾಮಗಳಲ್ಲಿ ಒಂದಾದ ಕಾಟೋಳಿಯ ಪ್ರೇಮಾನಂದ ಕೇಶವ ವೇಳಿಪ ಆದಿವಾಸಿ ಕುಣಬಿ ಪಂಗಡಕ್ಕೆ ಸೇರಿದವರು. ಜೋಯಿಡಾ ತಾಲೂಕಿಗೆ ವಿಶೇಷ ಪ್ಯಾಕೇಜ್ ನೀಡಲು, ಕುಣಬಿ ಬುಡಕಟ್ಟೆಂದು ಮಾನ್ಯತೆ ನೀಡಲು, ಅರಣ್ಯ ಉತ್ಪನ್ನಗಳ ಬಳಕೆಗೆ, ವನ್ಯಜೀವಿ ಹಾಗೂ ಅರಣ್ಯ ಇಲಾಖೆಯ ದೌರ್ಜನ್ಯ ತಡೆಗೆ, ಕುಂಬ್ರಿ ಜಮೀನು ಸಾಗುವಳಿಗೆ ಹಕ್ಕು ನೀಡಲು, ಅರಣ್ಯ ಅತಿಕ್ರಮಣ ಭೂಮಿ ಸಾಗುವಳಿ ಸಕ್ರಮಕ್ಕೆ, ಆನೆ–ಹುಲಿ, ಕರಡಿ ದಾಳಿಗೊಳಗಾದವರಿಗೆ ಪರಿಹಾರ ಮತ್ತು ರಕ್ಷಣೆಗೆ ಆಗ್ರಹಿಸಿ – ಇವರು ವಿಶೇಷವಾಗಿ ಹೋರಾಟ ನಡೆಸಿದ್ದಾರೆ.

ಚಿನ್ನವ್ವ ಭೀಮಣ್ಣ ಬೋವಿವಡ್ಡರ :

ಮುಂಡಗೋಡ ತಾಲೂಕಿನ ಪಾಳಾ ಗ್ರಾಮದವರಾಗಿದ್ದು ಕೃಷಿ ಕೂಲಿಕಾರರ ಸಂಘದ ಮುಖಂಡರಾಗಿ ಹೋರಾಟಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ. ಇತ್ತೀಚೆಗೆ ಹಳ್ಳಿಯಲ್ಲಿ ಕೆಲಸ ನಿರತರಾಗಿದ್ದಾಗ ಇವರ ಮೇಲೆ ಚಿರತೆ ದಾಳಿ ಮಾಡಿದರೂ ಅಂಜದೇ ಸೆಣೆಸಿ, ಆರೋಗ್ಯ ಸರಿಪಡಿಸಿಕೊಂಡು ಮತ್ತೆ ಕೃಷಿ ಕೂಲಿಕಾರರ ಒಳಿತಿನ ಹೋರಾಟದಲ್ಲಿ ನಿರತರಾಗಿದ್ದಾರೆ. ಗ್ರಾಮೀಣಾಭಿವೃದ್ಧಿಯನ್ನು ಸಾಧಿಸಲು ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಅನುದಾನಕ್ಕೆ, ಜನತಾ ಮನೆ ಹಗೂ ಅರಣ್ಯ ಅತಿಕ್ರಮಣ ಭೂಮಿ ಸಕ್ರಮಕ್ಕೆ

ಮುಲ್ಲಾ ರಾಜೇಸಾಬ್ ಮೊಯಿದ್ದೀನ್ ಸಾಬ್

ಇವರು ಹಳಿಯಾಳ ತಾಲೂಕ ಹವಗಿ ಗ್ರಾಮದ ವಾಸಿಯಾಗಿದ್ದಾರೆ. ತೇರಗಾಂವ ಗ್ರಾಮ ಪಂಚಾಯತದಲ್ಲಿ 35 ವರ್ಷ ಗ್ರಾಮ ಪಂಚಾಯತ ಸಿಬ್ಬಂದಿಯಾಗಿ ಸೇವೆ ಸಲ್ಲಿಸಿ, ಆಡಳಿತದ ಅನುಭವವನ್ನು ಪಡೆದುಕೊಂಡಿದ್ದಾರೆ. ಸೇವೆಯಲ್ಲಿರುವಾಗ ಗ್ರಾಮ ಪಂಚಾಯತ ನೌಕರರ ಸಂಘ ಕಟ್ಟಿದ ಇವರು ತಾಲೂಕಾ ಸಮಿತಿ ಅಧ್ಯಕ್ಷರಾಗಿ, ಜಿಲ್ಲಾ ಸಮಿತಿ ಅಧ್ಯಕ್ಷರಾಗಿ ಹಲವು ವರ್ಷಗಳ ಕಾಲ ಹೋರಾಟ ಮಾಡುತ್ತಿದ್ದಾರೆ.

ಬನ್ನಿಕೊಪ್ಪ ಶಶಿಕಲಾ ಧರಣೇಂದ್ರ

ಸಿಪಿಐ(ಎಂ) ಅಭ್ಯರ್ಥಿ ಬನ್ನಿಕೊಪ್ಪ ಶಶಿಕಲಾ ಧರಣೇಂದ್ರ ಇವರು 6–ಕಾವಲವಾಡಾ ಜಿಲ್ಲಾ ಪಂಚಾಯತ್ ಕ್ಷೇತ್ರದಲ್ಲಿ ಸ್ಪರ್ಧಿಸುತ್ತಿದ್ದಾರೆ. ಹಳಿಯಾಳ ತಾಲೂಕ ಜನಗಾ ಗ್ರಾಮದ ರಹವಾಸಿಯಾಗಿದ್ದಾರೆ. ಜನಗಾ ಸರಕಾರಿ ಪ್ರೌಢಶಾಲೆಯ ಶಾಲಾ ಸುಧಾರಣ ಸಮಿತಿಯ ಸದಸ್ಯಳಾಗಿಯೂ, ರೈತ–ಕೃಷಿಕೂಲಿಕಾರರ, ಕಾರ್ಮಿಕರ ಸಮಸ್ಯೆ ಬಗೆಹರಿಸುವ ಹೋರಾಟಗಳಲ್ಲಿ ಭಾಗವಹಿಸುತ್ತಿದ್ದಾರೆ. ಜೊತೆಗೆ ಸಾಮಾಜಿಕ ಕೆಲಸದಲ್ಲಿ ತೊಡಗಿದ್ದಾರೆ. ಕೆಲವು ವರ್ಷಗಳಿಂದ ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಸಿಗಬೇಕಾದ ಸೌಲಭ್ಯಗಳನ್ನು ಕೊಡಿಸಲು ಪ್ರಯತ್ನ ಮಾಡುತ್ತ ಬಂದಿದ್ದಾರೆ.

ವೆಂಕಟೇಶ ಹೊನ್ನಪ್ಪ ನಾಯ್ಕ

ಇವರು ಶಿರಸಿ ತಾಲೂಕಿನ ಓಣಿಕೇರಿ ಬೆಂಗಳೆ ಗ್ರಾಮದ ನಿವಾಸಿಯಾಗಿದ್ದಾರೆ. ಸಿಐಟಿಯು ಕಾರ್ಮಿಕ ಸಂಘಟನೆಯ ಜಿಲ್ಲಾ ಮುಖಂಡರಾದ ಇವರು ಕಾರ್ಮಿಕರ ಹೋರಾಟದಲ್ಲಿ ನಿರಂತರವಾಗಿ ಪಾಲ್ಗೊಂಡಿದ್ದಾರೆ.

ಉತ್ತರ ಕನ್ನಡ ಜಿಲ್ಲೆ ಮತ್ತು ಕ್ಷೇತ್ರದ ಸಮಸ್ಯೆಗಳು

ಅರಣ್ಯಭೂಮಿ ಅತಿಕ್ರಮಣ ಸಕ್ರಮ, ಜನತಾ ಮನೆ ಹಾಗೂ ನೆರೆಹಾವಳಿ ಮನೆ–ಭೂಮಿಯನ್ನು ಫಲಾನುಭವಿಗಳ ಹೆಸರಿಗೆ ಆರ್.ಟಿ.ಸಿಯಲ್ಲಿ ದಾಖಲಿಸುವುದು, ಮಾನವ ವಿರೋಧಿ ಯೋಜನೆಗಳಾದ ಹುಲಿ ಯೋಜನೆ ಮತ್ತು ಡಾ. ಕಸ್ತೂರಿ ರಂಗನ್ ಯೋಜನೆಗಳನ್ನು ಕೈಬಿಡುವುದು, ವೃದ್ಧಾಪ್ಯ ವೇತನ, ವಿಧವಾ ವೇತನ, ರೇಷನ್ ಕಾರ್ಡ ಗಳ ಸಮರ್ಪಕ ಹಂಚಿಕೆ, ಕೈಗಾ–ಕಾಳಿ ನಿರಾಶ್ರಿತರಿಗೆ ಯೋಗ್ಯ ಭೂಮಿ, ಪರಿಹಾರ, ಪುನರ್ವಸತಿ, ಗೋಟೆಗಾಳಿ, ಕೇರವಡಿ, ಉಳಗಾ ಭಾಗದ ಜನತೆಗೆ ಸಣ್ಣ ನೀರಾವರಿ ಯೋಜನೆ, ನಿರುದ್ಯೋಗ ನಿವಾರಣೆಗೆ ಕೈಗಾರಿಕಾ ಬೆಳವಣಿಗೆ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಸಮರ್ಪಕ ಜಾರಿ – ಇವು ಜಿಲ್ಲೆಯ ಮತ್ತು ಕ್ಷೇತ್ರದ ಕೆಲವು ನಿರ್ದಿಷ್ಟ ಸಮಸ್ಯೆಗಳು. ಇವುಗಳಿಗೆ ಪರಿಹಾರ ಒದಗಿಸಲು ಸಿಪಿಐ(ಎಂ) ಅಭ್ಯರ್ಥಿಗಳು ಕಟಿಬದ್ಧರಾಗಿದ್ದಾರೆ



ಪಾರದರ್ಶಕ ಸಮರ್ಥ ಗ್ರಾಮ ಪಂಚಾತ್ ನಡೆಸಿದ ಅನುಭವದ ವಿಸ್ತರಣೆಯತ್ತ

ಗದಗ ಜಿಲ್ಲೆಯ ರೋಣಾ ತಾಲ್ಲೂಕಿನ ಬೆಳವಣಿಕೆ ಕ್ಷೇತ್ರದಿಂದ ಸಿಪಿಐ(ಎಂ)ನಿಂದ ನಿಡಗುಂದಿ ಜಿ.ಪಂ. ಕ್ಷೇತ್ರಕ್ಕೆ ಕರಿಯಮ್ಮ ಮಹಾದೇವಪ್ಪ ಗುರಿಕಾರ, ಬೆಳವಣಿಕಿ ಜಿ.ಪಂ. ಕ್ಷೇತ್ರದಿಂದ ಮಹೇಶ ಅಜ್ಜಯ್ಯ ಹಿರೇಮಠ, ಗೋಗೇರಿ ತಾ.ಪಂ. ಕ್ಷೇತ್ರದಿಂದ ಚವ್ಹಾಣ ರೇಣವ್ವ ಹನಮಂತಪ್ಪ, ಬೆಳವಣಿಕೆ ತಾ.ಪಂ.ಯಿಂದ ಬಸವರಾಜ ವೀರಪ್ಪ ಮಂತೂರರವರು ಸ್ಪರ್ಧಿಸಿದ್ದಾರೆ.

ಈ ಪ್ರದೇಶದ ಒಂದು ಗ್ರಾಮ ಪಂಚಾಯತ ಆಡಳಿತವನ್ನು ಅತ್ಯಂತ ಪಾರದರ್ಶಕವಾಗಿ, ಭ್ರಷ್ಟಾಚಾರ ಇಲ್ಲದೆ ನಡೆಸಿದ ಒಂದು ಸಣ್ಣ ಅನುಭವ ಸಿಪಿಐ(ಎಂ)ಗೆ ಇದೆ. ಪರಿಣಾಮಕಾರಿ ವಾರ್ಡ್ ಹಾಗೂ ಗ್ರಾಮ ಸಭೆ ನಡೆಸುವ ಮೂಲಕ ಜನರಿಗೆ ಮೂಲ ಸೌಕರ್ಯಗಳಾದ ಕುಡಿಯುವ ನೀರು, ಗ್ರಾಮ ರಸ್ತೆ ನಿರ್ಮಾಣ, ಬಡವರಿಗೆ ಮನೆ ನಿವೇಶನ, ಉದ್ಯೋಗ ಖಾತ್ರಿ ಯೋಜನೆ ಮುಖಾಂತರ ದುಡಿಯುವ ಕೈಗಳಿಗೆ ಕೆಲಸ ಮುಂತಾದವುಗಳನ್ನು ಅಲ್ಪಾವಧಿಯ ಆಡಳಿತದಲ್ಲಿ ಕಲ್ಪಿಸಲು ಸಾಧ್ಯವಾಗಿದೆ. ಈ ಅನುಭವದ ಹಿನ್ನಲೆಯಲ್ಲಿ ತಮ್ಮ ಕಾರ್ಯ ಕ್ಷೇತ್ರವನ್ನು ಇನ್ನಷ್ಟು ಹಿಗ್ಗಿಸಿ ತಾಲೂಕಾ ಮತ್ತು ಜಿಲ್ಲಾ ಪಂಚಾಯತ ಕ್ಷೇತ್ರಗಳಿಗೆ ವಿಸ್ತರಿಸಲು ಸಿಪಿಐ(ಎಂ) ಬಯಸಿದೆ. ಈ ಪ್ರದೇಶದಲ್ಲಿ ಮಹದಾಯಿ ನದಿ ನೀರಿನ ಹಂಚಿಕೆಗಾಗಿ ನಿರಂತರ ಚಳುವಳಿಯಲ್ಲಿ ಸಿಪಿಐ(ಎಂ) ಪ್ರಮುಖ ಪಾತ್ರ ವಹಿಸುತ್ತಿದೆ.

ಬೇಟಿ ಬಚಾವೋ – ಮೇನಕಾ ಸ್ಟೈಲ್



ಪ್ರಸಕ್ತ

ಕೆ.ಎಸ್. ವಿಮಲಾ



ಭ್ರೂಣ ಲಿಂಗ ಪತ್ತೆ ನಿಷೇಧ ಕಾನೂನಿಗೆ 2003 ರಲ್ಲಿ ತಂದ ತಿದ್ದುಪಡಿಯಲ್ಲಿ ಗರ್ಭಿಣಿ ಮಹಿಳೆಗೆ ತನ್ನ ಮೇಲಾಗಲಿ, ಒಡಲೊಳಗಿನ ಕೂಸಿನ ಮೇಲಾಗಲಿ ಯಾವುದೇ ಹಕ್ಕಿರುವುದಿಲ್ಲವಾದ್ದರಿಂದ ಅವಳನ್ನು ಅಪರಾಧಿತನದ ಪರಿಧಿಯ ಹೊರಗಿಡಲಾಗಿತ್ತು. ಈಗ ಮುಂದಿರುವ ಪ್ರಸ್ತಾಪ ಅವಳ ಮೇಲೆ ಹೊರಿಸುವ ಅನಗತ್ಯ ಒತ್ತಡದ ಜೊತೆ ಹಿತ್ತಲ ಬಾಗಿಲ ಗರ್ಭಪಾತಗಳು ಧಾರಾಳವಾಗಿ ನಡೆಯಲು ಆಸ್ಪದಕೊಡುತ್ತವೆ ಮತ್ತು ಅದು ಮಹಿಳೆಯರ ಜೀವಕ್ಕೇ ಕುತ್ತು ತಂದೊಡ್ಡುತ್ತವೆ. ಇದು ಕಾನೂನಿನ ಕಣ್ಣಿಗೆ ಮಣ್ಣೆರಚಿ ಭ್ರೂಣ ಲಿಂಗ ಪತ್ತೆ ಮಾಡಿ ಗರ್ಭಪಾತ ನಡೆಸುತ್ತಿದ್ದು ಕ್ರಿಮಿನಲ್ ಮೊಕದ್ದಮೆಗಳನ್ನು ಎದುರಿಸುತ್ತಿರುವ ವೈದ್ಯ ವಲಯಕ್ಕೆ ರಿಯಾಯಿತಿ ನೀಡುವುದೇ ಆಗಿದೆ. ಇದರ ಹಿಂದೆ ದೊಡ್ಡ ಬಂಡವಾಳ ಹೂಡಿದ ಕಾರ್ಪೊರೇಟ್ ವೈದ್ಯ ವಲಯದ ಕೈವಾಡ ಖಂಡಿತಾ ಇದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಸಚಿವರ ಹೇಳಿಕೆಗೆ ನಗಬೇಕೋ ಅಳಬೇಕೋ ತಿಳಿಯುತ್ತಿಲ್ಲ. ಘೋಷಣೆಗಳ ಸುರಿಮಳೆಯನ್ನೇ ಸುರಿಸುವ, ಸುಶ್ರಾವ್ಯ ಶಬ್ಧಗಳನ್ನು ಜೋಡಿಸಿ ಜನರನ್ನು ಮೋಡಿ ಮಾಡುತ್ತಿರುವ ಮೋದಿ ಸರ್ಕಾರದ ಮಂತ್ರಿಣಿ ಮೇನಕಾ ಗಾಂಧಿ ಈಗ ಉದ್ಘರಿಸುತ್ತಿರುವ ಮಾತುಗಳು ಕೇಳುಗರಿಗೆ ಕರ್ಕಶವೆನಿಸಬೇಕು. 'ಬೇಟಿ ಬಚಾವೋ ಬೇಟೀ ಪಡಾವೋ' ಎಂಬ ಘೋಷಣೆಗೆ ಜನ ಮರುಳಾಗಿ ನಿಂತು ಮೈಮರೆಯುವಾಗಲೇ ಮತ್ತೊಂದು ಘೋಷಣೆ ಬಂತು. ದೇಶದ ಎಲ್ಲ ತಂದೆಯರೂ ತಮ್ಮ ಹೆಣ್ಣುಮಕ್ಕಳ ಜೊತೆ ಸೆಲ್ಫಿ ತೆಗೆಸಿಕೊಂಡರೆ ಹೆಣ್ಣು ಮಕ್ಕಳ ಮೇಲೆ ಮೋಹ ಹೆಚ್ಚಾಗಿ ದೌರ್ಜನ್ಯಗಳು ಕಡಿಮೆಯಾಗುತ್ತವೆ!!!! ಅಯ್ಯೋ ..ಈ ಮೋಹ ಹೆಚ್ಚಾಗಿಯೇ ಸ್ವತಃ ಹುಟ್ಟಿಗೆ ಕಾರಣನಾದ ತಂದೆಯೇ ಮಗಳ ಮೇಲೆ ಅತ್ಯಾಚಾರ ಅದೂ ನಿರಂತರ ಅತ್ಯಾಚಾರ ನಡೆಸಿದ ಘಟನೆಗಳೂ ಒಂದರ ಹಿಂದೊಂದರಂತೆ ದೇಶದ ಹಲವು ಭಾಗಗಳಲ್ಲಿ ವರದಿಯಾಗಿದೆ ಎಂದು ಪ್ರಧಾನಿಗಳಿಗೆ ಗೊತ್ತಿಲ್ಲ ಪಾಪ.

ಮೇನಕಾರ ದುರಾಲೋಚನೆ

ಇದು ಹುಟ್ಟಿದ ಮೇಲಿನ ಘಟನೆಯಾದರೆ ಇನ್ನು ಚಿಗುರೊಡೆಯುವ ಮುನ್ನವೇ ಚಿವುಟುವ ಕ್ರಿಯೆಗೆ ಈ ದೇಶ ಬಹಳ ಪ್ರಖ್ಯಾತ. ಈಗ 500 ರೂ. ವೆಚ್ಚ ಮಾಡಿ ನಾಳೆಯ 5000 ರೂ. ಉಳಿಸಿ ಎಂಬ ಫಲಕಗಳಿಗೆ ಬಲಿಯಾದ ಕಣ್ಣು ಬಿಡದ ಹೆಣ್ಣು ಕೂಸುಗಳ ಕಾರಣದಿಂಧ ಇಂದು ಹರ್ಯಾಣ, ಪಂಜಾಬ್ ರಾಜ್ಯಗಳು ನರಳುತ್ತಿವೆ. ಅವುಗಳ ದಾರಿಯಲ್ಲಿಯೇ ಹಲವು ರಾಜ್ಯಗಳು ಹಿಂಬಾಲಿಸುತ್ತಿವೆ. ಹ್ಞಾಂ.. ಕಳೆದ ಜನಗಣತಿಗಿಂತ ಈ ಜನಗಣತಿಯಲ್ಲಿ ಲಿಂಗ ಪರಿಮಾಣದಲ್ಲಿ .0000????? ಹೆಚ್ಚಳವಾಗಿದೆ ಎಂದು ಎದೆಯುಬ್ಬಿಸಿ ಹೇಳುವ ಸ್ಥಿತಿಗೆ ರಾಜ್ಯಗಳು ಬಂದು ನಿಂತಿವೆ. ಇಂಥಹ ಒಂದು ವಿಪರೀತ ಸ್ಥಿತಿಗೆ ತಳ್ಳಲ್ಪಡುತ್ತಿರುವುದನ್ನು ನಿಯಂತ್ರಿಸಲೆಂದೇ ಭ್ರೂಣ ಲಿಂಗ ಪತ್ತೆಯನ್ನು ಕಾನೂನುಬಾಹಿರವೆಂದೂ ಮತ್ತು ಶಿಕ್ಷಾರ್ಹ ಅಪರಾಧವೆಂದು ಕಾನೂನು ತರಲಾದ ದೇಶವಿದು. ಹಾಗಿದ್ದೂ ಕಾನೂನಿನ ಕಣ್ಣಿಗೆ ಮಣ್ಣೆರಚಿ ನಡಯುತ್ತಿರುವ ಲಿಂಗ ಪತ್ತೆಯ ಕಾರ್ಯ ಆಗಾಗ್ಗೆ ಪ್ರಕಟವಾಗುವ ಲಿಂಗಾನುಪಾತದ ಪ್ರಮಾಣದಿಂದ ಹೊರಬೀಳುತ್ತಿದೆ.

ಇದನ್ನು ನಿಯಂತ್ರಿಸಲು, ಮತ್ತು ಈ ಏರುಪೇರು ಮುಂದೊಂದು ದಿನ ತಂದೊಡ್ಡುವ ಗಂಭೀರ ಪರಿಣಾಮದ ಬಗ್ಗೆ ಎಚ್ಚರ ಮೂಡಿಸುವ, ತಪ್ಪಿದಲ್ಲಿ ಘೋರ ಶಿಕ್ಷೆಯ ಭಯವನ್ನಾದರೂ ಮೂಡಿಸುವ ಬದಲು ಕೇಂದ್ರದ ಮಂತ್ರಿಯಾದ ಮನೇಕಾ ಗಾಂಧಿಯವರಿಗೆ ಬಂದಿರುವ ಆಲೋಚನೆಯೆಂದರೆ ಭ್ರೂಣ ಲಿಂಗ ಪತ್ತೆಯನ್ನು ಕಡ್ಡಾಯ ಮಾಡಿ, ಸ್ವತಃ ತಾಯಿಯನ್ನೇ ಮಗುವಿನ ಯೋಗಕ್ಷೇಮಕ್ಕೆ ಹೊಣೆಮಾಡುವ ದೂ(ದು)ರಾಲೋಚನೆ!!. ಇನ್ನೂ ಮುಂದುವರೆದು ಹೆರಿಗೆ ಮನೆಯಲ್ಲಿ ಆಗಕೂಡದು, ಆಸ್ಪತ್ರೆಗಳಲ್ಲೇ ಆಗಬೇಕು ಎಂದೂ ಹೇಳಿದ್ದಾರೆ. ಆದರೆ ಪಾಪ ಪ್ರಾಣಿದಯಾ ಸಂಘದ ಅಧ್ಯಕ್ಷರಾಗಿರಬೇಕಾದವರು ಮಹಿಳಾ ಮತ್ತು ಮಕ್ಕಳ ಸಚಿವರಾಗಿದ್ದಾರೆ. ಅವರಿಗೆ ನಮ್ಮ ಗ್ರಾಮಾಂತರದ ಹೆಣ್ಣು ಮಕ್ಕಳು ಪ್ರಾಣಿಗಳಿಗಿಂತಲೂ ಕೀಳಾಗಿ ಬದುಕುತ್ತಾರೆ, ಹೆರಿಗೆ ಆಸ್ಪತ್ರೆಗಳಾಗಲಿ, ಅದ–ಕ್ಕೆ ಸಂಬಂಧಿಸಿದ ವೈದ್ಯಕೀಯ ಸೌಲಭ್ಯಗಳಾಗಲೀ ಬಹುಸಂಖ್ಯೆಯ ಮಹಿಳೆಯರಿಗೆ ಗಗನ ಕುಸುಮವೆಂದು ಇನ್ನೂ ಗೊತ್ತಿದ್ದಂತಿಲ್ಲ. ಈ ತೆರನ ಕಲ್ಪಿತ ಯೋಜನೆಗಳಿಂದ ಮಹಿಳೆಯ ಮೇಲಾಗುವ ಮಾನಸಿಕ ಒತ್ತಡ, ಗರ್ಭದೊಳಗಿನ ಮಗುವಿನ ಲಿಂಗ ಗೊತ್ತಾದ ಕ್ಷಣದಿಂದ ಅವಳ ಮೇಲೆ ಹೆಚ್ಚಬಹುದಾದ ಸಾಮಾಜಿಕ ಕೌಟುಂಬಿಕ ಒತ್ತಡಗಳ ಬಗ್ಗೆ ಕನಿಷ್ಟ ಯೋಚನೆಯೂ ಇಲ್ಲದವರು ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು!

ತಾಯಿಯ ಮೇಲೆ ಅಪರಾಧಿತನ ಹೊರಿಸುವ ಹುನ್ನಾರ

ಪುರುಷಪ್ರಧಾನ ಪಾಳೆಯಗಾರೀ ವ್ಯವಸ್ಥೆ ಕಿಂಚಿತ್ತೂ ಕುಂದದೇ ಜೀವಂತವಿರುವ ನಮ್ಮ ಸಮಾಜದಲ್ಲಿ ಈಗಲೂ ಗಂಡು ಸಂತಾನಕ್ಕೇ ಪ್ರಾಶಸ್ತ್ಯವಿದೆ. ನಮ್ಮ ಜನಪದರು ಹಾಡಿದ ಹಾಡಿನಂತೆ 'ಸೊಸೆಯು ಗಂಡ್ ಹಡೆಯಾಲಿ, ಮಗಳು ಹೆಣ್ ಹಡೆಯಾಲೀ" ಎಂಬ ಭಾವನೆಯೇ ಈಗಲೂ ಪ್ರಚಲಿತವಿದೆ. ಹೆಣ್ಣು ಹೆತ್ತವಳು ಕಣ್ಣಿನ ಹುಣ್ಣಿನಂತೆ ಪರಿಗಣಿಸುವ ಕುಟುಂಬಗಳು 'ಸುಶಿಕ್ಷಿತ' ವಿಭಾಗದಲ್ಲಿಯೇ ಇದ್ದಾವೆ. ಗರ್ಭ ಧರಿಸಿದ ಕ್ಷಣದಿಂದಲೇ ಆತಂಕದ ಕೂಪಕ್ಕೆ ಮಹಿಳೆಯನ್ನು ತಳ್ಳುವ ಸ್ಥಿತಿಯನ್ನು ದೂರಮಾಡುವ ಬದಲು ಇಂಥಹ ಆಲೋಚನೆಗೆ ಸಚಿವರೇ ದಾರಿ ಮಾಡಿಕೊಡುತ್ತಿರುವುದು ವಿಪರ್ಯಾಸ. ಭಾರತದ ಕಟುವಾಸ್ತವವನನು ಅರ್ಥಮಾಡಿಕೊಂಡೇ 1994 ರಲ್ಲಿಯೇ ಜಾರಿಗೆ ಬಂದ ಭ್ರೂಣ ಲಿಂಗ ಪತ್ತೆ ನಿಷೇಧ ಕಾನೂನಿಗೆ 2003 ರಲ್ಲಿ ತಂದ ತಿದ್ದುಪಡಿಯಲ್ಲಿ ಗರ್ಭಿಣಿ ಮಹಿಳೆಗೆ ತನ್ನ ಮೇಲಾಗಲಿ, ಒಡಲೊಳಗಿನ ಕೂಸಿನ ಮೇಲಾಗಲಿ ಯಾವುದೇ ಹಕ್ಕಿರುವುದಿಲ್ಲವಾದ್ದರಿಂದ ಅವಳನ್ನು ಅಪರಾಧಿತನದ ಪರಿಧಿಯ ಹೊರಗಿಡಲಾಗಿತ್ತು. ಈಗ ಮುಂದಿರುವ ಪ್ರಸ್ತಾಪ ಅವಳ ಮೇಲೆ ಹೊರಿಸುವ ಅನಗತ್ಯ ಒತ್ತಡದ ಜೊತೆ ಹಿತ್ತಲ ಬಾಗಿಲ ಗರ್ಭಪಾತಗಳು ಧಾರಾಳವಾಗಿ ನಡೆಯಲು ಆಸ್ಪದಕೊಡುತ್ತವೆ ಮತ್ತು ಅದು ಮಹಿಳೆಯರ ಜೀವಕ್ಕೇ ಕುತ್ತು ತಂದೊಡ್ಡುತ್ತವೆ.

ಈ ಪ್ರಸ್ತಾಪ ಮೇಲ್ನೋಟಕ್ಕೆ ಗರ್ಭ ಮತ್ತು ಗರ್ಭಿಣಿಯ ಮೇಲೆ ಕಣ್ಣಾವಲೆಂಬಂತೆ ಅನಿಸಿದರೂ, ಇದು ಕಾನೂನಿನ ಕಣ್ಣಿಗೆ ಮಣ್ಣೆರಚಿ ಭ್ರೂಣ ಲಿಂಗ ಪತ್ತೆ ಮಾಡಿ ಗರ್ಭಪಾತ ನಡೆಸುತ್ತಿದ್ದು ಕ್ರಿಮಿನಲ್ ಮೊಕದ್ದಮೆಗಳನ್ನು ಎದುರಿಸುತ್ತಿರುವ ವೈದ್ಯ ವಲಯಕ್ಕೆ ರಿಯಾಯಿತಿ ನೀಡುವುದೇ ಆಗಿದೆ. ಇದರ ಹಿಂದೆ ದೊಡ್ಡ ಬಂಡವಾಳ ಹೂಡಿದ ಕಾರ್ಪೊರೇಟ್ ವೈದ್ಯ ವಲಯದ ಕೈವಾಡ ಖಂಡಿತಾ ಇದೆ. ಈಗ ದೇಶ ಮತ್ತು ರಾಜ್ಯದ ಸರ್ಕಾರಗಳು ಗಂಭೀರವಾಗಿ ಪರಿಗಣಿಸಬೇಕಾಗಿರುವುದು 0–6 ರ ವಯೋಮಾನದ ಲಿಂಗಾನುಪಾತದಲ್ಲಿ ಆಗುತ್ತಿರುವ ತೀವ್ರ ಇಳಿಕೆಯನ್ನು. ಅದನ್ನು ಸರಿಪಡಿಸಲು ಸಕಾರಾತ್ಮಕ ಹೆಜ್ಜೆಗಳನ್ನಿಡಬೇಕೇ ಹೊರತೂ ನಿದ್ದೆ ಬರುತ್ತಿರುವವರಿಗೆ ಹಾಸಿಗೆ ಹಾಸಿ ಕೊಡುವುದಲ್ಲ.

ಮನೇಕಾ ಗಾಂಧಿಯವರು ಕಣ್ಣು ಬಿಟ್ಟು ನೋಡಬೇಕಾಗಿರುವುದು ತಮ್ಮದೇ ಕ್ಷೇತ್ರವನ್ನು. ಆರು ಬಾರಿ ಗೆದ್ದು ಬಂದ ಉತ್ತರ ಪ್ರದೇಶದ ಫಿಲ್ಬಿಟ್ ಕ್ಷೇತ್ರದಲ್ಲಿ ತೀವ್ರವಾಗಿ ಕುಸಿಯುತ್ತಿರುವ ಲಿಂಗಾನುಪಾತವನ್ನು. 2001 ರಲ್ಲಿ ರಾಷ್ಟ್ರೀಯ ಅನುಪಾತಕ್ಕಿಂತ ಹೆಚ್ಚಾಗಿ 1000 ಕ್ಕೆ 940 ಇದ್ದದ್ದು 2011 ರ ಹೊತ್ತಿಗೆ 912 ಕ್ಕೆ ಇಳಿದಿದೆ. ಗರ್ಭಸ್ಥ ಶಿಶುವಿನ ಲಿಂಗ ಪತ್ತೆ ಮಾಡುವುದು ಶಿಕ್ಷಾರ್ಹ ಅಪರಾಧವಾಗಿರುವಾಗಲೇ ಇಂಥಹ ಕುಸಿತ ಇನ್ನು ಅದನ್ನೇ ಕಡ್ಡಾಯ ಮಾಡುವುದೆಂದರೆ, ಅಂಗೈ ಹುಣ್ಣಿಗೆ ಕನ್ನಡಿ ಬೇಕೇ?

ಅತಿಥಿ ಉಪನ್ಯಾಸಕರ ಬೇಡಿಕೆ ಈಡೇರಿಸಬೇಕೆಂದು ವಿದ್ಯಾರ್ಥಿಗಳಿಂದ ಪ್ರತಿಭಟನೆ

ಅತಿಥಿ ಉಪನ್ಯಾಸಕರ ಹೋರಾಟದ ಮುಂದುವರೆದ ಭಾಗವಾಗಿ ಫೆಬ್ರುವರಿ 3 ರಿಂದ 5 ರವರೆಗೆ ಎಲ್ಲಾ ಶಾಸಕರ ಮನೆ ಮುಂದೆ ಧರಣಿ ನಡೆಸಿದ್ದಾರೆ.

ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿ ನಿರಂತರವಾಗಿ ಹಲವು ದಿನಗಳಿಂದ ಹೋರಾಟ ನಡೆಸುತ್ತಿರುವ ಅತಿಥಿ ಉಪನ್ಯಾಸಕರು ಹಲವು ಹಂತಗಳ ವಿವಿಧ ರೀತಿಯ ಪ್ರತಿಭಟನೆಗಳನ್ನು ನಡೆಸುತ್ತಿದ್ದಾರೆ. ಹೋರಾಟ ಮುಂದುವರೆದ ಭಾಗವಾಗಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಎಸ್.ಎಫ್.ಐ. ಸಂಘಟನೆಯ ವಿದ್ಯಾರ್ಥಿಗಳು ಅತಿಥಿ ಉಪನ್ಯಾಸಕರ ಬೇಡಿಕೆಗಳನ್ನು ಈಡೇರಿಸಿ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಅನುವು ಮಾಡಿಕೊಡಬೇಕೆಂದು ಆಗ್ರಹಿಸಿದ್ದಾರೆ.

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ವಿದ್ಯಾರ್ಥಿಗಳು ಎಸ್.ಎಫ್.ಐ. ನೇತೃತ್ವದಲ್ಲಿ ರಾಜ್ಯ ಸರ್ಕಾರವು ಬೇಡಿಕೆ ಈಡರಿಸಲು ಯಾವುದೇ ಕ್ರಮವಹಿಸದೆ ಇರುವುದನ್ನು ಖಂಡಿಸಿ ನೂರಾರು ವಿದ್ಯಾರ್ಥಿಗಳು ಪ್ರತಿಕೃತಿ ದಹನ ಮಾಡಿದರು. ಸಂಘಟನೆಯ ಜಿಲ್ಲಾ ಅಧ್ಯಕ್ಷರಾದ ಮಂಜುನಾಥ್ ಡಗ್ಗಿ ಮತ್ತು ಕಾರ್ಯದರ್ಶಿ ಗ್ಯಾನೇಶ ಕಡಗದ ನೇತೃತ್ವ ವಹಿಸಿದ್ದರು.

ಗದಗ ಜಿಲ್ಲೆಯಲ್ಲಿ ಡಿವೈಎಫ್ಐ ನೇತ್ವದಲ್ಲಿ ಪ್ರಥಮ ದರ್ಜೆ ಸರ್ಕಾರಿ ಪದವಿ ಕಾಲೇಜಿನ ಅತಿಥಿ ಉಪನ್ಯಾಸಕರು ರಾಜ್ಯದಲ್ಲಿ ತರಗತಿಗಳನ್ನು ಬಹಿಷ್ಕರಿಸಿ ಪ್ರತಿಭಟನೆ ಮಾಡುತ್ತಿದ್ದು ರಾಜ್ಯ ಸರ್ಕಾರ ಕೂಡಲೇ ಬೇಡಿಕೆಗಳ ಪರಿಹಾರ ನೀಡಬೇಕು ಎಂದು ಆಗ್ರಹಿಸಿದ್ದಾರೆ. ಜಿಲ್ಲಾ ಸಂಚಾಲಕರಾದ ಪೀರು ರಾಥೋಡ ಮತ್ತಿತರ ಮುಖಂಡರು ಭಾಗವಹಿಸಿದ್ದರು. ಫೆಬ್ರವರಿ 2ರಂದು ನಡೆದ ಪ್ರತಿಭಟನೆಯಲ್ಲಿ ಅತಿಥಿ ಉಪನ್ಯಾಸಕರು ಒಳಗೊಂಡು ಎಸ್ಎಫ್ಐ, ಡಿವೈಎಫ್ಐ, ಪ್ರಗತಿಪರ ಬುದ್ದಿಜೀವಿಗಳು ಸಹ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಹಾವೇರಿ ಗಾಂಧಿಪುರದಲ್ಲಿ ಸರ್ಕಾರಿ ಪ್ರಥಮದರ್ಜೆ ಕಾಲೇಜನ್ನು ಬಂದ್ ಮಾಡಿ ಮೆರವಣಿಗೆ ಹೊರಟ ಎಸ್ಎಫ್ಐನ ನೂರಾರು ವಿದ್ಯಾರ್ಥಿಗಳು ಪ್ರಮುಖ ವೃತ್ತದಲ್ಲಿ ರಸ್ತೆ ತಡೆ ನಡೆಸುವ ಮೂಲಕ ಅತಿಥಿ ಉಪನ್ಯಾಸಕರ ಹೋರಾಟವನ್ನು ಬೆಂಬಲಿಸಿದರು. ಎಸ್ಎಫ್ಐ ಜಿಲ್ಲಾ ಅಧ್ಯಕ್ಷರಾದ ರೇಣುಕಾಕಹಾರ, ಜಿಲ್ಲಾ ಮುಖಂಡರು ಹಾಗೂ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ರಾಣಿಬೆನ್ನೂರಿನಲ್ಲಿ ಎಸ್ಎಫ್ಐನ ನೂರಾರು ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ರಾಜ್ಯದ ವಿವಿಧ ಕಡೆಗಳಲ್ಲಿ ಅತಿಥಿ ಉಪನ್ಯಾಸಕರು ಪ್ರತಿಭಟನೆ ಮುಂದುವರೆಸಿದ್ದು, ಇವರ ಹೋರಾಟವನ್ನು ಬೆಂಬಲಿಸಿ ವಿದ್ಯಾರ್ಥಿಗಳು ಒಳಗೊಂಡು ವಿವಿಧ ಸಂಘಟನೆಗಳ ನೇತೃತ್ವದಲ್ಲೂ ಪ್ರತಿಭಟನೆಗಳು ನಡೆದಿದೆ.





ಇತ್ತೀಚೆಗೆ ದೆಹಲಿಯಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ ಪ್ರತಿಭಟನೆ ನಡೆಸುತ್ತಿರುವಾಗ ಎಲ್ಲ ಖಈಖ ಕಾರ್ಯಕರ್ತರ ಕೈಯಲ್ಲಿ ದೇಶಕ್ಕಾಗಿ ಹೋರಾಡಿದ ಮಹಾನ್ ಚೇತನಗಳಾದ ಭಗತ್ ಸಿಂಗ್ ರಾಜಗುರು ಸುಖದೇವರ, ಅಂಬೇಡ್ಕರ್, ಜೋತಿ ಬಾಪುಲೆ, ಮುಂತಾದವರ ಬಾವ ಚಿತ್ರಗಳು ರಾರಾಜಿಸುತ್ತಿತ್ತು ..
ಅಲ್ಲೊಂದು ಅಚ್ಚರಿ ಕಾಣಿಸಿಕೊಂಡಿತು...
ಧರ್ಮದ ಮೇಲಿನ ಕುರುಡು ದುರಭಿಮಾನ ಹೊಂದಿರುವ, ದೇಶ ಭಕ್ತಿಯನ್ನು ಗುತ್ತಿಗೆಗೆ ಪಡೆದವರಂತೆ ಮಾತನಾಡುವ Rss ನ ಕೋಮುವಾದಿ ಅಜೇಂಡಾವನ್ನು ವಿದ್ಯಾರ್ಥಿಗಳ ಮಧ್ಯೆ ತಂದು ಈ ದೇಶದ ಐಕ್ಯತೆ, ಸಮಗ್ರತೆ ಒಡೆಯುವ.. ಅಖಿಲ ಭಾರತ ವಿದ್ಯಾರ್ಥಿ ಪರಿಷತ್ **abvp** ಎಂಬ ಘನಂದಾರಿ ಸಂಘಟನೆಯ ಮುಖಂಡರು ಅಸಾರಾಂ ಬಾಪು, ಬಾಬಾ ರಾಮದೇವ್ ಮುಂತಾದ ಕಾವಿ ತೊಟ್ಟ ಕಾಮಿ ಸ್ವಾಮೀಜಿಗಳ ಭಾವ ಚಿತ್ರ ಹಿಡಿದು ಧರ್ಮ, ಸಂಸ್ಕೃತಿ ರಕ್ಷಣೆ ಆಗಬೇಕೇಂದು... ! ಗಂಟಲು ಕಿತ್ತುಕೊಳ್ಳುತ್ತಿದ್ದರು....
ಈಗ ಹೇಳಿ... Abvp ಎಂದರೆ New Meaning ಅಸಾರಾಂ ಬಾಪು ವಿದ್ಯಾರ್ಥಿಪರಿಷತ್.

– ವಾಸು ರೆಡ್ಡಿ

ಕೃಷಿ ಉತ್ಪನ್ನಗಳ ಆದಾಯವು ಅವುಗಳ ವೆಚ್ಚವನ್ನು ಸರಿದೂಗಿಸುತ್ತಿಲ್ಲವೇಕೆ ?

ಯು.ಬಸವರಾಜ್



'ಜನಶಕ್ತಿ'ಯ ಜನವರಿ 24 ರ ಸಂಚಿಕೆಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿಗಳ ಲೇಖನ ಕರ್ನಾಟಕದಲ್ಲಿ ರೈತರ ಆತ್ಮಹತ್ಯೆಗಳ ಸಂಖ್ಯೆ ಕಳೆದ ಏಳು ತಿಂಗಳಲ್ಲೇ 1000 ದಾಟಲು ಕಾರಣಗಳೇನು ಎಂದು ಪರಿಶೀಲಿಸಿತ್ತು. ಕೃಷಿ ಉತ್ಪನ್ನಗಳ ಆದಾಯವು ಅವುಗಳ ವೆಚ್ಚವನ್ನು ಸರಿದೂಗಿಸುತ್ತಿಲ್ಲವಾದ್ದರಿಂದ ಕುಟುಂಬ ನಿರ್ವಹಣೆಗಾಗಿ ಮಾಡುವ ಸಾಲಗಳ ಬಾಧೆ ಒಂದು ಕಾರಣ ಎಂದು ಗುರುತಿಸಲಾಗಿತ್ತು. ಆದರೆ ಈ ರೀತಿ ಕೃಷಿ ಉತ್ಪನ್ನಗಳ ಆದಾಯ–ಖರ್ಚುಗಳನ್ನು ಸರಿದೂಗಿಸಲು ಆಗುತ್ತಿಲ್ಲವೇಕೆ ಎಂಬ ಪ್ರಶ್ನೆಯನ್ನು ಲೇಖನದ ಈ ಭಾಗದಲ್ಲಿ ಲೇಖಕರು ಪರಿಶೀಲಿಸಿದ್ದಾರೆ.

ಈ ದಿನಗಳಲ್ಲಿನ ಕೃಷಿ ಉತ್ಪನ್ನಗಳ ಆದಾಯ, ಕನಿಷ್ಠ ಅವುಗಳ ಉತ್ಪಾದನಾ ವೆಚ್ಚಕ್ಕೆ ಸಮನಾಗಿಲ್ಲ. ಕೋಷ್ಟಕ–1ರಲ್ಲಿನ ಲೆಕ್ಕಾಚಾರದಂತೆ ಭತ್ತದ ಉತ್ಪಾದನಾ ವೆಚ್ಚ ಪ್ರತಿ ಚೀಲಕ್ಕೆ (68ಕೇಜಿ) 2014–15ರಲ್ಲಿ 1,181 ರೂಗಳಾಗಿದೆ. ಆದರೆ ಸರಕಾರ ನಿಗದಿಸಿದ ಬೆಂಬಲ ಬೆಲೆ ಕೇವಲ 984 ರೂಗಳಾಗಿದೆ. ಹಲವು ಲೆಕ್ಕಾಚಾರಗಳನ್ನೊಳಗೊಳ್ಳದ ಕೊರತೆಗಳೊಂದಿಗೆ ರೈತ ಸಂಘ ಗುರುತಿಸಿದ ಈ ಬೆಲೆಗೆ ಹೋಲಿಸಿದರೂ ಕೂಡ ಬೆಂಬಲಬೆಲೆ 197 ರೂನಷ್ಟು ಕಡಿಮೆಯಾಗಿದೆ. ಅಂದರೆ, ಸರಾಸರಿ ಪ್ರತಿ ಎಕರೆ ಇಳುವರಿ 35 ಚೀಲಕ್ಕೆ ಗುರುತಿಸಿದ ಉತ್ಪಾದನಾ ವೆಚ್ಚ 41,385 ಆದರೇ, ಬೆಂಬಲ ಬೆಲೆಯಿಂದ ಸಿಗುವ ಮೊತ್ತ ಅದು ಕೇವಲ 32,338ರೂ ಮಾತ್ರವೇ ಆಗಿದೆ. ಹೀಗಾಗಿ, ಪ್ರತಿ ಎಕರೆಗೆ ಸುಮಾರು 9000 ರೂ ನಷ್ಟ ಉಂಟಾಗುತ್ತದೆ.

ಅದೇ ರೀತಿ,

- ಕಲಬುರಗಿಯ ತೊಗರಿ ಲೆಕ್ಕಾಚಾರ ಗಮನಿಸಿದರೆ, ಸರಕಾರದ ಬೆಂಬಲ ಬೆಲೆ ನಿಗದಿಯು 2,491ರೂ. ಗಳಷ್ಟು ಕಡಿಮೆ ಇದ್ದು, ಪ್ರತಿ ಎಕರೆಗೆ ಸುಮಾರು 7,500ರೂ ನಷ್ಟ ಉಂಟು ಮಾಡುತ್ತದೆ.
- ರಾಗಿಯ ಪ್ರತಿ ಕ್ವಿಂಟಾಲ್ ಉತ್ಪಾದನಾ ವೆಚ್ಚ 2,547ರೂ ಆದರೆ ಬೆಂಬಲ ಬೆಲೆ ಕೇವಲ 1650 ಮಾತ್ರವೇ ಆಗಿದೆ.
- ಹಾಲು ಪ್ರತಿ ಲೀಟರ್ ಉತ್ಪಾದನಾ ವೆಚ್ಚ 31.50ರೂ ಆಗಿದ್ದರೆ, ಬೆಲೆಯು ಕೇವಲ 21.10 + 4ರೂ ಮಾತ್ರವೇ ಆಗಿದೆ.

ರಾಗಿ ಮತ್ತು ಬಿಳಿಜೋಳದ ಬೆಂಬಲ ಬೆಲೆಯನ್ನು ಕೇಂದ್ರ ಸರಕಾರ ಕ್ರಮವಾಗಿ 1,590 ಮತ್ತ 1,650. ಎಂದರೆ, ಸದರಿ ಬೆಳೆಗಳನ್ನು ಒಂದೆಡೆ 2000ರೂ ದರದಲ್ಲಿ ಖರೀದಿಸುವಂತೆ ಕರ್ನಾಟಕ ಕೃಷಿ ಬೆಲೆ ಆಯೋಗ ರಾಜ್ಯ ಸರಕಾರಕ್ಕೆ ಸೂಚಿಸುತ್ತದೆ. ಮತ್ತೊಂದೆಡೆ, ಅವುಗಳ ಲೆಕ್ಕಾಚಾರವನ್ನು ರೈತರ ಸಮ್ಮುಖದಲ್ಲಿ ಲೆಕ್ಕಿಸುವಾಗ ಅದು 2500ಕ್ಕೂ ಹೆಚ್ಚಾಗಿದೆಯೆಂದು ಹೇಳುತ್ತದೆ. ರೇಷ್ಮೆ ಗೂಡಿನ ಉತ್ಪಾದನಾವೆಚ್ಚವನ್ನು ವೈಜ್ಞಾನಿಕವಾಗಿ ಲೆಕ್ಕ ಹಾಕಿದ್ದೇನೆಂದು ಹೇಳುವ ರಾಜ್ಯ ಸರಕಾರ ನೇಮಿಸಿದ ತಾಂತ್ರಿಕ ಸಮಿತಿ ವರದಿಯು ಮಿಶ್ರತಳಿಗೆ ಪ್ರತಿ ಕೆ.ಜಿ ಗೂಡಿಗೆ 280 ರೂ ಇರಬೇಕೆನ್ನುತ್ತದೆ , ಮತ್ತು ಅದು ಕೇಂದ್ರ ರೇಷ್ಮೆ ಮಂಡಳಿ ನಿಗದಿಸಿದ 239 ರೂ ಸರಿಯಲ್ಲವೆಂದಿದೆ.

ಹೀಗಾಗಿ, ರೈತ ಕುಟುಂಬಗಳು ಉತ್ಪಾದನಾ ವೆಚ್ಚ ಪಡೆಯಲಾಗದ ಕಾರಣದಿಂದಾಗಿ, ಸಾಲಗಾರರಾಗುವಾಗಲೇ ಮತ್ತು ಕುಟುಂಬದ ಜೀವನ ನಿರ್ವಹಣೆಯ ಒಟ್ಟು ವೆಚ್ಚಕ್ಕೆ ಆದಾಯವಿಲ್ಲದೇ ಅದನ್ನು ಇನ್ನೊಂದು ಸಾಲವಾಗಿ ಮೈಮೇಲೆಳೆದುಕೊಳ್ಳುವಂತಾಗಿದೆ. ಜೀವನ ನಿರ್ವಹಣೆಗೆ ಆದಾಯವಿಲ್ಲದಿರುವಾಗ ರೋಗರುಜಿನಗಳಿಗೆ ಮತ್ತು ಮಕ್ಕಳ ವಿದ್ಯಾಭ್ಯಾಸ, ಉದ್ಯೋಗ, ಮದುವೆ, ಹಬ್ಬಗಳು ಮುಂತಾದವುಗಳ ವೆಚ್ಚವೂ ಮತ್ತೊಂದು ದೊಡ್ಡ ಸಾಲವಾಗಿ ಎರಗುತ್ತದೆ. ಜೀವನ ವೆಚ್ಚ ಮತ್ತು ವಿದ್ಯಾಭ್ಯಾಸ, ಮದುವೆ, ಹಬ್ಬಗಳು ಮತ್ತು ಕುಟುಂಬದ ಆರೋಗ್ಯ ಎಲ್ಲವೂ ಎಲ್ಲರ ಆದಾಯದ ಭಾಗವಾಗಿರುತ್ತವೆ. ಆದರೆ, ಇವುಗಳು ಇವುಗಳು ರೈತ ಕುಟುಂಬಗಳ ಸಾಲಹೆಚ್ಚಿಸುವ ಸಾಧನಗಳಾಗಿ ಇದೀಗ ರೂಪುಗೊಂಡಿವೆ. ಇವೆಲ್ಲವೂ, ಈ ಸಾಲದ ಬಾಧೆ–ಯೆಂಬ ಒತ್ತಡ ಆತ್ಮಹತ್ಯೆಯ ಹಿಂದೆ ಅಡಗಿರುವುದನ್ನು ಸ್ಪಷ್ಟಪಡಿಸುತ್ತವೆ. ಪರಿಸ್ಥಿತಿ ಹೀಗಿರುವಾಗ, ಯಾರೋ ಕೆಲವರು ಹೊಟ್ಟೆ ತುಂಬಿದ ಮತ್ತು ಕೃಷಿಯಲ್ಲಿ ತೆ–ಊಡಗದ ಕೆಲ ಭೂಮಾಲಕರು ಜೂಜಾಡುವುದನ್ನು ಮತ್ತು ದುಂದು ವೆಚ್ಚ ಮಾಡುತ್ತಿರುವುದನ್ನು ರೈತರ ಆತ್ಮಹತ್ಯೆಗಳಿಗೆ ಆರೋಪಿಸಿ ಅದೇ ಕಾರಣವೆಂದೇಳುವುದು ಅಪಹಾಸ್ಯವಾಗುತ್ತದೆ ಮತ್ತು ಹಾಗೆ ಹೇಳುವವರಿಗಿರುವ ಅಜ್ಞಾನವನ್ನು ಅದು ತೋರಿಸುತ್ತದೆ.

ಈ ದಿನಗಳ ಕೃಷಿ ಉತ್ಪನ್ನಗಳ ಬೆಂಬಲ ಬೆಲೆಗಳು ಮತ್ತು ಮಾರುಕಟ್ಟೆ ಬೆಲೆಗಳು ವಿವಿಧ ರಾಜ್ಯಗಳ ಸರಾಸರಿ ಉತ್ಪಾದನಾ ವೆಚ್ಚವನ್ನು ಮತ್ತು ಇಳುವರಿಯನ್ನು ಆಧರಿಸಿ ನಿರ್ಧರಿಸಿದ್ದಲ್ಲ. ಬದಲಿಗೆ, ಬಹುತೇಕ ವಿದೇಶಿ ಬಹುರಾಷ್ಟ್ರೀಯ ಕಂಪೆನಿಗಳು ತಮ್ಮ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ವಿಸ್ತರಿಸಿಕೊಳ್ಳುವ ಮತ್ತು ಭಾರತದ ಕೃಷಿಯನ್ನು ಮತ್ತು ಗ್ರಾಹಕ ಮಾರುಕಟ್ಟೆಯನ್ನು ಸ್ವಾಧೀನ ಮಾಡಿಕೊಳ್ಳುವ ಅವುಗಳ ತಂತ್ರದ ಏರಿಳಿತಗಳನ್ನವಲಂಬಿಸಿವೆ.

ಹೀಗಾಗಿ, ಜಾಗತೀಕರಣದ ನೀತಿಗಳ ಆರಂಭದ 1994 ರಿಂದ ಹಿಡಿದು ಇಲ್ಲಿಯವರೆಗಿನ ಮುಕ್ತ ಮಾರುಕಟ್ಟೆಯ ಕೃಷಿ ಉತ್ಪನ್ನಗಳ ಬೆಲೆಗಳು ಈ ಏರಿಳಿತದ ಪರಿಣಾಮಕ್ಕೊಳಪಟ್ಟಿವೆ. ಈ ಬಹುರಾಷ್ಟ್ರೀಯ ಸಂಸ್ಥೆಗಳ ತಂತ್ರಕ್ಕನುಗುಣವಾಗಿಯೇ ಸರಕಾರದ ಕನಿಷ್ಠ ಬೆಂಬಲ ಬೆಲೆ ಹಾಗೂ ಖರೀದಿ ನೀತಿಗಳು ರೂಪುಗೊಳ್ಳುತ್ತಿವೆ.

ಬೆಲೆಗಳ ಏರಿಳಿತಗಳಿಂದ ಸಂರಕ್ಷಿಸಲೆಂದಿರುವ ಭಾರತದ ಮತ್ತು ವಿವಿಧ ರಾಜ್ಯಗಳ ವಿವಿಧ ಕೃಷಿ ಉತ್ಪನ್ನಗಳನ್ನು ಬೆಂಬಲ ಬೆಲೆಗೆ ಖರೀದಿಸುವ ಮಾರುಕಟ್ಟೆಯ ಏಜೆನ್ಸಿಗಳು (ಎಫ್‌ಸಿಐ, ಸಿಸಿಐ, ಮಾರುಕಟ್ಟೆ ಒಕ್ಕೂಟಗಳು ಮುಂತಾದವು) ಈ ಮೊದಲೇ ಸ್ವತಂತ್ರವಾಗಿ ಕಾರ್ಯನಿರ್ವಹಿಸಲಾಗದ ದುರ್ಬಲ ಸಂಸ್ಥೆಗಳಾಗಿದ್ದವು ಮತ್ತು ಖರೀಧಿಗೆ ಅಗತ್ಯವಾದ ಬಂಡವಾಳವನ್ನೂ ಹೊಂದಿರಲಿಲ್ಲ ಅಥವಾ ಸರಕಾರಗಳು ದುರುದ್ದೇಶದಿಂದಲೇ ಅದನ್ನು ಒದಗಿಸುತ್ತಿರಲಿಲ್ಲ. ಮಾತ್ರವಲ್ಲ, ಮಾರುಕಟ್ಟೆಯ ಮಧ್ಯ ಪ್ರವೇಶಕ್ಕೆ ತೀವ್ರ ಒತ್ತಡ ಜನಗಳಿಂದ ಬಂದ ನಂತರವೇ, ಮಧ್ಯೆ ಪ್ರವೇಶಿಸುವಂತೆ ಸರಕಾರಗಳು ಕ್ರಮವಹಿಸಿವೆ ಮತ್ತು ವಹಿಸುತ್ತಿವೆ. ತಡವಾದ ಮಧ್ಯಪ್ರವೇಶದ ವೇಳೆಗಾಗಲೇ, ಬಹುತೇಕ ಕೃಷಿ ಉತ್ಪನ್ನಗಳನ್ನು ಸಾಲದ ಒತ್ತಡ ಹಾಗೂ ದಾಸ್ತಾನು ಮಾಡಲಾಗದ ಕೆಟ್ಟ ಪರಿಸ್ಥಿತಿಯಿಂದಾಗಿ ರೈತರು ಕುಸಿದ ಬೆಲೆಗಳಿಗೆ ಮಾರಾಟ ಮಾಡಿರುತ್ತಿದ್ದರು. ಇವುಗಳ ತಡವಾದ ಮಧ್ಯಪ್ರವೇಶವು, ಕುಸಿದ ಬೆಲೆಗೆ ಖರೀದಿಸಿದ ರೈತರಿಂದ ವ್ಯಾಪಾರಸ್ಥರು ಸರಕಾರದ ಬೆಂಬಲ ಬೆಲೆಗೆ ರೈತರ ಹೆಸರಿನಲ್ಲಿ ಮಾರಾಟ ಮಾಡಿ ಲಾಭಗಳಿಸಲು ನೆರವಾಗುತ್ತಿದ್ದವು. ಇದು ಆಳುವವರ ರೈತ ವಿರೋದಿ ಹಾಗೂ ವ್ಯಾಪಾರಿಗಳ ಪರವಾದ ರಾಜಕೀಯ ಕಾರ್ಯತಂತ್ರವೂ ಆಗಿದೆಯೆನ್ನಿ ! ನಿಗದಿಸಲಾದ ಬೆಂಬಲ ಬೆಲೆಗೆ ಖರೀದಿಸಲು ಇವುಗಳನ್ನು ಪ್ರಾಮಾಣಿಕವಾಗಿ ತೊಡಗಿಸಲು ಮುಂದಾಗಿದ್ದಲ್ಲಿ ಕೊನೆಯ ಪಕ್ಷ, ರೈತರ ಸಾಲದ ಪ್ರಮಾಣವನ್ನು ಕೊಂಚ ಕಡಿಮೆ ಮಾಡಬಹುದಿತ್ತು.

ವಂಚನೆಯ ಬೆಂಬಲ ಬೆಲೆ

ಮತ್ತೊಂದು ಪ್ರಮುಖ ಸಮಸ್ಯೆ ಎಂದರೆ, ಕನಿಷ್ಠ ಬೆಂಬಲ ಬೆಲೆ ನಿಗದಿ. ಕೇಂದ್ರ ಸರಕಾರ ಇದನ್ನೂ ಕೂಡ ಅತ್ಯಂತ ಅವೈಜ್ಞಾನಿಕವಾಗಿ ಲೆಕ್ಕಿಸಿ ನಿಗದಿಸುತ್ತದೆ. ಈಚೆಗೆ ಸರಕಾರಕ್ಕೆ ಮಧ್ಯಂತರ ವರದಿ ಸಲ್ಲಿಸಿದ ಕರ್ನಾಟಕ ಕೃಷಿ ಬೆಲೆ ಆಯೋಗ ಕೇಂದ್ರ ಸರಕಾರದ ಬೆಲೆ ನಿಗದಿಯ ದೋಷಗಳನ್ನು ಬಯಲಿಗೆಳೆದಿದೆ. ಕೋಷ್ಟಕ 11ನ್ನು ಗಮನಿಸಿ. ಅದು ಕರ್ನಾಟಕದ ರಾಗಿ ಮತ್ತು ಜೋಳದ ಕುರಿತ ಲೆಕ್ಕಾಚಾರ ಮಾಡಿದ ಅಂಶಗಳನ್ನು ಎತ್ತಿ ತೋರಿಸಿದೆ. 2010–11 ರಲ್ಲಿ ಆರ್ಥಿಕ ಮತ್ತು ಸಂಖ್ಯಾಶಾಸ್ತ್ರ ನಿರ್ದೇಶನಾಲಯ ಪ್ರತಿ ಕ್ವಿಂಟಾಲ್ ರಾಗಿ ಮತ್ತು ಜೋಳದ ವೆಚ್ಚವನ್ನು ಕ್ರಮವಾಗಿ 1,566 ಮತ್ತು 1,992 ಎಂದರೆ, ಬೆಂಬಲ ಬೆಲೆಯು ಕೇವಲ ಅನುಕ್ರಮವಾಗಿ 613 ಮತ್ತು 900ರೂ ಎಂದು ತಿಳಿಸಿದೆ. ಅದೇ ರೀತಿ, ಕೇಂದ್ರ ಸರಕಾರದ ಬೆಂಬಲ ಬೆಲೆಗಳು ಮಾತ್ರವೇ ಅಲ್ಲ, ರಾಜ್ಯ ಸರಕಾರಕ್ಕೆ ಬೆಲೆಗಳನ್ನು ಸೂಚಿಸುವಾಗ ಕರ್ನಾಟಕ ಕೃಷಿ ಬೆಲೆ ಆಯೋಗ ತಾನು ಅದಕ್ಕಿಂತ ಭಾರೀ ಭಿನ್ನವಾಗಿಲ್ಲವೆಂಬುದನ್ನು ತೋರಿಸಿಕೊಂಡಿದೆ. ನಾವುಗಳು ಹಲವು ಸಂದರ್ಭಗಳಲ್ಲಿ ಗುರುತಿಸಿದ ಲೆಕ್ಕಾಚಾರಗಳೂ ಕೂಡ ಗಂಭೀರ ಕೊರತೆಗಳನ್ನೊಳಗೊಂಡಿವೆ. ವೈಜ್ಞಾನಿಕವಾಗಿ ಗುರುತಿಸಲಾಗಿದೆಯೆನ್ನುವ ರೇಷ್ಮೆ ತಾಂತ್ರಿಕ ಸಮಿತಿಯ ರೇಷ್ಮೇ ಗೂಡಿನ ಉತ್ಪಾದನಾ ವೆಚ್ಚವೂ ಹಲವು ಕೊರತೆಗಳನ್ನೊಳಗೊಂಡಿದೆ.

ಇತ್ತೀಚೆಗೆ, ವಿದೇಶಿ ಕೃಷಿಉತ್ಪನ್ನಗಳ ಬೆಲೆಗಳನ್ನು ಗಮನದಲ್ಲಿರಿಸಿಕೊಂಡು ಬೆಲೆ ನಿಗದಿಸುವ ಪ್ರವೃತ್ತಿಯನ್ನು ಕೇಂದ್ರ ಸರಕಾರ ತೋರಿಸುತ್ತಿದೆ. ಉದಾಹರಣೆಗೆ, ಸಕ್ಕರೆ ಕೈಗಾರಿಕೆಗಳ ಮಾಲೀಕರ ಸಂಘವು ಕಬ್ಬಿಗೆ ಬೆಲೆಯನ್ನು ಅದರ ವೈಜ್ಞಾನಿಕವಾದ ಉತ್ಪಾದನಾ ವೆಚ್ಚವನ್ನನುಸರಿಸಿ ನಿಗದಿಸದೇ ರಂಗರಾಜನ್ ವರದಿಯಂತೆ ಅಂದಿನ ಮಾರುಕಟ್ಟೆಯಲ್ಲಿನ ಸಕ್ಕರೆ ಬೆಲೆಯ ಶೇ 65–70 ಎಂದು ನಿಗದಿಸಲು ಒತ್ತಾಯಿಸುತ್ತಿದೆ. ಅದೇ ರೀತಿ, ಕೇಂದ್ರ ಸರಕಾರ ನಿಗದಿಸಲಾಗುವ ಬೆಲೆಗಳು ಉತ್ಪಾದನಾ ವೆಚ್ಚಕ್ಕೆ ಹೋಲಿಸಿದಲ್ಲಿ ಬಹಳ ಕಡಿಮೆ ಮತ್ತು ಅವೈಜ್ಞಾನಿಕ ಬೆಲೆಗಳೆಂದು, ಕೆಲ ರಾಜ್ಯಸರಕಾರಗಳು (ಉದಾಹರಣೆಗೆ ಕೇರಳ ಮತ್ತು ಕರ್ನಾಟಕ ಭತ್ತ ಮತ್ತು ಕಬ್ಬು ಬೆಳೆ ಬೆಲೆ) ಹೆಚ್ಚುವರಿ ಬೆಲೆಗಳನ್ನು ಘೋಷಿಸಿದರೆ, ಬಿಜೆಪಿ ನೇತೃತ್ವದ ಕೇಂದ್ರ ಸರಕಾರ, ಮೊದಲು ಹೆಚ್ಚುವರಿ ನಿಗದಿಸಲಾದ ಬೆಲೆಗಳ ಮೌಲ್ಯವನ್ನು ರಾಜ್ಯಗಳೇ ಭರಿಸಬೇಕಾಗುತ್ತದೆಂದು ರಾಜ್ಯಗಳನ್ನು ಬೆದರಿಸಿತು ಮತ್ತು ಇದೀಗ ಅವರಿಗೆ ನೀಡುವ ಅನುದಾನವನ್ನು ಕಡಿತ ಮಾಡಲಾಗುವುದೆಂದು ಗುಟುರುಹಾಕುತ್ತಿದೆ. ಹೀಗೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ರೈತರಿಗೆ ವೈಜ್ಞಾನಿಕವಾದ ಬೆಲೆ ಘೋಷಿಸಿ ಅದನ್ನು ಖಾತ–ರಿಯಾಗಿ ದೊರೆಯುವಂತೆ ಮಾಡಲು ಉದ್ದೇಶ ಪೂರ್ವಕವಾಗಿಯೇ ನಿರಾಕರಿಸುತ್ತಿವೆ.

ಕೋಷ್ಟಕ – 1

ಬಳ್ಳಾರಿ ಜಿಲ್ಲೆಯ ಭತ್ತದ ಬೆಳೆಯ ಲೆಕ್ಕಾಚಾರ 2000 ಮತ್ತು 2015ರಲ್ಲಿ

ಕ್ರ ಸಂ	ವಿವರ	2000ದಂತೆ ಮೊತ್ತ	2015ರಂತೆ ಮೊತ್ತ
1	**ಸಸಿ ಬೆಳೆಯಲು**		
01	ಭತ್ತದ ಬೀಜ 50 ಕೇಜಿ	0,500	1,000
02	ಮಡಿಕೆ ಉಳುಮೆಗೆ 02*60	0,120	0,700
03	ಪಟ್ಲಿಂಗ್ ಹಾಗೂ 02 ಕೂಲಿ ಆಳು	0,100	1,300
04	15 ಕೇಜಿ ಯೂರಿಯಾ ಹಾಗೂ ಕೂಲಿ	0,110	0,220
05	1/2 ಲೀಟರ ಮಾನೋಕ್ರೋಟೋಫಸ್ ಮತ್ತು ಕೂಲಿ	0,240	0,300
06	45ದಿನಗಳವರೆಗೆ ಪ್ರತಿದಿನ ನಿರ್ವಹಣೆ ಹಾಗೂ ನೀರು ಉಣಿಸಲು ವೆಚ್ಚ	–	–
	ಒಟ್ಟು	**1,070**	**3,520**
2	**ಬೆಳೆ ವಿವರ**		
06	ಭೂಮಿ ಹದ ಮಾಡಲು 02 ಬಾರಿ ಗಳೇವು	0,240	2,800
07	ಧಮ್ಮು ಹೊಡೆಯಲು ಟ್ರಾಕ್ಟರ್ ಬಾಡಿಗೆ	0,350	1,000
08	ಕಣಿವೆ ಸವರಲು 02 ಆಳು	0,100	0,400
09	ಕಸ ಆರಿಸಲು 02 ಆಳು	0,050	0,300
10	ಕೊಟ್ಟಿಗೆ ಗೊಬ್ಬರ 10ಬಂಢಿ*50	0,500	3,000
11	ಬಂಡಿ ಬಾಡಿಗೆ ಆಳು	0,200	1,000
12	ಸಸಿಕೀಳುವುದು ಹೊರುವುದು ನಾಟಿಮಾಡುವುದು	0,450	3,100
13	ಗೊಬ್ಬರ(1 ಯೂರಿಯಾ+1 ಕಾಂಪ್ಲೆಕ್ಸ್) ಕೂಲಿ	0,660	1,550
14	ಕಳೆ 08 ಆಳು	0,240	1,200
15	2ನೇ ಗೊಬ್ಬರ	0,660	1,550
16	ಕ್ರಿಮಿನಾಶಕ 1/2 ಲೀಟರ್ ಹಾಗು ಆಳು	0,260	0,500
17	2ನೇಕಳೆ	0,200	1,200
18	03ನೇ ಗೊಬ್ಬರ	0,660	1,550
19	05 ಕೇಜಿ ದರ್ಮಲ್ ಗುಳಿಗೆ +ಆಳು	0,760	0,650
20	ಕ್ರಿಮಿನಾಶಕ +ಆಳು	0,260	0,500
21	4ನೇಗೊಬ್ಬರ	0,660	1,550
3	**ಕಟಾವ್**		
22	ಕುಯಿಲು	0,800	3,000
23	ಟ್ರಾಕ್ಟರ್ ಬಾಡಿಗೆ	0,300	0,500
24	ತೂರುವುದು	0,350	0,750
25	ಚೀಲಕ್ಕೆ ತುಂಬುವುದು +ಏರುವುದು +ಇತರೇ	0,350	0,680
26	45ದಿನದ ಉಸ್ತುವಾರಿ ವೆಚ್ಚ	–	–
4	**ಮಾರಾಟ**		
26	ಸಾಗಾಣೆ ವೆಚ್ಚ 35 ಚೀಲ*20	0,700	1,000
27	ಪ್ರತಿ ಚೀಲಕ್ಕೆ ಬಾಜು 35*2=70 ಕೆಜಿ*4.50	0,315	2,000
27	ದಲ್ಲಾಳಿ ಕಮಿಷನ್ 3%	0,425	2,100
28	ರೈತನ ಖರ್ಚು	0,150	0,300
29	ಬಂಡವಾಳದ ಮೇಲಿನ ಬಡ್ಡಿ 36%	2,430	5,000
30	ಭೂಕಂದಾಯ	0,100	0,125
31	ಇತರೇ (ಪ್ರಯಾಣವೆಚ್ಚ)	**0,300**	**0,500**
	ಒಟ್ಟು ವೆಚ್ಚ	**14,390**	**41,325**
	ಭತ್ತದ ಬೆಲೆ ಪ್ರತಿ ಚೀಲಕ್ಕೆ 350 ರೂ 2014–15 ರಲ್ಲಿ 1176ರೂ ಮಾರುಕಟ್ಟೆ ಬೆಲೆ 2014–15ರ ಬೆಂಬಲಬೆಲೆ 984ರೂ		
32	**35 ಚೀಲ ಭತ್ತದ ಆದಾಯ**	**12,250**	**41,174 (32,368)**
33	**ಭತ್ತದ ಉತ್ಪಾದನಾ ವೆಚ್ಚ ಪ್ರತಿ ಚೀಲಕ್ಕೆ68(ಕೇಜಿ)**	**0,411 ರೂ**	**1,181 ರೂ**

ಷರಾ :
1. ಭೂಮಿ ಬಾಡಿಗೆ ಪರಿಗಣಿಸಿಲ್ಲ. 2. ಸಸಿ ನಾಟಿ ಉಸುವಾರಿ 20 ದಿನಗಳ ಕೂಲಿ ಹಾಗೂ ಸುಮಾರು 45ದಿನಗಳ ಬೆಳೆ ಉಸುವಾರಿ ಕೂಲಿ ಸೇರ್ಪಡೆ ಮಾಡಿಲ್ಲ. 3. ತೂಕದಲ್ಲಿನ ಮೋಸ ಮತ್ತು ಹಮಾಲಿ ವೆಚ್ಚ ಸೇರಿಸಿಲ್ಲ. 4. ಪರಿಗಣಿಸಲಾದ ಕೂಲಿ ಅತ್ಯಂತ ಕಡಿಮೆಯದ್ದು 5. ನೀರು ಹಾಯಿಸಿದ್ದು ಮತ್ತು ಎತ್ತುಗಳ ನಿರ್ವಹಣೆ ಪರಿಗಣಿಸಿಲ್ಲ 6. ಬೆಳೆ ವಿಮೆ ಸೇರಿಸಿಲ್ಲ.

ಜಿಡಿಪಿ ಅಂಕಿ-ಅಂಶದ ಬಗ್ಗೆ ರಿಝರ್ವ್ ಬ್ಯಾಂಕ್ ಗವರ್ನರ್‌ರಿಗೂ ಸಂದೇಹ!

ಜಿಡಿಪಿ ಅಂದರೆ ದೇಶದ ಒಟ್ಟು ಉತ್ಪಾದನೆಯ ಬೆಳವಣಿಗೆ ದರ ನಮ್ಮ ಆಳರಸರಿಗೆ 'ಅಭಿವೃದ್ಧಿ'ಯ ಏಕಮಾತ್ರ ಮಾನದಂಡವಾಗಿದೆ. ಜನಗಳ ಸಂಕಟಗಳ ನಡುವೆಯೂ ಜಿಡಿಪಿ ದರ ಜಗತ್ತಿನಲ್ಲೆ ಅತಿ ಹೆಚ್ಚು ಎಂಬ ಹೆಗ್ಗಳಿಕೆ ಅವರದು. ಆದರೆ ಈ ಸಂಖ್ಯೆ ನಿಜವಾದ ಅಭಿವೃದ್ಧಿಯನ್ನು ಸೂಚಿಸುವುದಿಲ್ಲ ಎಂಬ ಎಡಪಂಥೀಯರ ಅಭಿಪ್ರಾಯವನ್ನು ಈಗ ದೇಶದ ಸರ್ವೋಚ್ಚ ಬ್ಯಾಂಕಿನ ಮುಖ್ಯಸ್ಥರೂ ಪರೋಕ್ಷವಾಗಿ ಒಪ್ಪಿಕೊಂಡಿದ್ದಾರೆ.

" ನಾವು ಜಿಡಿಪಿ ಲೆಕ್ಕ ಹಾಕುವ ರೀತಿಯಲ್ಲಿ ಸಮಸ್ಯೆಗಳಿವೆ. ಆದ್ದ-ರಿಂದ ಕೇವಲ ಬೆಳವಣಿಗೆಯ ಬಗ್ಗೆ ಮಾತಾಡುವಾಗ ನಾವು ಕೆಲವೊಮ್ಮೆ ಜಾಗರೂಕರಾಗಿರಬೇಕಾಗುತ್ತದೆ" ಎಂದು ಭಾರತೀಯ ರಿಝರ್ವ್ ಬ್ಯಾಂಕ್ ಪ್ರಾಯೋಜಿತ ಇಂದಿರಾಗಾಂಧಿ ಅಭಿವೃದ್ಧಿ ಸಂಶೋಧನಾ ಸಂಸ್ಥೆಯ 13ನೇ ಪದವೀದಾನ ಸಮಾರಂಭದಲ್ಲಿ ಮಾತಾಡುತ್ತ ಬ್ಯಾಂಕಿನ ಗವರ್ನರ್ ರಘುರಾಂ ರಾಜನ್ ಹೇಳಿದ್ದಾರೆ. ಆರ್ಥಿಕ ಚಟುವಟಿಕೆಗಳಿಂದ ನಿರ್ಮಾಣವಾಗುವ ಒಂದೇ ಮೌಲ್ಯವನ್ನು ಕೆಲವೊಮ್ಮೆ ಒಂದಕ್ಕಿಂತ ಹೆಚ್ಚು ಬಾರಿ ಗಣನೆಗೆ ತಗೊಳ್ಳುವ ತಪ್ಪುಗಳಾಗುತ್ತಿವೆ. ಇದರಿಂದ ಜಿಡಿಪಿ ಬೆಳವಣಿಗೆ ನಿಜವಾಗಿ ಆಗಿರುವುದಕ್ಕಿಂತ ಹೆಚ್ಚಾಗಿ ಕಾಣುತ್ತದೆ. ನಾವು ಉದ್ಯೋಗ ನಿರ್ಮಾಣದ ಅಂಕಿ-ಅಂಶಗಳನ್ನು ನೋಡುವ ಅಗತ್ಯವಿದೆ. ಸದ್ಯಕ್ಕೆ ಅವು ಭಾರತದಲ್ಲಿ ಲಭ್ಯವಿಲ್ಲ ಎಂದು ಅವರು ಹೇಳಿರುವುದಾಗಿ ವರದಿಯಾಗಿದೆ.


ಮೋದಿ ಸರಕಾರ ಬಂದ ಮೇಲೆ ಈ ತಪ್ಪುಗಳನ್ನು ಸರಿಪಡಿಸುವ ಬದಲು ಇನ್ನಷ್ಟು ಉಲ್ಬಣಗೊಳಿಸುವ ಕ್ರಮವನ್ನು ಅನುಸರಿಸಲಾಗಿದೆ, 2004-05 ರ ಆಧಾರ ವರ್ಷವನ್ನು 2011-12ಕ್ಕೆ ಬದಲಿಸಿ ಜಿಡಿಪಿ ದರ ಇನ್ನೂ ಹೆಚ್ಚಾಗಿ ಕಾಣುವಂತೆ ಮಾಡಲಾಗಿದೆ. ಆ ಮೂಲಕ ತಮ್ಮ ಆಳ್ವಿಕೆಯಲ್ಲಿ ಆರ್ಥಿಕ ಅಭಿವೃದ್ಧಿ ವೇಗ ಹೆಚ್ಚಿದೆ ಎಂದು ಅವರು ಹೇಳಿಕೊಳ್ಳುತ್ತಿದ್ದಾರೆ.

ಆದರೆ **ಈಗ ರಿಝರ್ವ್ ಬ್ಯಾಂಕ್ ಗವರ್ನರ್ ಕೂಡ ಅವರ ಅಂಕಿ-ಅಂಶಗಳ ಬಗ್ಗೆಯೇ ಸಂದೇಹ ವ್ಯಕ್ತಪಡಿಸಿದ್ದಾರೆ. ಇದನ್ನು ನಾವು ಈ ಮೊದಲೇ ಹೇಳಿದ್ದೆವು, ಈಗಲಾದರೂ, ಪ್ರಧಾನ ಮಂತ್ರಿಗಳು ಮತ್ತು ಹಣಕಾಸು ಮಂತ್ರಿಗಳ ನೇತೃತ್ವದ ಅವರ ಹಣಕಾಸು ನಿರ್ವಹಣೆಯ ಗುಂಪಿನ ಸದಸ್ಯರು ತಮ್ಮ ವಿಫಲತೆಗಳನ್ನು ಒಪ್ಪಿಕೊಂಡು ಕೇವಲ ಮಾಧ್ಯಮಗಳಲ್ಲಿ ಶಿರೋನಾಮೆಗಳು ರಾರಾಜಿಸುವಂತೆ ಮಾಡುವ ಕೆಲಸವನ್ನು ಬಿಟ್ಟು ನಿಜವಾದ ಅಭಿವೃದ್ಧಿಯ ಬಗ್ಗೆ ಯೋಚಿಸಬೇಕಾಗಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಹೇಳಿದ್ದಾರೆ.**

ಈ ನಡುವೆ ಅಮೆರಿಕಾದ ಅಧ್ಯಕ್ಷರ ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಯಾಗಲು ಪ್ರಯತ್ನಿಸುತ್ತಿರುವ , ತನ್ನ ಅತ್ಯಂತ ಬಲಪಂಥೀಯ ಹೇಳಿಕೆಗಳಿಂದ ಜಗತ್ತಿನಾದ್ಯಂತ ಪ್ರಜಾಪ್ರಭುತ್ವವಾದಿಗಳ ಟೀಕೆಗಳಿಗೆ ಒಳಗಾಗುತ್ತಿರುವ ಅಮೆರಿಕಾದ ಬಿಲಿಯಾಧಿಪತಿ ಡೊನಾಲ್ಡ್ ಟ್ರಂಪ್ ಭಾರತ ಬಹಳ ಚೆನ್ನಾಗಿ ಅಭಿವೃದ್ಧಿ ಹೊಂದುತ್ತಿದೆ, ಅದರ ಬಗ್ಗೆ ಯಾರೂ ಮಾತಾಡುತ್ತಿಲ್ಲ ಎಂದು ಹಲುಬಿದ್ದಾರೆ. ಆದರೆ ಏಕೋ ಅವರ ಈ ಸರ್ಟಿಫಿಕೇಟನ್ನು 'ಒಳ್ಳೆಯ ದಿನ'ಗಳ ಮಂದಿ ಪ್ರದರ್ಶಿಸಲು ಹಿಂದೇಟು ಹಾಕುತ್ತಿದ್ದಾರೆ. ಭಾರತೀಯ ಪಾಲುದಾರರೊಂದಿಗೆ ಈತ 2012ರಲ್ಲಿ ಪುಣೆಯಲ್ಲಿ 23 ಮಹಡಿಗಳ ಟ್ರಂಪ್ ಟವರ್ಸ್ ಎಂಬ ಎರಡು ಬೃಹತ್ ಲಕ್ಷುರಿ ನಿವಾಸಗಳನ್ನು , ಮತ್ತು ಮುಂಬೈಯಲ್ಲಿ 2014ರಲ್ಲಿ 75 ಮಹಡಿಗಳ 'ಟ್ರಂಪ್ ಟವರ್ ಮುಂಬೈ'ನಲ್ಲಿ ಹಣ ತೊಡಗಿಸಿರುವ ವ್ಯಕ್ತಿ. ಆದ್ದರಿಂದ ಆತನ ಪ್ರಶಂಸೆಯನ್ನು ಅರ್ಥಮಾಡಿಕೊಳ್ಳಬಹುದು.

ಅದೇ ರೀತಿಯಲ್ಲಿ ಅಮೆರಿಕಾದ ಎಕ್ಸಿಮ್ ಬ್ಯಾಂಕ್(ಆಮದು-ರಫ್ತು ಬ್ಯಾಂಕ್) ಪ್ರಧಾನ ಮಂತ್ರಿಗಳ ಡಿಜಿಟಲ್ ಇಂಡಿಯಾ, ಮೇಕ್ ಇನ್ ಇಂಡಿಯಾ, ಸ್ಮಾರ್ಟ್ ಸಿಟಿ ಯೋಜನೆಗಳು ಅಮೆರಿಕಾದ ವ್ಯಾಪಾರಸ್ಥರಿಗೆ ಒಳ್ಳೆಯ ಅವಕಾಶಗಳನ್ನು ಕಲ್ಪಿಸಿವೆ ಅವನ್ನು ಬಳಸಿಕೊಳ್ಳಿ ಎಂದು ಸಲಹೆ ಮಾಡಿರುವದಾಗಿ ಪಿಟಿಐ ವರದಿ ಮಾಡಿದೆ.

ಅಂದರೆ ರಿಝರ್ವ್ ಬ್ಯಾಂಕ್ ಗವರ್ನರ್ ಹೇಳಿರುವಂತೆ ಉದ್ಯೋಗ ನಿರ್ಮಾಣದ ಅಂಕಿ-ಅಂಶಗಳನ್ನು ಲಭ್ಯಗೊಳಿಸುವ ಬಗ್ಗೆ ಇನ್ನೂ ತಲೆ ಕೆಡಿಸಿಕೊಳ್ಳದ ಸರಕಾರ ಯಾರಿಗೆ 'ಒಳ್ಳೆಯ ದಿನಗಳನ್ನು ತಂದಿದೆ ಎಂಬುದು ಹೆಚ್ಚೆಚ್ಚು ಸ್ಪಷ್ಟಗೊಳ್ಳುತ್ತಿದೆ.



ಅಂಬೇಡ್ಕರ್ ಕುರಿತ ಮರಾಠಿ ನಾಟಕದ ಪ್ರದರ್ಶನಕ್ಕೆ 10 ಸೆನ್ಸಾರ್ ಕಟ್‌ಗಳು!

ಜೈಭೀಮ್ ಜೈಭಾರತ್ ಎಂಬ ಅಂಬೇಡ್ಕರ್ ಕುರಿತ ಮರಾಠಿ ನಾಟಕ ಜನವರಿ 26ರಂದು ಪ್ರದರ್ಶಿಸುವ ಉದ್ದೇಶವಿತ್ತು. ಯಾವುದೇ ನಾಟಕ ಪ್ರದರ್ಶನಕ್ಕೂ ಮಹಾರಾಷ್ಟ್ರದಲ್ಲಿ ಸಿನೆಮಾ ಪ್ರದರ್ಶನಕ್ಕಿರುವಂತೆ 'ರಂಗಭೂಮಿ ಪ್ರಯೋಗ್ ಪರಿನಿರೀಕ್ಷಣ್ ಮಂಡಳ್' ಎಂಬುದರ ಅನುಮತಿ ಪಡೆಯಬೇಕು. ನವಂಬರ್ 23ರಂದು ನಾಟಕವನ್ನು ಮಂಡಳಿಗೆ ಸಲ್ಲಿಸಲಾಗಿತ್ತು. ಒಂದೂವರೆ ತಿಂಗಳ ನಂತರ ಜನವರಿ 11ರಂದು 19 'ಕಟ್'ಗಳನ್ನು ಮಾಡಬೇಕೆಂಬ ಮಂಡಳಿಯ ಪತ್ರ ಬಂತು.

ಏಕೆ ಈ ಕಟ್‌ಗಳು ಎಂದು ವಿವರಣೆ ಕೇಳಿ ಜನವರಿ 13ರಂದು ನಾಟಕಕಾರ ಜನಾರ್ಧನ್ ಜಾಧವ್ ಮತ್ತು ಪ್ರೊಡ್ಯೂಸರ್ ರತನ್ ಬಂಸೋಡೆ ಪತ್ರ ಬರೆದರು. ಅದಕ್ಕೆ ಉತ್ತರ ಬರಲಿಲ್ಲ. ಇಬ್ಬರೂ ಮಂಡಳಿಯ ಮುಖ್ಯಸ್ಥ ಹಾಗೂ ರಂಗ ನಟ ಅರುಣ್ ನಲ್ವಾಡೆಯನ್ನು ಭೇಟಿಯಾಗಿ ಕೇಳಿದರು. ಅವರು ಅಶೋಕ್ ಸಮೆಲ್ ಎಂಬುವರ ಬಳಿ ಕಳಿಸಿದರು. ಅವರು ನಾಟಕದ ಸ್ಕ್ರಿಪ್ಟನ್ನು ಮಂಜೂರು ಮಾಡಿ ಈ ಬಗ್ಗೆ ಪರಿಷ್ಕೃತ ಪತ್ರ ಕಳಿಸುವುದಾಗಿ ಹೇಳಿದರು. ಜನವರಿ 27ರಂದು ತಾತ್ಕಾಲಿಕ ಸರ್ಟಿಫಿಕೇಟ್ ನೀಡಿದ ಪತ್ರ ಬಂತು, ಜತೆಗೆ ಹಿಂದೆ ಹೇಳಿದ ಕಟ್‌ಗಳಲ್ಲಿ 10ನ್ನು ಮಾಡಬೇಕೆಂಬ ನಿರ್ದೇಶನವೂ ಇತ್ತು.

ಅವರು ಬಯಸಿರುವ ಕಟ್‌ಗಳೆಂದರೆ 'ಬೋಧ್‌ಮಯ್ ಭಾರತ್', ರಮಾಬಾಯಿ ಕಾಲನಿ, ಖೈರ್ಲಾಂಜಿ, ಮಹಾರ್ ಇತ್ಯಾದಿ ಪದಗಳು ಇರಬಾರದು, ಪ್ರಖ್ಯಾತ ಮರಾಠಿ ದಲಿತ ಕವಿ ನಾಮದೇವ ಢಸಾಳೆಯವರ ಒಂದು ಕವನ ಇರಬಾರದು ಎಂದು ಹೇಳಲಾಗಿದೆ.

ಇದು ಅಂಬೇಡ್ಕರ್, ಗಾಂಧೀಜಿ ಮತ್ತು ಒಬ್ಬ ದಲಿತ ಕಾರ್ಯಕರ್ತನ ನಡುವಿನ ಕಾಲ್ಪನಿಕ ಸಂವಾದದ ಮೂಲಕ ಸಮಕಾಲೀನ ದಲಿತ ಆಂದೋಲನವನ್ನು ವಿಮರ್ಶಿಸುವ ಕೃತಿಯಾಗಿದ್ದು ಇದರಲ್ಲಿ ಈಗ ದೇಶದಲ್ಲಿರುವ ಕೋಮುವಾದಿ ವಾತಾವರಣವನ್ನು ಪರಿಶೀಲಿಸಲಾಗಿದೆ ಎಂದಿರುವ ನಾಟಕಕಾರರು ಈ ಕಟ್‌ಗಳು ದಲಿತ ದನಿಯನ್ನು ಅಡಗಿಸುವ ಪ್ರಯತ್ನ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಕರ್ತ ಈ ಬಗ್ಗೆ ಅಶೋಕ ನಲ್ವಾಡೆಯವರನ್ನು ಸಂಪರ್ಕಿಸಲು ಮಾಡಿದ ಪ್ರಯತ್ನ ಸಫಲವಾಗಲಿಲ್ಲ, ಆದರೆ ಅಶೋಕ ಸಮೆಲ್ ಅವರು 'ಕೋಮು ಸೆಳೆತ ಉಂಟಾಗದಿರಲಿ ಎಂದು ಈ ಕಟ್‌ಗಳನ್ನು ಸೂಚಿಸಲಾಗಿದೆ ಎಂದರಂತೆ!

"ನೀವು ಭಾರತ ಒಕ್ಕೂಟದಿಂದ ಹೊರಟು ಹೋಗಬೇಕೆಂದಿದ್ದೀರಾ?" 'ಮಾದರಿ ಗುಜರಾತ್' ಸರಕಾರಕ್ಕೆ, ಕೇಂದ್ರಕ್ಕೂ ಸುಪ್ರಿಂ ಕೋರ್ಟ್ ತರಾಟೆ

ದೇಶದಲ್ಲಿನ ಬಡವರು ಬರೆ ಹೊಟ್ಟೆಯಲ್ಲಿ ಇರುವಂತಾಗದಿರಲಿ ಎಂದು ಭಾರತದ ಸಂಸತ್ತು ಅಂಗೀಕರಿಸಿರುವ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯನ್ನು ಗುಜರಾತ್ ಸರಕಾರ ಇನ್ನೂ ಜಾರಿಗೊಳಿಸಿಲ್ಲ. ಈ ಬಗ್ಗೆ ಅರ್ಜಿಯೊಂದರ ವಿಚಾರಣೆ ಮಾಡುತ್ತಿರುವ ಸುಪ್ರಿಂ ಕೋರ್ಟ್ ಪೀಠ ಈ ಪ್ರಶ್ನೆಯನ್ನು ಕೇಳಿದೆ. " ನೀವು ಭಾರತದ ಭಾಗವಲ್ಲವೆಂದು ಹೇಳುತ್ತಿದ್ದೀರಾ? ಭಾರತ ಸರಕಾರ ಈ ಬಗ್ಗೆ ಏನು ಮಾಡುತ್ತಿದೆ?" ಎಂದು ನ್ಯಾಯಮೂರ್ತಿಗಳು ಖಾರವಾಗಿ ಪ್ರಶ್ನಿಸಿದ್ದಾರೆ. ಗುಜರಾತ್ ಸರಕಾರದ ವಕೀಲ ಅದು ಸರಕಾರದ 'ಸಕ್ರಿಯ ಪರಿಶೀಲನೆಯಲ್ಲಿದೆ' ಎಂದಾಗ ಒಂದು ಸಂಸದೀಯ ಕಾನೂನನ್ನು ಜಾರಿ ಮಾಡದಿರುವ ಆಯ್ಕೆ ತನಗಿದೆ ಎಂದು ಗುಜರಾತ್ ಭಾವಿಸುತ್ತಿದೆಯೇ ಎಂಬ ಮರುಪ್ರಶ್ನೆಯನ್ನು ನ್ಯಾಯಮೂರ್ತಿಗಳಿಂದ ಅವರು ಎದುರಿಸಬೇಕಾಯಿತು ಎಂದು ವರದಿಯಾಗಿದೆ.

ಅಖಂಡ ಭಾರತದ ಬಗ್ಗೆ ಮಾತಾಡುವ, 'ಒಳ್ಳೆಯ ದಿನ'ಗಳ ನಿಜಸ್ವರೂಪವನ್ನು ಪ್ರಶ್ನಿಸಿದವರನ್ನು ದೇಶದ್ರೋಹಿಗಳು ಎನ್ನುತ್ತಲೋ, ಪಾಕಿಸ್ತಾನಕ್ಕೆ ಹೋಗಲಿ ಎನ್ನುತ್ತಲೋ ಹೀಯಾಳಿಸುವ ಕೇಸರೀ ಪಡೆಯ ರಾಜ್ಯಸರಕಾರವೇ, ಜತೆಗೆ ಕೇಂದ್ರ ಸರಕಾರವೂ ಇಂತಹ ತರಾಟೆಯನ್ನು ಎದುರಿಸಬೇಕಾಗಿರುವುದು ಈಗಲೂ 'ಒಳ್ಳೆಯ ದಿನ'ಗಳ ವಿಶ್ವಾಸ ಉಳಿಸಿಕೊಂಡವರಿಗೆ ಶಾಕ್ ಕೊಟ್ಟಿರಬಹುದು, ಆದರೆ ಈ ಸ್ವ-ಯಂ ಘೋಷಿತ 'ದೇಶಭಕ್ತ'ರ ನಿಜಸ್ವರೂಪ ಹೆಚ್ಚೆಚ್ಚು ಬಯಲಾಗುತ್ತಿದೆ ಎಂದು ಪ್ರಜಾಪ್ರಭುತ್ವವಾದಿಗಳು ತುಸುವಾದರೂ ಸಮಾಧಾನ ಪಟ್ಟುಕೊಳ್ಳುವಂತಾಗಿದೆ.

ದೇಶದ ಪ್ರಧಾನಿಗಳ ಕೈಯಲ್ಲಿರುವ ನಗದು ಕೇವಲ 4700ರೂ. -ಸುದ್ದಿ



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ಜಮ್ಮು-ಕಾಶ್ಮೀರ: ಬಿಜೆಪಿ ಮುಖಂಡರ 'ಮುತ್ಸದ್ದಿತನ'ಕ್ಕೆ ಮತ್ತೊಂದು ಸವಾಲು

'ಒಳ್ಳೆಯ ದಿನ'ಗಳ ಮುಖಂಡರ ಮತ್ತೊಂದು 'ಸಾಧನೆ'ಯ ಮೇಲೆ ಈಗ ಪ್ರಶ್ನೆ ಚಿಹ್ನೆ ಬಿದ್ದಿದೆ. ಜಮ್ಮು-ಕಾಶ್ಮೀರದಲ್ಲಿ ಕೊನೆಗೂ ಬಿಜೆಪಿ, ಪಿಡಿಪಿ ಯೊಂದಿಗೆ ಮೈತ್ರಿ ಮಾಡಿಕೊಂಡು ಅಧಿಕಾರ ಗಿಟ್ಟಿಸಿಕೊಂಡದ್ದು ರಾಜಕೀಯ ಮುತ್ಸದ್ದಿತನದ ಸಾಧನೆ ಎಂದು ಹೇಳಲಾಗುತ್ತಿತ್ತು. ಈಗ ಜನವರಿ 7ರಂದು ಈ ಮೈತ್ರಿಕೂಟದ ಸರಕಾರದ ಮುಖ್ಯಮಂತ್ರಿಯಾಗಿದ್ದ ಮುಫ್ತಿ ಮಹಮ್ಮದ್ ಸಯೀದ್‌ರವರು ನಿಧನರಾದ ನಂತರ ಇನ್ನೂ ಅಲ್ಲಿ ಹೊಸ ಸರಕಾರ ಏರ್ಪಟ್ಟಿಲ್ಲ. ರಾಷ್ಟ್ರಪತಿ ಆಳ್ವಿಕೆಯನ್ನು ಸದ್ಯಕ್ಕೆ ಹಾಕಲಾಗಿದೆ. ಮುಫ್ತಿಯವರ ಉತ್ತರಾಧಿಕಾರಿ ಎನಿಸಿರುವ ಅವರ ಮಗಳು ಮತ್ತು ಪಿಡಿಪಿ ಪಕ್ಷದ ಅಧ್ಯಕ್ಷರೂ ಆಗಿರುವ ಮೆಹಬೂಬ ಮುಫ್ತಿ ಇನ್ನೂ ಈ ಬಗ್ಗೆ ನಿರ್ಧರಿಸಿಲ್ಲ. ತನ್ನ ತಂದೆಯವರು ಬಿಜೆಪಿಯೊಡನೆ ಮೈತ್ರಿ ಮಾಡಿಕೊಂಡದ್ದು ಒಂದು ಜನಪ್ರಿಯತೆ ಕಳಕೊಂಡ ಕ್ರಮ, ಬಿಜೆಪಿ ನೇರವಾಗಿಯೂ, ಪರೋಕ್ಷವಾಗಿಯೂ ಮೈತ್ರಿಕೂಟದ ಒಪ್ಪಂದವನ್ನು ಬುಡಮೇಲು ಮಾಡುತ್ತಿದೆ ಎಂದು ಅವರು ಅಭಿಪ್ರಾಯ ಪಟ್ಟಿರುವುದಾಗಿ ವರದಿಯಾಗಿದೆ.

ಬಹಳ ಜನಪ್ರಿಯತೆ ಇದ್ದ ಮುಫ್ತಿಯವರ ಅಂತಿಮ ಕ್ರಿಯೆಯಲ್ಲಿ ಭಾಗವಹಿಸಿದವರ ಸಂಖ್ಯೆ ಹಲವು ಸಾಮಾನ್ಯ ಪ್ರತ್ಯೇಕತಾವಾದಿ ಮುಖಂಡರ ಅಂತ್ಯಕ್ರಿಯೆಗಳ ಸಂದರ್ಭದಲ್ಲಿ ಭಾಗವಹಿಸಿದವರ ಸಂ-ಖ್ಯೆಗಿಂತ ಬಹಳ ಕಡಿಮೆಯಿದ್ದುದು ಪಿಡಿಪಿ ಕಾಶ್ಮೀರ ಕಣಿವೆಯಲ್ಲಿ ಜನಪ್ರಿಯತೆ ಕಳಕೊಳ್ಳುತ್ತಿರುವುದರ ಸಂಕೇತ ಎನ್ನಲಾಗಿದೆ.


"ಮುಫ್ತಿ ಸಾಹಿಬ್ ಈ ಜನಪ್ರಿಯವಲ್ಲದಿದ್ದರೂ ಧೈರ್ಯದ ನಿರ್ಧಾರ ಕೈಗೊಂಡದ್ದು ಕೇಂದ್ರ ಸರಕಾರ ಪ್ರಮುಖ ರಾಜಕೀಯ ಮತ್ತು ಆರ್ಥಿಕ ವಿಷಯಗಳನ್ನು ಎದುರಿಸಲು ನಿರ್ಣಾಯಕ ಕ್ರಮಗಳನ್ನು ಕೈಗೊಳ್ಳುತ್ತದೆ ಎಂಬ ನಿರೀಕ್ಷೆಯಿಂದ. ಆದರೆ ಕಜಮಮು-ಕಾಶ್ಮೀರ ಮತ್ತು ನವದೆಹಲಿಯ ಕೆಲವು ವಲಯಗಳು ನೇರವಾಗಿ ಮತ್ತು ಪರೋಕ್ಷವಾಗಿ ಮತ್ತೆ-ಮತ್ತೆ ವಿವಾದಗಳನ್ನು ಸೃಷ್ಟಿಸಲಾರಂಭಿಸಿವೆ" ಎಂದು ಮೆಹಬೂಬ ಅವರು ಹೇಳಿರುವುದಾಗಿ ವರದಿಯಾಗಿದೆ.

ಹೊಸ ಸರಕಾರ ರಚನೆಗೆ ವಿಳಂಬವಾಗುತ್ತಿರುವ ಬಗ್ಗೆ ರಾಜ್ಯಪಾಲರು ಎರಡೂ ಮೈತ್ರಿ ಪಕ್ಷಗಳ ಮುಖಂಡರನ್ನು ಕರೆಸಿ ಮಾತಾಡಿದರು ಎಂದು ವರದಿಯಾಗಿದೆ. ಪಿಡಿಪಿಗೆ ತಕರಾರು ಇರುವುದು ಬಿಜೆಪಿಯೊಂದಿಗಲ್ಲ, ಕೇಂದ್ರ ಸರಕಾರದೊಂದಿಗೆ, ಕೇಂದ್ರ ಸರಕಾರ ಹೊಸ ಸರಕಾರ ರಚನೆಗೊಳ್ಳಲು ಒಂದು ಉತ್ತಮ ವಾತಾವರಣವನ್ನು ನಿರ್ಮಿಸಬೇಕಾಗಿದೆ, ಅದಕ್ಕಾಗಿ ಜಮ್ಮು-ಕಾಶ್ಮೀರಕ್ಕೆ ನಿರ್ದಿಷ್ಟವಾದ ವಿಶ್ವಾಸ-ಕುದುರಿಸುವ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅವರು ಶರತ್ತು ಹಾಕಿರುವುದಾಗಿ ಮಾಧ್ಯಮಗಳಲ್ಲಿ ವರದಿಯಾಗಿದೆ.

ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದ ತಾತ್ಕಾಲಿಕ ಉಪಕುಲಪತಿ, ರೋಹಿತ್ ಮತ್ತು ಸಂಗಡಿಗರನ್ನು ಹೊರಹಾಕುವ ಕ್ರಮಗಳಲ್ಲಿ ಶಾಮೀಲಾಗಿದ್ದವರು ಎಂದು ವಿದ್ಯಾರ್ಥಿಗಳು ವಿರೋಧಿಸುತ್ತಿದ್ದವರೂ ದೀರ್ಘರಜೆ ಮೇಲೆ ಹೋಗಿದ್ದಾರೆ, ಅವರ ಸ್ಥಾನದಲ್ಲಿ ಮತ್ತೊಬ್ಬರನ್ನು ನೇಮಿಸಲಾಗಿದೆ.

ಈ ನಡುವೆ ರೋಹಿತ್ ದಲಿತರೇ ಅಲ್ಲ ಎಂಬ ಬಿಜೆಪಿ ಮುಖಂಡರ ಆಲಾಪನೆ ಗಟ್ಟಿಯಾಗುತ್ತಿದೆ. ಸ್ವತಃ ವಿದೇಶಾಂಗ ಮಂತ್ರಿಗಳು ಅದೇ ರಾಗ ಹಾಡಿದ್ದಾರೆ, ಕೇಂದ್ರ ಸಾಮಾಜಿಕ ನ್ಯಾಯದ ರಾಜ್ಯ ಮಂತ್ರಿಯೂ ಅದಕ್ಕೆ ತನ್ನ ದನಿ ಸೇರಿಸಿರುವುದಾಗಿ ವರದಿಯಾಗಿದೆ. ಅತ್ತ ಬಿಜೆಪಿ ದಲಿತ್ ಮೋರ್ಚಾ ಮಾತ್ರ ಈ ರಾಗಕ್ಕೆ ದನಿಗೂಡಿಸಲು ಹಿಂದೇಟು ಹಾಕಿದೆ. ಆದರೆ ರೋಹಿತ್ ಎಡಪಂಥೀಯ ಮತ್ತು ಅಂಬೇಡ್ಕರ್‌ವಾದಿ ರಾಜಕೀಯದಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಂಡರು ಎಂಬ ಹೊಸ ರಾಗ ಎತ್ತಿದೆ.

ಅತ್ತ ದಿಲ್ಲಿಯಲ್ಲಿ ಆರೆಸ್ಸೆಸ್ ಕಚೇರಿಯೆದುರು ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳ ಮೇಲೆ ಆರೆಸ್ಸೆಸ್ ಮಂದಿ ಮತ್ತು ಪೋಲೀಸರು ಜತೆಗೂಡಿ ಅಮಾನುಷವಾಗಿ ದಾಳಿ ಮಾಡಿದ್ದಾರೆ. ದಿಲ್ಲಿಯ ಪೋಲೀಸ್ ವರಿಷ್ಟರಿಗೆ ಈ ಘಟನೆ ಇರಿಸುಮುರಿಸು ತಂದಿದೆ ಎಂದು ವರದಿಯಾಗಿದೆ.



ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್



ಕೆ.ಎಂ.ನಾಗರಾಜ್

ಹೆಚ್ಚುತ್ತಿರುವ ಅಸಮಾನತೆಯ ನಡುವೆ ದವೋಸ್‌ನಲ್ಲಿ ಸಿರಿವಂತರ ಜಾತ್ರೆ

ದವೋಸ್, ಸ್ವಿಜರ್‌ಲ್ಯಾಂಡ್ ದೇಶದಲ್ಲಿರುವ ಒಂದು ವಿಶ್ರಾಂತಿ ಗಿರಿಧಾಮ. ಇಸವಿ 2000ದಿಂದ ಅಲ್ಲಿ ಪ್ರತಿ ವರ್ಷದ ಜನವರಿಯಲ್ಲಿ ಒಂದು ಸಭೆ ನಡೆಯುತ್ತದೆ. ಅದನ್ನು 'ವಿಶ್ವ ಆರ್ಥಿಕ ವೇದಿಕೆ' ಎಂಬ ಸಂಘಟನೆ ಆಯೋಜಿಸುತ್ತದೆ. ವಿಶ್ವ ಮಟ್ಟದಲ್ಲಿ ಆರ್ಥಿಕ ವ್ಯವಹಾರಗಳಿಗೆ ಸಂಬಂಧಿಸಿದಂತೆ ಒಂದು ಅಜೆಂಡಾ ರೂಪಿಸುವುದು ಅದರ ಉದ್ದೇಶ. ಇದೊಂದು ಖಾಸಗಿ ಏರ್ಪಾಡು. ಈ ಸಭೆಯಲ್ಲಿ ವಿಶ್ವದ ಅತಿ ದೊಡ್ಡ ಶ್ರೀಮಂತರು, ಸರ್ಕಾರಗಳನ್ನು ಮುನ್ನಡೆಸುವವರು, ಒಂದು ಸಾವಿರಕ್ಕೂ ಹೆಚ್ಚಿನ ದೊಡ್ಡ ದೊಡ್ಡ ಕಂಪೆನಿಗಳು, ಐಎಂಎಫ್, ಬ್ಯಾಂಕ್‌ಗಳು, ಎನ್‌ಜಿಒಗಳು, ಧಾರ್ಮಿಕ ಸಂಸ್ಥೆಗಳು, ಪ್ರಸಿದ್ಧ ನಾಮರು, ಜನಪ್ರಿಯ ಸಿನೆಮಾ ತಾರೆಯರು ಮತ್ತು ಮಾಧ್ಯಮಗಳು ಸೇರಿದಂತೆ ಸುಮಾರು 3000 ಮಂದಿ ಭಾಗವಹಿಸುತ್ತಾರೆ. ವಿಶ್ವದ ದೊಡ್ಡ ದೊಡ್ಡ ಕುಳಗಳು ಒಂದೆಡೆಯಲ್ಲಿ ಸೇರುವುದರಿಂದ ಅವರಿಗೆ ತಮ್ಮ ವ್ಯವಹಾರಗಳನ್ನು ಕುದುರಿಸಿಕೊಳ್ಳಲು ಈ ಸಭೆ ಸಹಾಯವಾಗುತ್ತದೆ.

ದವೋಸ್‌ನಲ್ಲಿ 62 ಮಂದಿ

ಆಕ್ಸ್‌ಫ್ಯಾಮ್ ಎಂಬ ಒಂದು ಅಂತಾರಾಷ್ಟ್ರೀಯ ಸ್ವಯಂ ಸೇವಾ ಸಂಸ್ಥೆ, ಪ್ರತಿವರ್ಷವೂ, ಆರ್ಥಿಕ ಅಸಮಾನತೆಗಳ ಬಗ್ಗೆ ಒಂದು ವರದಿ ಪ್ರಕಟಿಸುತ್ತದೆ. ಆಕ್ಸ್‌ಫ್ಯಾಮ್‌ನ 2015ರ ವರದಿಯಲ್ಲಿರುವ ವಿವರಗಳು ಕಳವಳಕಾರಿಯಾಗಿವೆ. ವಿಶ್ವದ ಅರ್ಧಭಾಗಕ್ಕಿಂತಲೂ ಹೆಚ್ಚಿನ ಜನಸಂಖ್ಯೆಯ ಬಳಿ ಇರುವ ಸಂಪತ್ತಿಗಿಂತಲೂ ಹೆಚ್ಚು ಸಂಪತ್ತು ಕೇವಲ 62 ಮಂದಿಯ ಬಳಿ ಶೇಖರಣೆಯಾಗಿದೆ. ಈ ಶೇಖರಣೆ ಹಿಂದೆಂದಿಗಿಂತಲೂ ಹೆಚ್ಚು ವೇಗವಾಗಿ ಮತ್ತು ದೊಡ್ಡ ಪ್ರಮಾಣದಲ್ಲಿ ಜರುಗುತ್ತಿದೆ ಎಂದು ಆಕ್ಸ್‌ಫ್ಯಾಮ್ ತಿಳಿಸಿದೆ. ದವೋಸ್ ಸಭೆಗೆ ಮುನ್ನ ಆಕ್ಸ್‌ಫ್ಯಾಮ್ ವರದಿ ಪ್ರಕಟವಾದಾಗ, ಅದರ ಬಗ್ಗೆ ಚರ್ಚೆಯಾಗಬಹುದೆಂಬ ನಿರೀಕೆ ಇತ್ತು. ಆದರೆ, ದವೋಸ್‌ನಲ್ಲಿ ಯಾರೂ ಅದರ ಬಗ್ಗೆ ಸೊಲ್ಲೆತ್ತಲಿಲ್ಲ. ಅಲ್ಲಿ ಪ್ರಸ್ತಾಪವಾದದ್ದು 'ನಾಲ್ಕನೆ ಕೈಗಾರಿಕಾ ಕ್ರಾಂತಿ'ಯ ಆಗು ಹೋಗುಗಳ ಬಗ್ಗೆ.

ನಾಲ್ಕನೆ ಕೈಗಾರಿಕಾ ಕ್ರಾಂತಿ

ಉತ್ಪಾದನೆಯಲ್ಲಿ, ದೈಹಿಕ ಶಕ್ತಿಯ ಬಳಕೆಯ ಬದಲು ಹಬೆ ಚಾಲಿತ ಯಂತ್ರಗಳ ಬಳಕೆಯ ಆರಂಭವೇ ಮೊದಲನೆಯ ಕೈಗಾರಿಕಾ ಕ್ರಾಂತಿ. ನಂತರ, ವೈಜ್ಞಾನಿಕ ಸಂಶೋಧನೆಗಳ ವಿಸ್ತರಣೆಯಾಗಿ ತಂತ್ರಜ್ಞಾನದ ಬಳಕೆಯ ಮೂಲಕ ರಾಶಿ ರಾಶಿ ಉತ್ಪಾದನೆ ಮಾಡುವ ಪ್ರಕ್ರಿಯೆಯೇ ಎರಡನೆಯ ಕೈಗಾರಿಕಾ ಕ್ರಾಂತಿ. ಎಲ್ಲ ಚಟುವಟಿಕೆಗಳಲ್ಲೂ ಕಂಪ್ಯೂಟರ್- ಇಂಟರ್‌ನೆಟ್ ಬಳಕೆ ವ್ಯಾಪಕವಾಗಿ ಬಳಸುವ ಇಂದಿನ ಪರಿಸ್ಥಿತಿಯನ್ನು ಮೂರನೆಯ ಕೈಗಾರಿಕಾ ಕ್ರಾಂತಿ ಎಂದು ಗುರುತಿಸಲಾಗಿದೆ. ಮುಂದಿನ ದಿನಗಳಲ್ಲಿ, ಕೃತಕ ಬುದ್ಧಿವಂತಿಕೆ(Artificial Intelligence), 3-ಡಿ ಪ್ರಿಂಟಿಂಗ್, ನ್ಯಾನೋ ತಂತ್ರಜ್ಞಾನ, ಬಯೋಟೆಕ್ನಾಲಜಿ ಮತ್ತು ಡಿಜಿಟಲ್ ತಂತ್ರಜ್ಞಾನಗಳ ಸಮ್ಮಿಳನವನ್ನು ನಾಲ್ಕನೆಯ ಕೈಗಾರಿಕಾ ಕ್ರಾಂತಿ ಎಂದು ಕರೆಯಲಾಗುತ್ತಿದೆ. ಸಂಭವಿಸಲಿರುವ ನಾಲ್ಕನೆ ಕೈಗಾರಿಕಾ ಕ್ರಾಂತಿ ಮತ್ತು ಅದನ್ನು ಪಳಗಿಸಿಕೊಳ್ಳುವುದು ಹೇಗೆ ಎಂಬುದರ ಬಗ್ಗೆ ದವೋಸ್ ಸಭೆ ಮುಳುಗಿತ್ತು.

ಸಭೆಯ ನಡವಳಿಕೆಗಳ ಸಾರ ಸಂಗ್ರಹ ಮಾಡಿದ ವಿಶ್ವ ಆರ್ಥಿಕ ವೇದಿಕೆಯ ಸಂಸ್ಥಾಪಕ ಪ್ರೊ.ಕ್ಲಾಸ್ ಶ್ವಾಬ್, "ಬದಲಾವಣೆಗಳು ಮಹತ್ತರ ಭರವಸೆ-ಆಶಾಭಾವಗಳನ್ನು ಈ ಪ್ರಮಾಣದಲ್ಲಿ ಉಂಟುಮಾಡಿದ ಕಾಲವಾಗಲಿ ಅಥವಾ ಈ ಪ್ರಮಾಣದಲ್ಲಿ ಗಂಡಾಂತರ ಉಂಟುಮಾಡಿದ ಕಾಲವಾಗಲಿ, ಈ ವರೆಗೆ ಮಾನವ ಸಮಾಜ ಕಂಡಿಲ್ಲ" ಎಂಬುದಾಗಿ ತಿಳಿಸಿದ್ದಾರೆ.

ಉದ್ಯೋಗ ನಾಶ

ಎರಿಕ್ ಬ್ರಿಂಜಾಫ್ಸನ್ ಮತ್ತು ಆ್ಯಂಡ್ರ್ಯೂ ಮ್ಯಾಕ್‌ಅಫೀ ಎಂಬ ಇಬ್ಬರು ಅರ್ಥಶಾಸ್ತ್ರಜ್ಞರು "ನಾಲ್ಕನೆಯ ಕೈಗಾರಿಕಾ ಕ್ರಾಂತಿಯು ಆರ್ಥಿಕ ಅಸಮಾನತೆಗಳನ್ನು ಹೆಚ್ಚಿಸುತ್ತದೆ. ವಿಶೇಷವಾಗಿ, ಲೇಬರ್ ಮಾರುಕಟ್ಟೆಯಲ್ಲಿ ಅಲ್ಲೋಲ ಕಲ್ಲೋಲವಾಗುತ್ತದೆ. ಮುಂದುವರೆದ ಕೇವಲ ಹದಿನೇಳು ದೇಶಗಳಲ್ಲಿ ಐವತ್ತು ಲಕ್ಷ ಉದ್ಯೋಗಗಳು ಇಲ್ಲದಂತಾಗುತ್ತವೆ" ಎಂದಿದ್ದಾರೆ. (2008ರ ಆರ್ಥಿಕ ಬಿಕ್ಕಟ್ಟಿನ ನಂತರದಲ್ಲಿ ಆರು ಕೋಟಿ ಹತ್ತು ಲಕ್ಷ ಉದ್ಯೋಗಗಳು ನಶಿಸಿವೆ ಎಂಬುದಾಗಿ ಐಎಲ್‌ಒನ ಇತ್ತೀಚಿನ ವರದಿ ತಿಳಿಸಿದೆ)

ಅಮೆರಿಕದ ಉಪಾಧ್ಯಕ್ಷ ಜೋ ಬಿಡೆನ್, "ಈ ಪರಿವರ್ತನೆ ಒಟ್ಟಾರೆಯಾಗಿ ಚೆನ್ನಾಗಿದೆ. ಅದರಲ್ಲಿ ಗಂಡಾಂತರವೂ ಇದೆ. ಅದಕ್ಕೆ ತಕ್ಕಂತೆ ನಾವು ಪೂರ್ವ ತಯಾರಿ ಮಾಡಿಕೊಳ್ಳಬೇಕು. ಇಲ್ಲಿರುವ ನಾವೆಲ್ಲರೂ ಚೆನ್ನಾಗಿಯೇ ಇರುತ್ತೇವೆ. ಆದರೆ, ಮಳಿಗೆಯೊಂದರಲ್ಲಿ ಕೆಲಸ ಮಾಡುವವನು ಹೊಸ ಪರಿಸ್ಥಿತಿಯಲ್ಲಿ ಅನವಶ್ಯವಾದಾಗ, ಅವನ ಗತಿ ಏನು?" ಎಂಬುದಾಗಿ ಮೊಸಳೆ ಕಣ್ಣೀರು ಸುರಿಸಿದರು.

ಅತಿ ಕಿರಿಯ ವಯಸ್ಸಿನ ಕೆನಡಾದ ಪ್ರಧಾನ ಮಂತ್ರಿ ಜಸ್ಟಿನ್ ಟ್ರುಡೀ "ನಾವು ಪಡೆಯುವ ಭವಿಷ್ಯವನ್ನು ತಂತ್ರಜ್ಞಾನವಷ್ಟೇ ನಿರ್ಧರಿಸುವುದಿಲ್ಲ. ನಮ್ಮ ಆಯ್ಕೆ ಅದನ್ನು ನಿರ್ಧರಿಸುತ್ತದೆ. ನಾಯಕತ್ವ ಅದನ್ನು ನಿರ್ಧರಿಸುತ್ತದೆ. ನಾಲ್ಕನೆಯ ಕೈಗಾರಿಕಾ ಕ್ರಾಂತಿಯು ಉಸಿರು ಹಿಡಿಯುವ ಸಾಧ್ಯತೆಗಳಿಂದ ಕೂಡಿದೆ. ಅದು ಮಾನವನ ಪ್ರಗತಿಗೆ ಪೂರಕವಾಗಿರಬೇಕು. ಅದರ ಬದಲಿಗೆ ಅಲ್ಲ. ಉದ್ಯೋಗ ನಾಶ ಸಮ್ಮತವಲ್ಲ. ನಮ್ಮ ದಿಕ್ಕು ದೆಸೆ ನಿರ್ಧರಿಸುವ ಯಜಮಾನರು ನಾವೇ" ಎಂದರು.

'ಕೃತಜ ಬುದ್ಧಿವಂತಿಕೆ'(Artificial Intelligence) ತಂತ್ರಜ್ಞಾನದ ಆಂತರ್ಯದಲ್ಲಿ ಮಾನವಕೋಟಿಯ ಅವನತಿ ಅಡಗಿದೆಯೇ? ಅವನತಿ ಸನ್ನಿಹಿತವಾಗುವ ಲಕ್ಷಣಗಳಿವೆ ಎನ್ನುತ್ತಾರೆ ಕೃತಕ ಬುದ್ಧಿವಂತಿಕೆ ವಲಯದ ತಜ್ಞರು. "ಹೊಸ ತಿಕ್ಕಾಟಗಳ ಸಂಧಿಕಾಲದಲ್ಲಿದ್ದೇವೆ. ಯುದ್ಧಗಳನ್ನು ನಡೆಸುವ ಏಕಸ್ವಾಮ್ಯ ಬೇಗ ಮನುಷ್ಯನ ಕೈತಪ್ಪಿ ಹೋಗಬಹುದು" ಎನ್ನುತ್ತಾರೆ ನಿಶಸ್ತ್ರೀಕರಣ ಮತ್ತು ಪ್ರಸರಣ ತಡೆ ಸಂಸ್ಥೆಯ ಅಂಜೆಲಾ ಕೇನ್.

ಹೆಚ್ಚುತ್ತಿರುವ ಅಸಮಾನತೆ

ಹಂಚಿಕೆ: ಆಕ್ಸ್‌ಫ್ಯಾಮ್‌ನ 2015ರ ವರದಿಯ ಪ್ರಕಾರ, 2000-2015ರ ಹದಿನೈದು ವರ್ಷಗಳ ಅವಧಿಯಲ್ಲಿ, ಭಾರತದಲ್ಲಿ 2284 ಬಿಲಿಯನ್ ಡಾಲರ್(155312000000000 ರೂಗಳು-ಹದಿನೈದು ಸಂಖ್ಯೆಗಳು) ಸಂಪತ್ತು ಸೃಷ್ಟಿಯಾಗಿದೆ. ಅದರಲ್ಲಿ, ಸುಮಾರು 1400 ಬಿಲಿಯನ್ ಡಾಲರ್ (ತೊಂಭತ್ತೈದು ಲಕ್ಷ ಇಪ್ಪತ್ತು ಸಾವಿರ ಕೋಟಿ ರೂಪಾಯಿಗಳು)- ಅಂದರೆ, ಶೇ.61 ಭಾಗ -ಸಂಪತ್ತು ಒಟ್ಟು ಜನ ಸಂಖ್ಯೆಯ ಶೇ.1 ರಷ್ಟಿರುವ ಶ್ರೀಮಂತರಲ್ಲಿ ಶ್ರೀಮಂತರ ಪಾಲಾಗಿದೆ. ಅವರ ಕೆಳಗಿರುವ ಜನ ಸಂಖ್ಯೆಯ ಶೇ.9 ರಷ್ಟಿರುವ ಶ್ರೀಮಂತರಿಗೆ 500 ಬಿಲಿಯನ್ ಡಾಲರ್(ಮೂವತ್ತುನಾಲ್ಕು ಲಕ್ಷ ಕೋಟಿ ರೂಪಾಯಿಗಳು) - ಅಂದರೆ, ಶೇ.21 ಭಾಗ -ಪಾಲು ಸಿಕ್ಕಿದೆ. ತಳದಲ್ಲಿರುವ ಶೇ.90 ಭಾಗ ಮಂದಿಗೆ ಸಿಕ್ಕಿರುವುದು ಕೇವಲ 400 ಬಿಲಿಯನ್ ಡಾಲರ್(ಇಪ್ಪತ್ತೇಳು ಲಕ್ಷ ಇಪ್ಪತ್ತು ಸಾವಿರ ಕೋಟಿ ರೂಪಾಯಿಗಳು) - ಅಂದರೆ, ಶೇ.18 ಭಾಗ) ಮಾತ್ರ.

ವಿಶ್ವದ ಜನಸಂಖ್ಯೆಯ ಅರ್ಧಭಾಗ (ಅಂದರೆ,360 ಕೋಟಿ) ಜನರ ಬಳಿ ಇರುವ ಸಂಪತ್ತಿಗಿಂತಲೂ ಹೆಚ್ಚು ಸಂಪತ್ತು ಕೇವಲ 62 ಮಂದಿಯ ಬಳಿ ಶೇಖರಣೆಯಾಗಿದೆ. ಐದು ವರ್ಷಗಳ ಹಿಂದೆ, 388 ಮಂದಿ ಅತಿ ದೊಡ್ಡ ಶ್ರೀಮಂತರು ವಿಶ್ವದ ಅರ್ಧ ಸಂಪತ್ತನ್ನು ಹೊಂದಿದ್ದರು. ಇದು, ಶ್ರೀಮಂತರು ಎಷ್ಟು ವೇಗವಾಗಿ ಇನ್ನೂ ಹೆಚ್ಚು ಶ್ರೀಮಂತರಾಗುತ್ತಿದ್ದಾರೆ ಎಂಬುದನ್ನು ತೋರಿಸುತ್ತದೆ.

ಶ್ರೀಮಂತರು ಯಾರು? ಎಷ್ಟು ಮಂದಿ?

ಭಾರತದ ನೂರು ಮಂದಿ ಭಾರಿ ಶ್ರೀಮಂತರ ಬಳಿ ಇರುವ ಸಂಪತ್ತು ದೇಶದ ಜನಸಂಖ್ಯೆಯ ಶೇ.70 ಭಾಗ, ಅಂದರೆ 87 ಕೋಟಿ ಜನರ ಬಳಿ ಇರುವ ಸಂಪತ್ತಿಗೆ ಸಮನಾಗಿದೆ. ಒಬ್ಬ ವ್ಯಕ್ತಿ (ಮುಖೇಶ್ ಅಂಬಾನಿ) ಹೊಂದಿರುವ ಸಂಪತ್ತು ತಳ ಮಟ್ಟದಲ್ಲಿರುವ 25 ಕೋಟಿ ಜನರ ಸಂಪತ್ತಿಗೆ ಸಮನಾಗಿದೆ. 8.5 ಲಕ್ಷ ರೂ ನಿಂದ 85 ಲಕ್ಷರೂಗಳವರೆಗಿನ ಬೆಲೆಯ ಆಸ್ತಿ ಉಳ್ಳವರನ್ನು ಮಧ್ಯಮ ವರ್ಗದವರು ಎನ್ನುತ್ತಾರೆ. ಇವರ ಸಂಖ್ಯೆ ಶೇ.3 (ಅಂದರೆ, 3.75 ಕೋಟಿ ಮಂದಿ).

ಸಂಪತ್ತಿನ ಒಡೆತನ:


2015 ರಲ್ಲಿ, ದೇಶದ ಜನಸಂಖ್ಯೆಯ ಶೇ. ಒಂದು ಭಾಗದಷ್ಟಿರುವ ಶ್ರೀಮಂತರು ದೇಶದ ಸಂಪತ್ತಿನಲ್ಲಿ ಶೇ.53 ಪಾಲು ಹೊಂದಿದ್ದಾರೆ. ಹದಿನೈದು ವರ್ಷಗಳ ಹಿಂದೆ, ಅವರ ಪಾಲು ಶೇ.38 ರಷ್ಟಿತ್ತು. ಈ ಅವಧಿಯಲ್ಲಿ ಅವರ ಪಾಲು ಶೇ.15 ಭಾಗ ವೃದ್ಧಿಯಾಗಿದೆ. ಈ ಶೇ.1 ಭಾಗದವರ ಪೈಕಿ, ತುತ್ತ ತುದಿಯಲ್ಲಿರುವ ಬೆರಳೆಣಿಕೆಯ 0.2% ಮಂದಿ (25 ಲಕ್ಷ ಮಂದಿ) ದೇಶದ ಸಂಪತ್ತಿನಲ್ಲಿ ಶೇ.40 ಭಾಗ ಹೊಂದಿದ್ದಾರೆ ಮತ್ತು 0.8% ಮಂದಿಯ ಸಂಪತ್ತಿನ ಪಾಲು 13% ಇದೆ. ಶೇ.1 ಭಾಗದವರ ಹಿಂದಿರುವ ಶೇ.9 ಮಂದಿ ಹೊಂದಿರುವ ಪಾಲು ಒಟ್ಟು ಸಂಪತ್ತಿನ ಶೇ.23ರಷ್ಟಿದೆ. ತಳದಲ್ಲಿರುವ ಶೇ.90 ಮಂದಿ (113 ಕೋಟಿ ಜನ) ಹೊಂದಿರುವ ಸಂಪತ್ತಿನ ಪಾಲು ಜುಜುಬಿ ಶೇ.24ಭಾಗ. ಹದಿನೈದು ವರ್ಷಗಳ ಹಿಂದೆ ಇವರು(90% ಮಂದಿ) ಶೇ.33ರಷ್ಟು ಪಾಲು ಹೊಂದಿದ್ದರು. ಈಗ ಅದು ಶೇ.24ಕ್ಕೆ ಇಳಿದಿರುವುದು ತಳಮಟ್ಟದಲ್ಲಿರುವವರ ಬಡತನ ಹೆಚ್ಚುತ್ತಿರುವುದಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಕೇಕ್ ಗಾತ್ರ ದೊಡ್ಡದಾಗುತ್ತಿದೆ. ಅದರೊಂದಿಗೆ ಹಸಿವಿನಿಂದ ಬಳಲುತ್ತಿರುವವರ ಸಂಖ್ಯೆಯೂ ದೊಡ್ಡದಾಗುತ್ತಿದೆ. ಅಭಿವೃದ್ಧಿಯ ಲಾಭ ಕೆಳಸ್ತರದಲ್ಲಿರುವವರಿಗೂ ಜಿನುಗುತ್ತದೆ ಎಂಬ ಮಾತು ಸುಳ್ಳಾಗಿದೆ. ಬದಲಿಗೆ, ಕೆಳಗೆ ಇರುವವರ ವರಮಾನ ಮತ್ತು ಆಸ್ತಿಗಳನ್ನು ಮೇಲಿರುವವರು ಗಾಬರಿಗೊಳಿಸುವ ಮಟ್ಟದಲ್ಲಿ ಹೀರಿಕೊಳ್ಳುತ್ತಿದ್ದಾರೆ. ವಿಶ್ವದ ಎಲ್ಲೆಡೆ ಗೋಚರಿಸುತ್ತಿರುವ ಈ ವಿದ್ಯಮಾನದ ಹಿಂದೆ ಕೆಲಸಮಾಡುತ್ತಿರುವ ಒಂದು ಅಂಶ ಸ್ಪಷ್ಟವಾಗಿ ಕಾಣುತ್ತಿದೆ. ಕಾರ್ಪೋರೇಟ್‌ಗಳು ಮತ್ತು ಶ್ರೀಮಂತರು ಕೊಡಬೇಕಾದ್ದ ಪ್ರಮಾಣದಲ್ಲಿ ತೆರಿಗೆ ಕೊಡುವುದರಿಂದ ತಪ್ಪಿಸಿಕೊಳ್ಳಲು ಅವರು ತೆರಿಗೆ ಆಶ್ರಯಧಾಮಗಳ ಬಳಕೆ ಮಾಡಿಕೊಳ್ಳುತ್ತಿರುವುದು ಈ ಸಮಸ್ಯೆಯ ಕೇಂದ್ರ ಬಿಂದು.


ತೆರಿಗೆಗಳ್ಳತನ

ವಿಶ್ವದ ಶ್ರೀಮಂತರ ತೆರಿಗೆ ತಪ್ಪಿಸಿದ ಹಣ, ಸ್ವಿಜರ್‌ಲ್ಯಾಂಡ್, ಮಾರಿಷಸ್, ಸಿಂಗಾಪುರ, ಹಾಂಗ್‌ಕಾಂಗ್, ಲಕ್ಸೆಂಬರ್ಗ್ ಮುಂತಾದ ತೆರಿಗೆ ಆಶ್ರಯಧಾಮಗಳಲ್ಲಿ ಕೂತಿದೆ. ಇಲ್ಲಿ ಹಣ ಇಟ್ಟವರ ವಿವರಗಳನ್ನು ಗೌಪ್ಯವಾಗಿಡಲಾಗುತ್ತದೆ. ಈ ಹಣದ ಪ್ರಮಾಣ ಸುಮಾರು 7.6 ಟ್ರಿಲಿಯನ್ ಡಾಲರ್ (516800000000000-ಐದು ಕೋಟಿ ಹದಿನಾರು ಲಕ್ಷ ಎಂಭತ್ತು ಸಾವಿರ ಕೋಟಿ ರೂಪಾಯಿಗಳು-ಈ ಮೊತ್ತ ಹದಿನೈದು ಅಂಕಿಗಳಲ್ಲಿದೆ) ಎಂದು ಅಂದಾಜು ಮಾಡಲಾಗಿದೆ. ಈ ಹಣದ ಮೇಲೆ ಕಡಿಮೆ ಎಂದರೂ 190 ಬಿಲಿಯನ್ ಡಾಲರ್(12,92,000,0000000 ರೂಗಳು) ತೆರಿಗೆ ಸಂಗ್ರಹವಾಗುತ್ತಿತ್ತು. ಈ ಪ್ರಮಾಣದಲ್ಲಿ ತೆರಿಗೆ ತಪ್ಪಿಸಿಕೊಳ್ಳುವುದರಿಂದ ಅನೇಕ ದೇಶಗಳ ಸರ್ಕಾರಗಳು ತಮ್ಮ ದೇಶದ ನಾಗರಿಕರಿಗೆ ಆರೋಗ್ಯ, ಶಿಕ್ಷಣ, ರಸ್ತೆಗಳು ಮುಂತಾದ ಸೌಕರ್ಯಗಳನ್ನು ಒದಗಿಸಲು ಜನರ ಮೇಲೆ ಅಗಾಧ ಪ್ರಮಾಣದ ತೆರಿಗೆ ಹೊರೆ ಹೇರುತ್ತಾರೆ. ಉದಾಹರಣೆಗೆ, ಪೆಟ್ರೋಲ್ ಬೆಲೆ ಒಂದೇ ಸಮನೆ ಇಳಿಯುತ್ತಿದ್ದರೂ ಅದರ ಮೇಲೆ ವಿಧಿಸುತ್ತಿರುವ ತೆರಿಗೆಯ ಪ್ರಮಾಣ ಏರುತ್ತಲೇ ಇದೆ. ಹಾಗಾಗಿ, ಜನ ಸಾಮಾನ್ಯರ ಮೇಲೆ ತೆರಿಗೆಯ ಪ್ರಮಾಣ ಏರುತ್ತಿರುವುದರಿಂದ ಅವರ ಪರಿಸ್ಥಿತಿ ಸುಧಾರಿಸಿಲ್ಲ.

2000 ದಿಂದ 2015ರ ನಡುವೆ ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಸೃಷ್ಟಿಯಾದ ಸಂಪತ್ತಿನಲ್ಲಿ 3ನೇ 5 ಭಾಗ ಮೇಲಿನ ಕೇವಲ 1ಶೇ. ಮಂದಿಗೆ ದಕ್ಕಿದೆ.



2015ರಲ್ಲಿ ಭಾರತದಲ್ಲಿ ಸಂಪತ್ತಿನ ಹಂಚಿಕೆ





ಮೂರು ಸಾಂಸ್ಕೃತಿಕ ಸಂವಾದಗಳು

ವಾಸುದೇವ ಉಚ್ಚಿಲ್

ಮೂರು ಸಾಂಸ್ಕೃತಿಕ ಸಂವಾದಗಳು ಕಳೆದ ಒಂದೇ ವಾರದಲ್ಲಿ ಮಂಗಳೂರಿನಲ್ಲಿ ನಡೆದವು. ಕರಾವಳಿ ಜಿಲ್ಲೆಗಳಲ್ಲಿ ನಡೆಯುತ್ತಿರುವ ಸಾಂಸ್ಕೃತಿಕ ಸಾಮಾಜಿಕ ತಲ್ಲಣಗಳ ಹಿನ್ನೆಲೆಯಲ್ಲಿ ಅವನ್ನು ಅವಲೋಕಿಸಬೇಕಾದ ಅಗತ್ಯವಿದೆ.

ಫಕೀರ್ ಮಹಮ್ಮದ್ ಕಟ್ಪಾಡಿಯವರಿಗೆ ಪ್ರಶಸ್ತಿ:

ಮಂಗಳೂರಿನ ಮುಸ್ಲಿಂ ಸಾಹಿತ್ಯ ಪರಿಷತ್ತು ಜನವರಿ 29 ರಂದು ಹಿರಿಯ ಮುಸ್ಲಿಂ ಸಾಹಿತಿಗೆ ಪ್ರಶಸ್ತಿ ನೀಡುವ ಹಾಗೂ ಸಾಹಿತಿಯನ್ನು ಸನ್ಮಾನಿಸುವ ಕಾರ್ಯಕ್ರಮ ಇರಿಸಿಕೊಂಡಿತ್ತು. ದಾವಣಗೆರೆಯ ಸನಾವುಲ್ಲಾ ನವಿಲೆಹಾಳ ಇವರ 'ಒಂಟಿ ಮರದ ಕೆಳಗೆ' ಕೃತಿಗೆ ವರ್ಷದ ಸನ್ಮಾನ ನೀಡಲಾಗಿತ್ತು. ಕಥೆಗಾರರೂ ಕಾದಂಬರಿಗಾರರೂ ಆಗಿರುವ ಫಕೀರ್ ಮಹಮ್ಮದ್ ಕಟ್ಪಾಡಿಯವರಿಗೆ ಹಿರಿಯ ಮುಸ್ಲಿಂ ಸಾಹಿತಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಫಕೀರ್ ಮಹಮ್ಮದ್ ಕಟ್ಪಾಡಿಯವರು 'ಗೋರಿ ಕಟ್ಟಿಕೊಂಡವನು', 'ನೋಂಬು', 'ಸರಕುಗಳು', 'ಕಡವುಮನೆ' ಇತ್ಯಾದಿ ಅತ್ಯುತ್ತಮ ಕಲಾಕೃತಿಗಳನ್ನು ಕೊಟ್ಟವರು. ಬಂಡಾಯ ಸಾಹಿತ್ಯ ಸಂಘಟನೆ, ಸಮುದಾಯ ಸಂಘಟನೆಗಳಲ್ಲಿ ಗುರುತಿಸಿಕೊಂಡಿದ್ದರೂ ಬ್ಯಾರಿ ಮುಸ್ಲಿಂ ಸಮಾಜದಲ್ಲಿ ಒಬ್ಬ ಅಂಗೀಕಾರ ಪಡೆದ ಸಾಹಿತಿಯಾಗಿದ್ದರು.

ಹಲವು ವರ್ಷಗಳಿಂದ ಮುಸ್ಲಿಂ ಸಾಹಿತ್ಯ ಪರಿಷತ್ತು ಹಿರಿಯ ಮುಸ್ಲಿಂ ಸಾಹಿತಿಗೆ ಪ್ರಶಸ್ತಿ ಕೊಡುವ ಕಾರ್ಯಕ್ರಮ ನಡೆಸುತ್ತಿದ್ದರೂ, ಆ ಕಾರ್ಯಕ್ರಮಗಳ ಬಗ್ಗೆ ಮುಸ್ಲಿಮೇತರ ಸಾಹಿತ್ಯಾಸಕ್ತರಿಗೆ ಅಷ್ಟೊಂದು ಕುತೂಹಲವಿರಲಿಲ್ಲ. ಆದರೆ ಫಕೀರ್ ಮಹಮ್ಮದರಿಗೆ ಪ್ರಶಸ್ತಿ ಪ್ರದಾನ ನಡೆದಾಗ ಮಂಗಳೂರಿನ ಪುರಭವನ ತುಂಬಿಹೋಗಿತ್ತು. ಹಿಂದೆ ಮುಸ್ಲಿಮರ ಮೇಲೆ ಮಂಗಳೂರಿನಲ್ಲಿ ಹಾಗೂ ಬಸ್ರೂರು-ಗುಲ್ವಾಡಿಯಲ್ಲಿ ಹಿಂದೂತ್ವದ ದಾಳಿಗಳು ನಡೆದಾಗ ಅವರು ಸೌಹಾರ್ದಪ್ರಿಯ ಮಿತ್ರರೊಂದಿಗೆ ಭೇಟಿ ನೀಡಿ ಅಧ್ಯಯನ ಮಾಡಿದ್ದು, ಕಾರಣಗಳನ್ನು ಆಡಳಿತದ ಗಮನಕ್ಕೆ ಬರಹಗಳ ಮೂಲಕ ತಂದುದು ಅತ್ಯಂತ ಜವಾಬ್ದಾರಿಯುತ ಲೇಖಕನ ಪ್ರಶಂಸನೀಯ ಕಾರ್ಯವಾಗಿದೆ. ಹಾಗೆಯೇ ಕೋಮು ಹಿಂಸೆ ನಿಯಂತ್ರಣ ಮಸೂದೆ 2011ರ ಬಗೆಗಿನ ಅವರ ವಿಮರ್ಶಾತ್ಮಕ ಪುಸ್ತಕವೂ ಉಪಯುಕ್ತ ದಾಖಲೆಯಾಗಿದೆ.

ಮುಸ್ಲಿಂ ಸಾಹಿತ್ಯ ಪರಿಷತ್ತಿನ ಸಭೆಗಳ ಭಾಷಣಕಾರರು ಮಾತನಾಡುವ ಶೈಲಿಯಲ್ಲಿ ಒಂದು ಬಗೆಯ ಮತೀಯ ಸಂಬಂಧವನ್ನು ಸಾಮಾನ್ಯವಾಗಿ ತೋರಿಸುತ್ತಾರೆ. ಆದರೆ ಪ್ರಶಸ್ತಿ ಸ್ವೀಕರಿಸಿ ಫಕೀರ್ ಮಹಮ್ಮದರು ಒಬ್ಬ ಸೆಕ್ಯುಲರ್ ಕನ್ನಡ ಲೇಖಕನ ನಿಲುವಿನಲ್ಲಿ ಮಾತನಾಡಿದ್ದು ಗಮನಾರ್ಹ ಸಂಗತಿ. ಖ್ಯಾತ ಮಾನವ ಹಕ್ಕುಗಳ ಹೋರಾಟಗಾರ್ತಿ ತೀಸ್ತಾ ಸೆಟಲ್ವಾಡ್ ಈ ಸಭೆಯಲ್ಲಿ ಭಾರತದಲ್ಲಿ ಪ್ರಜಾಪ್ರಭುತ್ವದ ಭವಿಷ್ಯ ಕುರಿತು ಮಾತನಾಡಿದರು.

ಸಹಬಾಳ್ವೆಯ ಸಾಗರ - ಸಮಾವೇಶ:

ಜನವರಿ 30 ರಂದು ಸಹಬಾಳ್ವೆಯ ಸಾಗರ ಎಂಬ ರಾಜ್ಯಮಟ್ಟದ ಸೌಹಾರ್ದ ಸಮಾವೇಶವನ್ನು ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಮಂಗಳೂರಿನ ಪುರಭವನದಲ್ಲಿ ಆಯೋಜಿಸಿತ್ತು. ಬಹುಸಂಖ್ಯಾಕ ಕೋಮುವಾದ ಹಾಗೂ ಅಲ್ಪಸಂಖ್ಯಾಕ ಕೋಮುವಾದ ಎರಡೂ ಬಗೆಯ ಕೋಮುವಾದಗಳನ್ನು ಎದುರಿಸುವ ನಿಲುವನ್ನು ಎಡಪಕ್ಷಗಳು ಹಾಗೂ ಎಡನಿಲುವಿನ ಸಾಂಸ್ಕೃತಿಕ ಸಂಘಟನೆಗಳು ಹೊಂದಿದ್ದರೆ, ಅದಕ್ಕೆ ವಿರುದ್ಧವಾಗಿ ಹಿಂದೂತ್ವ ಕೋಮುವಾದ ಮಾತ್ರ ಸದ್ಯದ ಅಪಾಯವಾಗಿದೆ ಎಂಬುದು ಕೋಮು ಸೌಹಾರ್ದ ವೇದಿಕೆಯ ನಿಲುವು. ಇದಕ್ಕಾಗಿ ಈ ಹಿಂದೆ ಮುಸ್ಲಿಂ ಕೋಮುವಾದಿ ಸಂಘಟನೆ ಪಿ.ಎಫ್.ಐ.ಯನ್ನು ತಮ್ಮ ಹೋರಾಟಗಳ ಸಹಭಾಗಿಗಳಾಗಿ ಅವರು ಮಾಡಿದ್ದರು. ಈ ಬಾರಿ ಜಮಾತೆ ಇಸ್ಲಾಮ್ ಎಂಬ ಹಳೆಯ ಮೂಲಭೂತವಾದಿಗಳನ್ನು ಅವರು ಜತೆಗಿರಿಸಿಕೊಂಡಿದ್ದಾರೆ. ಏನೇ ಇರಲಿ ಕೋಮುವಾದ ವಿರೋಧಿಗಳಾದ ಅನೇಕ ಸಂಘಟನೆಗಳನ್ನು ಅವರು ಜೊತೆಗೂಡಿಸಿದ್ದರಿಂದ ಸಮಾವೇಶವು ಮಾಧ್ಯಮದ ಗಮನವನ್ನು ಸೆಳೆಯಿತು. ಪ್ರೊ.ಬರಗೂರು ರಾಮಚಂದ್ರಪ್ಪ, ಪ್ರೊ.ಚಂದ್ರಶೇಖರಪಾಟೀಲ, ದಿನೇಶ್ ಅಮೀನ್ ಮಟ್ಟು, ತೀಸ್ತಾ ಸೆಟಲ್ವೆಡ್, ಪ್ರೊ. ಯೋಗೇಂದ್ರ ಯಾದವರಂಥ ಪ್ರಖ್ಯಾತ ಕ್ರಿಯಾಶೀಲ ಚಿಂತಕರು ಈ ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಸಹಬಾಳ್ವೆಯ ಸಮಾಜ ನಿರ್ಮಾಣದಲ್ಲಿ ರಾಜಕೀಯ ಪಕ್ಷಗಳ ಪಾತ್ರ ಎಂಬ ಗೋಷ್ಠಿಯಲ್ಲಿ ಸರಕಾರಕ್ಕೆ ಪ್ರಶ್ನೆಗಳನ್ನು ಎತ್ತಲು ವಿವಿಧ ಎಡಪಕ್ಷಗಳನ್ನು ಮತ್ತು ಕೆಲವು ಜನಪರ ಸಂಘಟನೆಗಳನ್ನು ಕೇಳಿಕೊಳ್ಳಲಾಗಿತ್ತು. ಸಿಪಿಐ(ಎಂ) ಪರವಾಗಿ ಜಿ.ಎನ್.ನಾಗರಾಜ್ ಮಾತನಾಡಿದರು. ಕೋಮುವಾದವನ್ನು ಎದುರಿಸಬೇಕಾದ ಪ್ರಶ್ನೆ ನಮ್ಮ ಮುಂದಿದೆ. ಕೋಮುವಾದವನ್ನು ಬಲಪಡಿಸುತ್ತಿರುವವರು ಬಿಜೆಪಿಯವರಲ್ಲದೆ ಮತ್ತಾರೂ ಅಲ್ಲ. ಬಿಜೆಪಿ ಇವತ್ತು ಕೇಂದ್ರದಲ್ಲಿ ಅಧಿಕಾರದಲ್ಲಿದೆ. ಅದನ್ನು ಅಧಿಕಾರದಿಂದ ಇಳಿಸುವುದು ಮಾತ್ರ ಕೋಮುವಾದವನ್ನು ದುರ್ಬಲಗೊಳಿಸುವ ಒಂದು ದಾರಿ. ಬಿಜೆಪಿಯನ್ನು ಹಿಮ್ಮೆಟ್ಟಿಸುವ ಕಾರ್ಯತಂತ್ರದ ಬಗ್ಗೆ ಚಿಂತಿಸಬೇಕಾಗಿದೆ ಎಂದು ಜಿ.ಎನ್.ನಾಗರಾಜ್ ಹೇಳಿದರು.

ಈ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಎ.ಕೆ.ಸುಬ್ಬಯ್ಯನವರು ಬಿಜೆಪಿ ಮತ್ತು ಆರೆಸ್ಸೆಸ್ ಮೇಲೆ ಪ್ರಖರ ವಾಗ್ದಾಳಿ ನಡೆಸಿದರು. ಕೋಮುವಾದಿಗಳನ್ನು ಎದುರಿಸುವ ಧೈರ್ಯವಿಲ್ಲದ ಕಾಂಗ್ರೆಸಿಗರನ್ನು ಟೀಕಿಸಿದರು. ರಾಜ್ಯ ಸರಕಾರದ ಸಚಿವ ಯು.ಟಿ.ಖಾದರ್ ವೇದಿಕೆಯಲ್ಲಿದ್ದರು. ಇಂದಿನ ಸೌಹಾರ್ದ ಸಮಾವೇಶಕ್ಕೆ ಕಾಂಗ್ರೆಸಿಗರು ಹಾಜರಾಗಿಲ್ಲ. ಸಂಘಪರಿವಾರವನ್ನು ಎದುರಿಸಲು ಹೆಚ್ಚಿನ ಜನಬಲ ಇರುವ ಕಾಂಗ್ರೆಸಿಗರೇ ಸಮಾವೇಶಕ್ಕೆ ಬೆಂಬಲಿಸದಿದ್ದರೆ ಸೆಕ್ಯುಲಾರ್ ಶಕ್ತಿಗಳು ಬಲಗೊಳ್ಳುವುದಾದರೂ ಹೇಗೆ ಎಂದು ಅವರು ಪ್ರಶ್ನಿಸಿದರು.

'ಶೂದ್ರರಾಗೋಣ ಬನ್ನಿ' : ಪ್ರಸನ್ನ ಜೊತೆ ಸಂವಾದ:

ಫೆಬ್ರವರಿ 1 ರಂದು ನಡೆದ ಈ ಸಂವಾದಕ್ಕೂ ಎರಡು ದಿನಗಳ ಮೊದಲು ನಡೆದ ಸಹಬಾಳ್ವೆಯ ಸಾಗರ ಕಾರ್ಯಕ್ರಮದ ಸಂಜೆ ಕೊನೆಯಲ್ಲಿ ಪ್ರಸನ್ನ ಅವರು ಬರೆದ 'ಕೊಂದವರಾರು?' ಎಂಬ ನಾಟಕದ ಪ್ರದರ್ಶನ ನಡೆಯಿತು. 'ನಾನೇಕೆ ಗಾಂಧಿಯನ್ನು ಕೊಂದೆ?' ಎಂಬ ಗೋಡ್ಸೆ ವಿಚಾರಗಳನ್ನು ಅರ್ಥಾತ್ ಹಿಂದುತ್ವದ ವಿಚಾರಗಳನ್ನು ಸಮರ್ಥಿಸುವ ಪುಸ್ತಕ ಮತ್ತು ಮಹಾತ್ಮ ಗಾಂಧಿ ಬರೆದ 'ಹಿಂದ್ ಸ್ವರಾಜ್' ಪುಸ್ತಕವನ್ನು ಈ ನಾಟಕದಲ್ಲಿ ಮುಖಾಮುಖಿಯಾಗಿಸಲಾಗಿದೆ. ಗೋಡ್ಸೆವಾದವು ಮೈಮರೆಸುವಷ್ಟು ಯುವಕರನ್ನು ಸೆಳೆಯುವ ಕಾರಣಗಳನ್ನು ಪ್ರಸನ್ನ ಇಲ್ಲಿ ವಿಶ್ಲೇಷಿಸಿದ್ದಾರೆ. ಇದಕ್ಕೆ ವಿರುದ್ಧವಾಗಿ ಹಿಂದ್ ಸ್ವರಾಜ್ ಮತ್ತು ಗಾಂಧಿ ಚಿಂತನೆಗಳು ತಾಳ್ಮೆ ಮತ್ತು ವಿವೇಕವನ್ನು ಬಯಸುತ್ತವೆ. ಭಾರತದ ಜನತೆಯನ್ನು ಮೈಮರೆಸಿರುವ ಕೋಮುವಾದದ ಬಗ್ಗೆ ಪ್ರಸನ್ನ ಅವರ ಈ ನಾಟಕ ಒಂದು ಗಂಭೀರ ವಿಶ್ಲೇಷಣೆಯಾಗಿದೆ.

ಪ್ರಸನ್ನ ಅವರಿಂದ ಪ್ರೇರಣೆಗೊಂಡು ಅವರೊಂದಿಗೆ ಸಮುದಾಯ ರಂಗ ಚಳುವಳಿಯಲ್ಲಿ ಇದ್ದ ಅನೇಕರು ರಾಜ್ಯದ ಇತರ ಕಡೆಯಂತೆಯೇ ಮಂಗಳೂರಿನಲ್ಲಿ ಇದ್ದು ಅಷ್ಟಿಷ್ಟು ರಂಗ ಚಟುವಟಿಕೆ ಮಾಡುತ್ತಿದ್ದಾರೆ. ಬಹಳ ಮಂದಿ ಯಾವುದೇ ಪುರೋಗಾಮಿ ಚಟುವಟಿಕೆಯಲ್ಲಿ ಇಲ್ಲ. ಪ್ರಸನ್ನ ಮತ್ತು ಸಮುದಾಯದ ಬಗ್ಗೆ ಹಳಹಳಿಕೆ ಇನ್ನೂ ಅವರಲ್ಲಿದೆ. ಪ್ರಸನ್ನ ಮಾರ್ಕ್ಸ್‌ವಾದದಿಂದ ಗಾಂಧೀವಾದದ ಕಡೆಗೆ ಸಾಗಿದ್ದು, ಯಂತ್ರಗಳ ಬಳಕೆಯನ್ನು ಕಡಿಮೆಗೊಳಿಸುವ ಚಳುವಳಿ ಆರಂಭಿಸಿದ್ದಾರೆ. ಶ್ರಮಸಹಿತ ಸರಳ ಬದುಕು ಅವರ ಇತ್ತೀಚಿನ 'ಶೂದ್ರರಾಗೋಣ ಬನ್ನಿ' ಪುಸ್ತಕದ ಸಾರ. ಅವರ ಗ್ರಾಮೋದ್ಯೋಗ ಚಳುವಳಿ, ಚರಕಾ, ಕೈಮಗ್ಗ, ಬದನವಾಳು ಸಮಾವೇಶ-ಹಳೆಯ ಸಂಗಾತಿಗಳಿಗೆ ಇನ್ನೂ ಪ್ರಸನ್ನ ಅವರ ಬಗ್ಗೆ ರೋಮಾಂಚನವನ್ನು ಉಂಟು ಮಾಡುತ್ತಿದೆ.

ವಿಜ್ಞಾನ ತಂತ್ರಜ್ಞಾನಗಳ ಮೇಲೆ ಅತಿ ಅವಲಂಬನೆ ಕೂಡದು ಎಂಬುದು ಅವರ ವಾದ. ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಯಾರು ನಿಯಂತ್ರಿಸುತ್ತಿದ್ದಾರೆ ಮತ್ತು ಆ ನಿಯಂತ್ರಣ ಯಾರ ಕೈಗೆ ಹೋಗಬೇಕು ಎಂಬ ಪ್ರಶ್ನೆಯನ್ನು ಸಭೆಯಲ್ಲಿ ಭಾಗವಹಿಸಿದ್ದ ಪ್ರೊ.ರಾಜೇಂದ್ರ ಉಡುಪ ಎತ್ತಿದರು. ಯಾವ ರಿಸ್ಕ್ ತೆಗೆದುಕೊಳ್ಳಲೂ ಸಿದ್ಧರಿಲ್ಲದ ಕ್ರಿಯಾಹೀನರ ಕಂಫರ್ಟ್ ಜೋನ್ ಆಗಿದೆ ಪ್ರಸನ್ನರ ಚಳುವಳಿ ಎಂಬ ವಿಮರ್ಶೆಯೂ ಈ ಸಂವಾದದಲ್ಲಿ ಮೂಡಿ ಬಂತು. ■

ಬೀಡಿ ಕಾರ್ಮಿಕರ ನೆರವಿಗೆ ಉಳ್ಳಾಲದಲ್ಲಿ ಸಿಐಟಿಯು ಆಗ್ರಹ:

ಬೀಡಿ ನಿರ್ಮಾಣ ಚಟುವಟಿಕೆ ಮೇಲೆ ಕೇಂದ್ರ ಸರಕಾರವು ಅನುಷ್ಠಾನಕ್ಕೆ ತಂದಿರುವ ಕಾಯಿದೆಯಿಂದಾಗಿ ಬೀಡಿ ಕಾರ್ಮಿಕ ವೃತ್ತಿ ನಿರ್ನಾಮದ ಹಂತದಲ್ಲಿದೆ. ಲಕ್ಷಾಂತರು ಬೀಡಿ ಕಾರ್ಮಿಕರು ಬೀದಿಗೆ ಬೀಳಲಿದ್ದಾರೆ. ಅಂಥ ಬೀಡಿ ಕಾರ್ಮಿಕರಿಗೆ ಪರ್ಯಾಯ ಉದ್ಯೋಗವನ್ನು ಸರಕಾರ ಒದಗಿಸಬೇಕು ಎಂದ್ರ ಆಗ್ರಹಿಸಿ ಸಿಐಟಿಯು ಸಂಯೋಜಿತ ಕೋಟೆಕಾರ್ ಸರ್ಕಲ್ ಬೀಡಿ ಲೇಬರ್ ಯೂನಿಯನ್ ಆಶ್ರಯದಲ್ಲಿ ಜನವರಿ 27 ರಂದು ಸೋಮೇಶ್ವರ ಗ್ರಾಮ ಪಂಚಾಯತು ಆವರಣದಲ್ಲಿ ಪ್ರತಿಭಟನೆ ನಡೆಸಿದರು.

ಬೀಡಿ ಕಾರ್ಮಿಕರಾಗಿದ್ದು ಕೆಲಸ ಕಳೆದುಕೊಳ್ಳುವ ಕಾರ್ಮಿಕರು ಉದ್ಯೋಗ ಕೋರಿ ಗ್ರಾಮ ಪಂಚಾಯತಿನಲ್ಲಿ ನೋಂದಣಿ ಮಾಡಿ ಕೊಳ್ಳುವ ಕಾರ್ಯಕ್ರಮವನ್ನು ಪ್ರತಿಭಟನೆಯ ಅಂಗವಾಗಿ ಹಮ್ಮಿಕೊಳ್ಳಲಾಗಿತ್ತು. ಬೀಡಿ ಫೆಡರೇಶನಿನ ದ.ಕ. ಜಿಲ್ಲಾ ಕಾರ್ಯದರ್ಶಿ ಜೆ.ಬಾಲಕೃಷ್ಣ ಶೆಟ್ಟಿ, ಕೋಟೆಕಾರ್ ಬೀಡಿ ಲೇಬರ್ ಯೂನಿಯನಿನ ಅಧ್ಯಕ್ಷೆ ಪದ್ಮಾವತಿ ಶೆಟ್ಟಿ, ಕಾರ್ಯದರ್ಶಿ ಜಯಂತ ನಾಯ್ಕ್, ಸುಂದರ ಕುಂಪಲ, ನಳಿನಿ, ವಿಲಾಸಿನಿ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಇದಕ್ಕೂ ಮೊದಲು ಕೋಟೆಕಾರಿನಿಂದ ಸೋಮೇಶ್ವರ ಗ್ರಾಮ ಪಂಚಾಯತಿವರೆಗೂ ಮೆರವಣಿಗೆ ನಡೆಯಿತು. ■

ರಾಜ್ಯಗಳ ಸುತ್ತ



ವಿಶ್ವಾಸ್

ಆಂಧ್ರ ಪ್ರದೇಶ: ಸಾರಾಯಿ ಅಂಗಡಿಗಳ ವಿರುದ್ಧ ಚಳವಳಿ

ಆಂಧ್ರಪ್ರದೇಶ ರಾಜಧಾನಿ ವಿಜಯವಾಡದಲ್ಲಿ ಜನವರಿ 8ರಂದು ಬೃಹತ್ ಮೆರವಣಿಗೆ ಮತ್ತು ವಿಚಾರ ಸಂಕಿರಣ ನಡೆಯಿತು. ವಿಶಾಲ ಸಂಯುಕ್ತ ವೇದಿಕೆಯೊಂದು ರಾಜ್ಯ ಸರಕಾರದ ಅವೈಜ್ಞಾನಿಕ ಸಾರಾಯಿ ನೀತಿಯ ವಿರುದ್ಧ ಈ ಚಳವಳಿಯನ್ನು ಹಮ್ಮಿಕೊಂಡಿತ್ತು. ರಾಜ್ಯ ಸರಕಾರ ತನ್ನ ಸಾರಾಯಿ ನೀತಿಯನ್ನು ವಾಪಸ್ ಪಡೆಯಬೇಕು, ಸಾರಾಯಿ ಸೇವಿಸಿ ಸಣ್ಣ ಪ್ರಾಯದಲ್ಲೇ ಮೃತಪಟ್ಟವರ ಕುಟುಂಬಗಳಿಗೆ ಪರಿಹಾರ ನೀಡಬೇಕು ಮತ್ತು ಶಾಲೆ-ದೇವಸ್ಥಾನಗಳ ಸಮೀಪ ಇರುವ ಹಾಗೂ ರಾಷ್ಟ್ರೀಯ ಹೆದ್ದಾರಿಗಳಲ್ಲಿನ ಶರಾಬು ಅಂಗಡಿಗಳನ್ನು ಮುಚ್ಚಬೇಕು ಎಂದು ರ್‍ಯಾಲಿ ಆಗ್ರಹಿಸಿತು. ಸಾರಾಯಿ ಮಾರಾಟದ ಮೇಲೆ ನಿರ್ಬಂಧ ವಿಧಿಸಬೇಕು ಎನ್ನುವುದು ಇನ್ನೊಂದು ಪ್ರಮುಖ ಬೇಡಿಕೆಯಾಗಿತ್ತು.

ಚಂದ್ರಬಾಬು ನಾಯ್ಡು ನೇತೃತ್ವದ ಸರಕಾರ ಎಲ್ಲಾ 'ಬೆಲ್ಟ್ ಶಾಪ್'ಗಳನ್ನು ತೆಗೆದುಹಾಕುವ ಆಶ್ವಾಸನೆ ನೀಡಿ ಅಧಿಕಾರಕ್ಕೆ ಬಂದಿತ್ತು. ಆದರೆ ಆಂಧ್ರಪ್ರದೇಶದಲ್ಲಿ ಈಗ ಎರಡು ಲಕ್ಷ 'ಬೆಲ್ಟ್ ಶಾಪ್'ಗಳು ಇದ್ದು ಇನ್ನೂ 4500 ಅಂಗಡಿಗಳಿಗೆ ಸಾರಾಯಿ ಮಾರುವ ಲೈಸೆನ್ಸ್ ನೀಡಲಾಗಿದೆ ಎಂದು ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ಸಿಪಿಐ (ಎಂ) ಪಾಲಿಟ್‌ಬ್ಯೂರೋ ಸದಸ್ಯೆ ಬೃಂದಾ ಕಾರಟ್ ಹೇಳಿದರು. ಆಂಧ್ರಪ್ರದೇಶದಲ್ಲಿ ರಾಜಕಾರಣಿಗಳು ಮತ್ತು ಲಿಕ್ಕರ್ ವ್ಯಾಪಾರಿಗಳ ಮಧ್ಯೆ ಗಾಢ ಸಂಬಂಧವಿದೆ. ಇಲ್ಲಿ ಸಾರ್ವಜನಿಕ ನಲ್ಲಿಗಳಲ್ಲಿ ಜನರಿಗೆ ನೀರು ಸಿಗದಿರಬಹುದು. ಆದರೆ, ಯಾವುದೇ ಸ್ಥಳದಲ್ಲಾದರೂ ಯಾವುದೇ ವೇಳೆಯಲ್ಲಾದರೂ ಸಾರಾಯಿ ಸಿಗುತ್ತದೆ ಎಂದು ಬೃಂದಾ ಹೇಳಿದರು.

ಶಾಲೆಗಳು, ದೇವಸ್ಥಾನಗಳು, ಹೈವೆಗಳು, ಆಸ್ಪತ್ರೆಗಳು ... ಹೀಗೆ ಎಲ್ಲಾ ಕಡೆ ಸಾರಾಯಿ ಅಂಗಡಿಗಳನ್ನು ತೆರೆಯಲು ಅನುಮತಿ ನೀಡುವ ಮೂಲಕ ಆಂಧ್ರಪ್ರದೇಶ ಸರಕಾರ ಸಾರಾಯಿ ಸೇವನೆಗೆ ಪ್ರೋತ್ಸಾಹ ನೀಡುತ್ತಿದೆ ಎಂದಬುದು ಎಐಡಿಡಬ್ಲ್ಯುಎ ನಡೆಸಿದ ಸಮೀಕ್ಷೆಯಿಂದ ಗೊತ್ತಾಗಿದೆ. ಕಲಬೆರಕೆ ಸಾರಾಯಿ ಮಾರಿದ ಆರೋಪದ ಮೇಲೆ ಕೆಲವು ದಿನಗಳ ಹಿಂದೆ ಒಬ್ಬ ಮಾಜಿ ಕಾಂಗ್ರೆಸ್ ಶಾಸಕನನ್ನು ಬಂಧಿಸಲಾಗಿತ್ತು. ಆತನನ್ನು ಕಾಂಗ್ರೆಸ್ ರಕ್ಷಿಸುತ್ತದೋ ಅಥವಾ ಪಕ್ಷದಿಂದ ಉಚ್ಚಾಟಿಸುತ್ತದೋ ಎಂದು ಅವರು ಪ್ರಶ್ನಿಸಿದರು. ಹೊಸದಾಗಿ ರಚನೆಯಾಗಿರುವ ರಾಜ್ಯಕ್ಕೆ ವಿಶೇಷ ಪ್ಯಾಕೇಜ್ ಬೇಕೆಂದು ಪ್ರಧಾನಿ ಮೋದಿಯವರನ್ನು ಕೇಳುವ ಬದಲು ಆಂಧ್ರ ಮುಖ್ಯಮಂತ್ರಿ ನಾಯ್ಡು ಮೋದಿ ಮುಂದೆ ತಲೆತಗ್ಗಿಸಿ ನಿಲ್ಲುತ್ತಾರೆ. ಅದೇ ವೇಳೆ, ಸಾರಾಯಿ ಮಾರಾಟದಿಂದ ಕಡಿಮೆ ಬಿದ್ದಿರುವ ಸಂಪನ್ಮೂಲವನ್ನು ಸಂಗ್ರಹಿಸಲು ಯತ್ನಿಸುತ್ತಿದ್ದಾರೆ ಎಂದು ಬೃಂದಾ ಟೀಕಿಸಿದರು. ಸ್ಥಳೀಯ ಟಿಡಿಪಿ ನಾಯಕರು ಸಾರಾಯಿ ಅಂಗಡಿಗಳನ್ನು ನಡೆಸುತ್ತಿದ್ದಾರೆ. ಯಾವುದೇ ಲಂಗುಲಗಾಮಿಲ್ಲದೆ ಸಾರಾಯಿ ಸಿಗುತ್ತಿರುವುದರಿಂದ ಸಾವಿರಾರು ಕುಟುಂಬಗಳು ನಾಶವಾಗುತ್ತಿವೆ ಎಂದು ➡

ಫ್ರಾನ್ಸ್: 'ಉಬೇರ್ ಆರ್ಥಿಕ ಭಯೋತ್ಪಾದನೆ' ವಿರುದ್ಧ ಉಗ್ರ ಪ್ರತಿಭಟನೆ

ಕಳೆದ ವಾರ ಫ್ರಾನ್ಸ್‌ನ ಹಲವು ಪ್ರಮುಖ ನಗರಗಳಲ್ಲಿ ಟ್ರಾಫಿಕ್ ಪೂರ್ತಿ ಅಸ್ತವ್ಯಸ್ತವಾಯಿತು. ಕಾರಣ: ಉಬೇರ್ ಟ್ಯಾಕ್ಸಿ ವಿರುದ್ಧ ಫ್ರೆಂಚ್ ಟ್ಯಾಕ್ಸಿ ಯೂನಿಯನ್ ಸದಸ್ಯರು ತೋರಿಸಿದ ಉಗ್ರ ಹಿಂಸಾತ್ಮಕ ಪ್ರತಿಭಟನೆ. ರಾಜಧಾನಿ ಪ್ಯಾರೀಸ್ ಅಲ್ಲದೆ ಟೌಲೋಸ್, ಮಾರ್ಸೆಲಸ್, ಬೋರ್ಡೊ ಮುಂತಾದ ಪ್ರಮುಖ ನಗರಗಳಲ್ಲಿ ಸಾವಿರಾರು ಟ್ಯಾಕ್ಸಿ ಚಾಲಕರು ಪ್ರಮುಖ ರಸ್ತೆಗಳಲ್ಲಿ ತಡೆಗಳನ್ನು ಹಾಕಿ, ಆಯಕಟ್ಟಿನ ಸ್ಥಳಗಳಲ್ಲಿ ಟೈರ್‌ಗಳನ್ನು ಸುಟ್ಟು, ರಸ್ತೆಗಳಲ್ಲಿ 'ನಿಧಾನ ಹೋಗುವ' ಹಲವು ವಿಧಾನಗಳನ್ನು ಬಳಸಿ ಪ್ರತಿಭಟಿಸಿದರು. ಪ್ಯಾರೀಸಿನ ಎರಡೂ ವಿಮಾನ ನಿಲ್ದಾಣಗಳ ಸುತ್ತ ಸಾವಿರಕ್ಕೂ ಹೆಚ್ಚು ಟ್ಯಾಕ್ಸಿ ಚಾಲಕರು ಟ್ರಾಫಿಕ್ ಜಾಮ್ ಮಾಡಿದರು. ಇದರಿಂದಾಗಿ ಸುಮಾರು ಶೇ. 20 ವಿಮಾನ ಯಾನಗಳನ್ನು ರದ್ದು ಮಾಡಬೇಕಾಯಿತು. ಫ್ರೆಂಚ್ ಪ್ರಧಾನಿಯವರೇ ಸ್ವತಃ ಟ್ಯಾಕ್ಸಿ ಯೂನಿಯನ್ ಜತೆ ಮಾತುಕತೆ ನಡೆಸಿ 'ಅನ್ಯಾಯಯುತ ಪೈಪೋಟಿ' ನಿಲ್ಲಿಸುವ ಭರವಸೆ ಕೊಡಬೇಕಾಗಿ ಬಂತು.



ಫ್ರೆಂಚ್ ಟ್ಯಾಕ್ಸಿ ಚಾಲಕರು ಅಸಾಂಪ್ರದಾಯಿಕ ಟ್ಯಾಕ್ಸಿ ಸೇವೆಗಳ ಕಾನೂನುಬಾಹಿರ ವರ್ತನೆಯನ್ನು ಪ್ರತಿಭಟಿಸುತ್ತಿದ್ದರು. ಇದು ಮುಖ್ಯವಾಗಿ ಅಮೆರಿಕನ್ ಕಂಪನಿ ಉಬೇರ್ ಮತ್ತು ಫ್ರೆಂಚ್ 'ಹಿಚ್' ವಿರುದ್ಧವಾಗಿತ್ತು. ಇತ್ತೀಚೆಗೆ ಉಬೇರ್ 10 ಲಕ್ಷ ಒಟ್ಟು ಸವಾರಿ ದಾಟಿದ್ದು ಸಾಂಪ್ರದಾಯಿಕ ಟ್ಯಾಕ್ಸಿ ಚಾಲಕರ ಜೀವನೋಪಾಯಕ್ಕೆ ಬೆದರಿಕೆ ಒಡ್ಡಿದೆ. ಉಬೇರ್, ಹಿಚ್ ಮುಂತಾದ ಟ್ಯಾಕ್ಸಿ ಸೇವೆಗಳು ಅನ್ಯಾಯಯುತ ಕಾನೂನು ಬಾಹಿರ ಪೈಪೋಟಿ ಕೊಡುತ್ತಿವೆ ಎಂಬುದು ಅವರ ಆಪಾದನೆ. ಸಾಂಪ್ರದಾಯಿಕ ಟ್ಯಾಕ್ಸಿ ಚಾಲಕರು ಕೊಡಬೇಕಾದ ದುಬಾರಿ ಲೈಸೆನ್ಸ್ ಫೀ ಕೊಡಬೇಕಾಗಿಲ್ಲ. ಉಬೇರ್, ಹಿಚ್ ಗಳು ಮತ್ತು ಅವರನ್ನು ಬೆಂಬಲಿಸುತ್ತಿರುವ ಸಾರಿಗೆ ಮಂತ್ರಿ "ಆರ್ಥಿಕ ಭಯೋತ್ಪಾದನೆ" ನಡೆಸಿದ್ದಾರೆ ಎಂದೂ ಅವರು ಆಪಾದಿಸಿದ್ದಾರೆ. ಉಬೇರ್ ಒಪ್ಪಿಕೊಂಡ ಹಲವು ನಿಯಮಗಳನ್ನು ಅವರು ಮುರಿಯುತ್ತಿದ್ದಾರೆ ಎಂದು ಕಳೆದ ವರ್ಷವೇ ಕೋರ್ಟಿಗೆ ಹೋಗಿದ್ದರು. ಪ್ಯಾರೀಸ್ ಕೋರ್ಟು ಇದಕ್ಕಾಗಿ ಉಬೇರ್ ಟ್ಯಾಕ್ಸಿ ಯೂನಿಯನ್ ಗೆ 12 ಲಕ್ಷ ಯುರೋ ದಂಡ ತೆರುವಂತೆ ಆಜ್ಞೆ ಮಾಡಿದೆ. ಉಬೇರ್ ಇದರ ವಿರುದ್ಧ ಮೇಲಿನ ಕೋರ್ಟಿಗೆ ಅಪೀಲು ಹೋಗಿದೆ. ಕಳೆದ ವರ್ಷ ಉಬೇರ್‌ನ ಫ್ರೆಂಚ್ ಮತ್ತು ಪಶ್ಚಿಮ

ಜಗದ ಸುತ್ತ

ಶರತ್‌ಚಂದ್ರ

ಯುರೋಪ್ ಮುಖ್ಯಸ್ಥರನ್ನು ಬಂಧಿಸಿ ಆ ಮೇಲೆ ಅವರ ಮೇಲೆ 'ದಾರಿತಪ್ಪಿಸುವ ಕಮರ್ಷಿಯಲ್ ಕಾರ್ಯಾಚರಣೆಗಳು' ಮತ್ತು 'ಕಾನೂನುಬಾಹಿರ ಟ್ಯಾಕ್ಸಿ ಸೇವೆಗಳನ್ನು ಒದಗಿಸುವಲ್ಲಿ ಶಾಮೀಲಾಗಿರುವ' ಕೇಸುಗಳನ್ನು ಹಾಕಿತ್ತು.

ಉಬೇರ್ ವಿರುದ್ಧ ಕಳೆದ ವರ್ಷ ಫ್ರಾನ್ಸಿನಲ್ಲಿ ಇದೇ ರೀತಿಯ ದೇಶವ್ಯಾಪಿ ಪ್ರತಿಭಟನೆ ನಡೆದಿತ್ತು. ಮಾತ್ರವಲ್ಲ ಎಲ್ಲಾ ಖಂಡಗಳಲ್ಲಿ ಉಬೇರ್ ವಿರುದ್ಧ ಪ್ರತಿಭಟನೆಗಳು ನಡೆದಿವೆ ಎನ್ನಲಾಗಿದೆ. ■

ಗದರ್ ಕ್ಯಾಲೆಂಡರ್ ಬಿಡುಗಡೆ

ಕೆನಡದ ಇಂಡೋ-ಕೆನಡಿಯನ್ ವರ್ಕರ್ಸ್ ಅಸೋಸಿಯೇಶನ್ (ಐ.ಸಿ.ಡಬ್ಲ್ಯು.ಎ) ಈ ವರ್ಷವೂ ಗದರ್ ಕ್ಯಾಲೆಂಡರ್ ಬಿಡುಗಡೆ ಮಾಡಿತು. ಗದರ್ ಚಳುವಳಿಯ ಮತ್ತು ಅದರ ನಾಯಕರ ಪ್ರಮುಖ ದಿನಗಳ ವಿವರ ಹೊಂದಿದ ಈ ಕ್ಯಾಲೆಂಡರ್‌ನ್ನು ಕಳೆದ 9 ವರ್ಷಗಳಿಂದ ಐ.ಸಿ.ಡಬ್ಲ್ಯು.ಎ ಪ್ರಕಟಿಸುತ್ತ ಬಂದಿದೆ. ಈ ವರ್ಷದ ಕ್ಯಾಲೆಂಡರನ್ನು ಬಂದಾ ಸಿಂಗ್ ಬಹಾದುರ್ ಅವರು ಹುತಾತ್ಮರಾದ 300ನೇ ವಾರ್ಷಿಕಕ್ಕೆ ಮತ್ತು ಗದರ್ ವೀರರಾದ ಬಾಬು ಹರ್ನಾಮ್ ಸಿಂಗ್ ಸಹಾರಿ, ಸೋಹನ್ ಲಾಲ್ ಪಾಥಕ್, ಇಶರ್ ಸಿಮಗ್ ಧುಡಿಕೆ, ಉತ್ತಮ ಸಿಂಗ್ ಹನ್ಸ್, ಗಂಗಾ ಸಿಂಗ್ ಕುರ್ದ್ ಮುಂತಾದ ಗದರ್ ವೀರರು ಹುತಾತ್ಮರಾದದ್ದರ ಶತಕಕ್ಕೆ ಸಮರ್ಪಿಸಲಾಗಿದೆ.

ಬಂದಾ ಸಿಂಗ್ ಬಹಾದುರ್ ಮೊಗಲ್ ಸಾಮ್ರಾಜ್ಯದ ವಿರುದ್ಧ ಹೋರಾಟ ಮಾಡಿ ಪಂಜಾಬಿನ ಒಂದು ಭಾಗವನ್ನು ವಿಮೋಚನೆ ಮಾಡಿದ ವೀರ. ವಿಮೋಚಿತ ಪ್ರದೇಶದಲ್ಲಿ ಜಮೀಂದಾರಿ ಪದ್ಧತಿ ಕೊನೆಗೊಳಿಸಿ 'ಉಳುವವನೇ ಹೊಲದೊಡೆಯ' ನೀತಿಯನ್ನು ಜಾರಿಗೊಳಿಸಿದ ಕೀರ್ತಿ ವೀರ ಬಹಾದುರ್ ಗೆ ಸಲ್ಲುತ್ತದೆ. 1716ರಲ್ಲಿ ಬಹಾದುರ್ ಅವರನ್ನು ಮೊಗಲರು ಸೆರೆ ಹಿಡಿದು ಚಿತ್ರಹಿಂಸೆ ಮಾಡಿ ಕೊಲ್ಲುತ್ತಾರೆ. ■

ಯುರೋಪಿನಲ್ಲಿ ನಿರಾಶ್ರಿತರಿಗೆ 'ಬರೆ'

ಯುರೋಪಿನ ಹಲವು ದೇಶಗಳಲ್ಲಿ ಉತ್ತರ ಆಫ್ರಿಕಾ ಮತ್ತು ಏಶ್ಯಾದ ದೇಶಗಳಿಂದ ವಲಸೆ ಬರುತ್ತಿರುವ ಯುದ್ಧ-ದಮನ ಸಂತ್ರಸ್ತ ಜನರಿಗೆ ವಿವಿಧ ರೀತಿಯಲ್ಲಿ 'ಬರೆ' ('ಬ್ರಾಂಡಿಂಗ್' ಮಾಡುತ್ತಿದೆ) ಹಾಕುತ್ತಿದೆ. ಇದು ನಿರಾಶ್ರಿತರನ್ನು ಗುರುತಿಸಿ, ಅವರಿಗೆ ಸಹಾಯ ಮಾಡಲು ಎಂದು ಯುರೋಪಿಯನ್ ಸರಕಾರಗಳು ಹೇಳುತ್ತಿವೆ. ಆದ-ರೆ ಯುರೋಪಿನ ಚರಿತ್ರೆ ಗೊತ್ತಿದ್ದವರಿಗೆ ಇಂತಹ 'ಬರೆ'ಗಳ ಅಪಾಯದ ಬಗ್ಗೆ ಅರಿವಿರಬೇಕು.

ಬ್ರಿಟನಿನ ನಗರಗಳಲ್ಲಿ ನಿರಾಶ್ರಿತರಿಗೆ ಕೊಡಲಾದ ಮನೆಗಳ ಬಾಗಿಲುಗಳಿಗೆ ಕೆಂಪು ಬಣ್ಣ ಹಚ್ಚಲಾಗುತ್ತಿದೆ. ಇದು ನಾಜಿ ಜರ್ಮನಿಯಲ್ಲಿ ಜ್ಯೂಗಳ ಮನೆಗಳನ್ನು ಗುರುತಿಸಲು ಬಳಿಯುತ್ತಿದ್ದ ಹಳದಿ ನಕ್ಷತ್ರವನ್ನು ನೆನಪಿಸುವಂತಹುದು. ಬ್ರಿಟನಿನ ಸರಕಾರ ನೇಮಿಸಿದ ಖಾಸಗಿಯವರು ನಡೆಸುತ್ತಿರುವ ನಿರಾಶ್ರಿತರ ಕ್ಯಾಂಪುಗಳಲ್ಲಿ ನಿರಾಶ್ರಿತರು ತೋಳಿನ ಸುತ್ತ ಕೆಂಪು ಬ್ಯಾಂಡ್ ಧರಿಸುವುದು ಕಡ್ಡಾಯ. ಕೆಂಪು ತೋಳು ಬ್ಯಾಂಡ್ ಧರಿಸದವರಿಗೆ ಕ್ಯಾಂಪಿನಲ್ಲಿ ಊಟ ಸಿಗುವುದಿಲ್ಲ. ಡೆನ್ಮಾರ್ಕಿನ ಸರಕಾರ ನಿರಾಶ್ರಿತರ ಹತ್ತಿರ ಇರುವ ಎಲ್ಲಾ ಬೆಲೆ ಬಾಳುವ ವಸ್ತುಗಳನ್ನು ಕಿತ್ತುಕೊಳ್ಳಲು ಆದೇಶ ಹೊರಡಿಸಿದೆ. ಚೆಕ್ ಸರಕಾರ ನಿರಾಶ್ರಿತರ ಕೈ ಮೇಲೆ ಅವರಿಗೆ ಕೊಡಲಾಗುವ ಸಂಖ್ಯೆಯನ್ನು ಹಚ್ಚೆಯಲ್ಲಿ ಬರೆಯಬೇಕೆಂದು ವಿಧಿಸಿದೆ. ಇದೂ ಕುಖ್ಯಾತ ಆಶ್‌ವಿಟ್ಝ್ ಯಾತನಾ ಶಿಬಿರದಲ್ಲಿ ಇದ್ದ ವ್ಯವಸ್ಥೆಯನ್ನು ನೆನಪಿಸುವಂತಹುದು. ನಿರಾಶ್ರಿತರಿಗೆ ನೆರವಾಗುವ ಹೆಸರಲ್ಲಿ 'ಬೇರೆಯವರು' ಎಂದು ಗುರುತಿಸುವ, 'ಬರೆ' ಹಾಕುವ ವಿವಿಧ ವಿಧಾನಗಳು ಬಳಕೆಗೆ ಬರುತ್ತಿರುವುದು ಅವರ ವಿರುದ್ಧ ಮುಂದಿನ ದಿನಗಳಲ್ಲಿ ತೀವ್ರ ಶೋಷಣೆ-ದಮನಗಳತ್ತ ಸಾಗುತ್ತಿದೆ.

ಒಂದು ಬಾರಿ ಕೆಲವರನ್ನು 'ಬೇರೆಯವರು' ಎಂದು ಗುರುತಿಸಿದ ಮೇಲೆ ಅವರ ವಿರುದ್ಧ ತಾರತಮ್ಯ, ದಮನ ಮತ್ತು ಬಹುಶಃ ನರಮೇಧಗಳಿಗೂ ಹಾದಿ ಮಾಡಿಕೊಟ್ಟಂತೆ ಎಂಬುದು ಸ್ಪಷ್ಟ. ಯುರೋಪಿನ ಸರಕಾರಗಳಿಗೆ ಈ ಬಗೆಗೆ ಅರಿವಿನ ಕೊರತೆ ಇಲ್ಲ. ಬಹುಶಃ ಅವರು ಸಾಧ್ಯವಾದರೆ ಹಿಟ್ಲರ್-ಮುಸೊಲಿನಿಗಳು ತುಳಿದಂತಹ ಹಾದಿಯನ್ನೇ ತುಳಿಯಬಯಸುತ್ತಾರೆ. ■

ವಿಯೇಟ್ನಾಂ ಕಮ್ಯುನಿಸ್ಟ್ ಪಕ್ಷದ 12ನೇ ಮಹಾಧಿವೇಶನಕ್ಕೆ ಶುಭಸಂದೇಶ

ಜನವರಿ ಮೂರನೇ ವಾರದಲ್ಲಿ ವಿಯೇಟ್ನಾಂ ಕಮ್ಯುನಿಸ್ಟ್ ಪಕ್ಷದ 12ನೇ ಮಹಾಧಿವೇಶನಕ್ಕೆ ಸಿಪಿಐ(ಎಂ) ಕೇಂದ್ರ ಸಮಿತಿ ಶುಭಸಂದೇಶಗಳನ್ನು ಕಳಿಸಿದೆ. ಜಾಗತಿಕ ಪರಿಸ್ಥಿತಿಯನ್ನು ವಿಶ್ಲೇಷಿಸಿ ಬಂಡವಾಳಶಾಹಿಗೆ ಸಮಾಜವಾದಿ ಬದಲಿ ಕೊಡುವ ಅಗತ್ಯವನ್ನು ಒತ್ತಿ ಹೇಳಿದ ಸಂದೇಶ, ಸಮೃದ್ಧ ಸಮಾಜವಾದಿ ದೇಶ ಕಟ್ಟುವ ಪಕ್ಷದ ಯೋಜನೆಗೆ ಶುಭಹಾರೈಸಿದೆ. ಇದರ ಭಾಗವಾಗಿ ವಿಯೇಟ್ನಾಂ ಕಮ್ಯುನಿಸ್ಟ್ ಪಕ್ಷ ಕಳೆದ 5 ವರ್ಷಗಳ ಬೆಳವಣಿಗೆಗಳ ವಿಮರ್ಶೆಯನ್ನೂ ಮಾತ್ರ ಮಾಡುತ್ತಿಲ್ಲ. ಕಳೆದ 30 ವರ್ಷಗಳ 'ದೊಯಿ ಮೊಯಿ' (ಆರ್ಥಿಕ ಪುನರ್ನವೀಕರಣ) ನೀತಿಯ ಮತ್ತು ಅದರ ಯಶಸ್ಸಿಗೆ ಅಗತ್ಯ ಎಂದು ಭಾವಿಸಲಾದ 'ಎಂಟು ದೊಡ್ಡ ಸಂಬಂಧಗಳು' ನೀತಿ – ಇವುಗಳ ಸಫಲತೆ-ವಿಫಲತೆಯ ಸಮಗ್ರ ವಿಮರ್ಶೆಯನ್ನು 12ನೇ ಮಹಾಧಿವೇಶನ ಕೈಗೆತ್ತಿಕೊಂಡಿದ್ದು ಇದು ಮಹತ್ವದ ಮಹಾಧಿವೇಶನ ಎಂದು ಪರಿಗಣಿಸಲಾಗಿದೆ. ■

➡ ಅವರು ಹೇಳಿದರು.

ತಮ್ಮ ಮಾತನ್ನು ಉಳಿಸಿಕೊಳ್ಳಲಾರದ ಚಂದರಬಾಬು ನಾಯ್ಡು ಮರ್ಯಾದೆ ಕಳೆದುಕೊಂಡಿದ್ದಾರೆ ಎಂದು ಎನ್‌ಎಫ್‌ಐಡಬ್ಲ್ಯು (ಭಾರತೀಯ ಮಹಿಳೆಯರ ರಾಷ್ಟ್ರೀಯ ಒಕ್ಕೂಟ) ನಾಯಕಿ ಆನ್ನೀ ರಾಜಾ ಹೇಳಿದರು. ರಾಜ್ಯದ ಆಳುವ ಮತ್ತು ಪ್ರತಿಪಕ್ಷಗಳ ನಾಯಕರು ಸಾರಾಯಿ ಮಾರಾಟದ ಲೈಸೆನ್ಸ್ ಹೊಂದಿದ್ದು ಅವರ ಹಣದಾಹದಿಂದಾಗಿ ರಾಜ್ಯದ ಮಹಿಳೆಯರು ಅನಾಥರಾಗುತ್ತಿದ್ದಾರೆ ಎಂದರು. ಪಡಿತರ ಅಂಗಡಿಗಳಲ್ಲಿ ದಿನಸಿ ವಸ್ತುಗಳು ಸಿಗದಿದ್ದರೂ ಸಾರಾಯಿ ಅಂಗಡಿಗಳಲ್ಲಿ ತಪ್ಪದೇ ಸಾರಾಯಿ ಸಿಗುತ್ತದೆ ಎಂದು ಪ್ರಗತಿಶೀಲ ಮಹಿಳಾ ಸಂಘಟನ ರಾಷ್ಟ್ರೀಯ ಕಾರ್ಯದರ್ಶಿ ಝಾನ್ಸಿ ಹೇಳಿದರು.

ರಾಜ್ಯ ಸರಕಾರದ ಸಾರಾಯಿ ನೀತಿಯ ವಿರುದ್ಧ ಹೋರಾಡಲು 2015ರ ಡಿಸೆಂಬರ್‌ನಲ್ಲಿ 27 ಸಂಘಟನೆಗಳು ಸೇರಿ ಸಂಯುಕ್ತ ವೇದಿಕೆಯನ್ನು ರಚಿಸಿಕೊಂಡಿದ್ದವು. ■

ಸಿಪಿಐ (ಎಂ) ಸಂಸದ ಸಲೀಮ್ ಜನರನ್ನು ಭೇಟಿ ಮಾಡಬಾರದಂತೆ!

ಪಶ್ಚಿಮ ಬಂಗಾಳದ ಮಾಲ್ಡಾ ಜಿಲ್ಲೆಯ ಕಲಿಯಾಚಕ್‌ನಲ್ಲಿ ಇತ್ತೀಚೆಗೆ ನಡೆದ ಗಲಭೆಗಳಿಗೆ ಕೋಮು ಬಣ್ಣ ನೀಡಲು ಯತ್ನಿಸುತ್ತಿರುವುದನ್ನು ಸಿಪಿಐ (ಎಂ) ಬಲವಾಗಿ ಖಂಡಿಸಿದೆ. ಗುಂಪೊಂದು ಬಸ್‌ಗಳು ಮತ್ತು ಪೊಲೀಸ್ ವ್ಯಾನ್‌ಗಳಿಗೆ ಬೆಂಕಿಯಿಟ್ಟು ಕಲಿಯಾಚಕ್ ಪೊಲೀಸ್ ಠಾಣೆ ಮೇಲೆ ದಾಳಿ ಮಾಡಿದ್ದರಿಂದ ಬಿಗುವಿನ ವಾತಾವರಣ ಉಂಟಾಗಿ-ತ್ತು. ಪರಿಸ್ಥಿತಿಯನ್ನು ಅವಲೋಕಿಸಿ ಜನರೊಂದಿಗೆ ಮಾತನಾಡಲು ಬಂದ ಸಂಸತ್ ಸದಸ್ಯ ಮಹಮದ್ ಸಲೀಂ ಅವರು ಜನರೊಂದಿಗೆ ಬೆರೆಯುವುದನ್ನು ಪೊಲೀಸರು ನಿರ್ಬಂಧಿಸಿದರು. ಜನವರಿ 11ರಂದು ಮಾಲ್ಡಾದಿಂದ ಕಲಿಯಾಚಕ್‌ಗೆ ತೆರಳುತ್ತಿದ್ದ ಸಲೀಂ ಅವರನ್ನು ಪೊಲೀಸರು ತಡೆದರು. ಇದಕ್ಕೆ ಯಾವುದೇ ಕಾರಣಗಳನ್ನಾಗಲೀ ದಾಖಲೆಗಳನ್ನಾಗಲೀ ನೀಡಲು ಪೊಲೀಸರು ವಿಫಲರಾದರು. ಪೊಲೀಸರ ಕ್ರಮವನ್ನು ತಿಳಿದ ಜನರು ಅಲ್ಲಿಗೆ ಧಾವಿಸಿ ಒಂದು ಸಭೆಯನ್ನೇ ನಡೆಸಿಬಿಟ್ಟರು.

ಕಲಿಯಾಚಕ್‌ನಲ್ಲಿ ಕಳೆದ ಕೆಲವು ವರ್ಷಗಳಿಂದ ಎಗ್ಗಿಲ್ಲದಂತೆ ನಡೆಯುತ್ತಿರುವ ಕ್ರಿಮಿನಲ್ ಚಟುವಟಿಕೆಗಳೇ ಘಟನೆಗೆ ಕಾರಣ ಎಂದು ಸಲೀಂ ಹೇಳಿದರು. ಈ ಎಲ್ಲಾ ಅಕ್ರಮ ಚಟುವಟಿಕೆಗಳನ್ನು ಆಳುವ ಟಿಎಂಸಿ ಪೋಷಿಸುತ್ತಿದೆ ಎಂದು ಸಿಪಿಐ (ಎಂ) ಪಾಲಿಟ್‌ಬ್ಯೂರೊ ಸದಸ್ಯರೂ ಆದ ಸಲೀಂ ಹೇಳಿದರು. ಕಾನೂನುಬಾಹಿರವಾಗಿ ಪೊಪ್ಪಿ ಬೆಳೆಯುವವರು ಖೋಟಾ ನೋಟು ಚಲಾವಣೆ ಮಾಡುವ ದಂಧೆಯಲ್ಲಿ ಇರುವವರು ಗಲಭೆಯ ಹಿಂದೆ ಇದ್ದಾರೆ ಎಂದರು. ಈಗ ಅದನ್ನು ಒಂದು ಕೋಮು ಗಲಭೆ ಎಂದು ಬಿಂಬಿಸಲು ಆರ್‌ಎಸ್‌ಎಸ್ ಮತ್ತು ಮಾಧ್ಯಮದ ಒಂದು ವಿಭಾಗ ಪ್ರಯತ್ನಿಸುತ್ತಿದೆ. ಜನರನ್ನು ಕೋಮು ಆಧಾರದಲ್ಲಿ ವಿಭಜಿಸಲು ಟಿಎಂಸಿ ಮತ್ತು ಬಿಜೆಪಿ ಪ್ರಯತ್ನಿಸುತ್ತಿದ್ದು ಇಡೀ ರಾಜ್ಯದಲ್ಲಿ ಆ ಕೆಲಸದಲ್ಲಿ ನಿರತವಾಗಿವೆ. ಟಿಎಂಸಿ ಮತ್ತು ಬಿಜೆಪಿ ನಡುವೆ ಮ್ಯಾಚ್ ಫಿಕ್ಸಿಂಗ್ ಆಗಿದೆ ಎಂದ ಮಹಮದ್ ಸಲೀಂ, ಅವುಗಳು ಓಟನ್ನು ಗಳಿಸುವ ಸಲುವಾಗಿ ಹಿಂದೂ ಮತ್ತು ಮುಸ್ಲಿಂ ಮೂಲಭೂತವಾದಿಗಳ ಜತೆ ಕೈಜೋಡಿಸುತ್ತಿವೆ ಎಂದರು. ಪ್ರಜಾಪ್ರಭುತ್ವವನ್ನು ಕಗ್ಗೊಲೆ ಮಾಡುವಲ್ಲಿ ಟಿಎಂಸಿ ಸರಕಾರ ನಿರತವಾಗಿದೆ ಎಂದರು. ಟಿಎಂಸಿ ಸರಕಾರದ ವಿರುದ್ಧ ಅತೃಪ್ತಿ ಹೆಚ್ಚಾಗುತ್ತಿದ್ದು ಅದನ್ನು ತಡೆಯುವ ಸಲುವಾಗಿ ಜನರನ್ನು ಧರ್ಮದ ಆಧಾರದಲ್ಲಿ ಒಡೆಯಲು ಮುಂದಾಗಿದೆ ಎಂದರು. ■

PEA½ZAAY

ಪ್ರಜಾಪ್ರಭುತ್ವದ ಕಗ್ಗೊಲೆಯಾದರೆ ನ್ಯಾಯಾಂಗವು ಮೂಕಪ್ರೇಕ್ಷಕನಂತೆ ಕುಳಿತುಕೊಳ್ಳಲು ಸಾಧ್ಯವಿಲ್ಲ

– ಸುಪ್ರೀಂ ಕೋರ್ಟು ನ್ಯಾ. ಜೆ.ಎಸ್. ಖೇಹರ್

ಅರುಣಾಚಲ ರಾಜಕೀಯ ಬಿಕ್ಕಟ್ಟು ಬಗ್ಗೆ 'ರಾಜ್ಯಪಾಲರ ಎಲ್ಲಾ ನಿರ್ಧಾರಗಳೂ ನ್ಯಾಯಾಂಗ ಪರಾಮರ್ಶೆಗೆ ಒಳಪಡಬೇಕಾಗಿಲ್ಲ' ಎಂಬ ಬಿಜೆಪಿ ಶಾಸಕರ ಪರ ವಕೀಲರ ಹೇಳಿಕೆಗೆ ಪ್ರತಿಕ್ರಿಯಿಸುತ್ತಾ

JANASHAKTHI KANNADA VARA PATRIKE FEB 14, 2016 Price : Rs. 10/-
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026
RNI No. KARKAN /2006/17926 Posted on every Satuarday
Licensed to Post without prepayment License No. WPP-283





ಸಿಕಾರ್‌ನಲ್ಲಿ ಎಸ್.ಎಫ್.ಐ. ನ 15ನೇ ಅಖಿಲ ಭಾರತ ಸಮ್ಮೇಳನ

ಭಾರತ ವಿದ್ಯಾರ್ಥಿ ಫೆಡರೇಶನ್(ಎಸ್‌ಎಫ್‌ಐ)ನ 15ನೇ ಅಖಿಲ ಭಾರತ ಸಮ್ಮೇಳನ ರಾಜಸ್ಥಾನದ ಸಿಕಾರ್‌ನಲ್ಲಿ ಐತಿಹಾಸಿಕ ಬಹಿರಂಗ ಸಭೆಯೊಂದಿಗೆ ಪ್ರಾರಂಭವಾಯಿತು. ದೇಶದ ವಿವಿಧ ಕಡೆಗಳಿಂದ ಬಂದು ರ್‍ಯಾಲಿಯಲ್ಲಿ ಭಾಗವಹಿಸಿದ ಸಾವಿರಾರು ವಿದ್ಯಾರ್ಥಿಗಳು ಸಿಕಾರಿನ ಬೀದಿ ಬೀದಿಗಳಲ್ಲಿ ಶ್ವೇತ ಪತಾಕೆ ಹಿಡಿದು ಮೆರವಣಿಗೆ ಸಾಗಿದರು. ಸ್ವಾತಂತ್ರ್ಯ ಪ್ರಜಾಪ್ರಭುತ್ವ ಸಮಾಜವಾದದ ಘೋಷಣೆಗಳು ಪ್ರತಿಧ್ವನಿಸಿದವು. ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಮತ್ತು ವಸುಂಧರ ರಾಜೆ ಸರ್ಕಾರದ ವಿದ್ಯಾರ್ಥಿ ವಿರೋದಿ ನೀತಿಗಳ ವಿರುದ್ದ ಘೋಷಣೆ ಕೂಗಿದರು.

ರಾಜಸ್ಥಾನದ ಕಾರ್ಮಿಕ ಸಂಘಟನೆಯ ಕಾರ್ಯಕರ್ತರು ಹಾಗೂ ಕಿಸಾನ್ ಸಭಾದ ರೈತರು ಶುಭಕೋರಿ ರ್‍ಯಾಲಿಯಲ್ಲಿ ಭಾಗವಹಿಸಿದ್ದರು. ಸಿಕಾರ್‌ನ ಪ್ರಮುಖ ರಸ್ತೆಗಳ ಮೂಲಕ ಸಂಚರಿಸಿದ ರ್‍ಯಾಲಿಯು ರಾಮಲೀಲಾ ಮೈದಾನದಲ್ಲಿ ಸಮಾವೇಶಗೊಂಡಿತು. ಸಾವಿರಾರು ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿದ್ದರು. ಸಾಂಸ್ಕೃತಿಕ ಕಾರ್ಯಕ್ರಮದೊಂದಿಗೆ ಪ್ರಾರಂಭವಾದ ಬಹಿರಂಗ ಸಭೆಯಲ್ಲಿ ಎಸ್.ಎಫ್.ಐನ ಅಖಿಲ ಭಾರತ ಅಧ್ಯಕ್ಷರಾದ ಡಾ.ವಿ ಸಿವದಾಸನ್ ಮಾತನಾಡಿ ವಸುಂಧರ ರಾಜೆ ಸರ್ಕಾರದ ವಿರುದ್ದ ಹರಿಹಾಯ್ದರು. ಎಸ್.ಎಫ್.ಐನ ಕಾರ್ಯಕರ್ತರು ಇಂದು ದೇಶದಲ್ಲಿ ಲಾಠಿಗಳನ್ನು ಎದುರಿಸಿ ಚಳುವಳಿ ಕಟ್ಟುತ್ತಿದ್ದಾರೆ, ನಮ್ಮ ರ್‍ಯಾಲಿಯಲ್ಲಿ ಭಗತಸಿಂಗ್, ಸುಖದೇವ, ರಾಜಗುರು, ಚಂದ್ರಶೇಖರ ಆಜಾದ ಈ ರೀತಿ ಸ್ವಾತಂತ್ರ್ಯ ಹೋರಾಟಗಾರರ ಪೋಟೋಗಳು ಬ್ಯಾನರುಳಲ್ಲಿ ಇರುತ್ತವೆ. ಆದರೆ ಎಬಿವಿಪಿ ಬ್ಯಾನರ್‌ಗಳಲ್ಲಿ ಆಸರಾಮ ಬಾಪು ಪೋಟೋ ಇರುತ್ತೆದೆ ಎಂದು ವ್ಯಂಗವಾಡಿದರು. ಸಮ್ಮೇಳನದ ಯಶಸ್ವಿಗಾಗಿ ದುಡಿಯುತ್ತಿರುವ ಸಂಗಾತಿಗಳ ಮೇಲೆ ಹಲ್ಲೆ ಮಾಡಿರುವ ವಸುಂಧರ ಸರ್ಕಾರ 46 ವಿದ್ಯಾರ್ಥಿ ನಾಯಕರನ್ನು ಬಂದಿಸಿ ಜೈಲಿನಲ್ಲಿ ಇಟ್ಟಿದೆ.

ಬಹಿರಂಗ ಸಭೆಯನ್ನು ಉದ್ಘಾಟನೆ ಮಾಡಿ ಮಾತನಾಡಿದ ಸಿಪಿಐ(ಎಂ) ಪ್ರದಾನ ಕಾರ್ಯದರ್ಶಿ ಸೀತಾರಾಮ ಯೆಚೂರಿಯವರು ದೇಶದಲ್ಲಿ ಸಂಪನಮೂಲಗಳಿಗೆ ಕೊರತೆಯಿಲ್ಲ, ಆದರೂ ಯುವಜನರಿಗೆ ವೈಜ್ಞಾನಿಕ ಶಿಕ್ಷಣ, ಆರೋಗ್ಯ ಹಾಗೂ ಉದ್ಯೋಗವನ್ನು ನೀಡುವ ಧೋರಣೆಗಳಿಲ್ಲ. ಇದಿಲ್ಲದೆ ದೇಶದ ಅಭಿವೃದ್ದಿ ಅಪೂರ್ಣ ಎಂದು ಅಭಿಪ್ರಾಯ ಪಟ್ಟರು. ವೇದಿಕೆಯಲ್ಲಿ ಎಸ್.ಎಫ್.ಐನ ಅಖಿಲ ಭಾರತ ಕಾರ್ಯದರ್ಶಿಗಳಾದ ರಿತಬ್ರತ ಬ್ಯಾನರ್ಜಿ ಕೇರಳದ ಮಾಜಿ ಶಿಕ್ಷಣ ಸಚಿವರಾದ ಎಮ್.ಎ ಬೇಬಿ ಮತ್ತು ಸ್ವಾಗತ ಸಮಿತಿಯ ಅಧ್ಯಕ್ಷರಾದ ಅಮ್ರರಾಮ್ ರವರು ಇದ್ದರು.

> 93 ಜನರ ಕೇಂದ್ರ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಅಖಿಲ ಭಾರತ ಅಧ್ಯಕ್ಷರಾಗಿ ವಿ.ಪಿ ಸಾನು, ಪ್ರಧಾನ ಕಾರ್ಯದರ್ಶಿಯಾಗಿ ಡಾ. ವಿಕ್ರಂ ಸಿಂಗ್ ಆಯ್ಕೆಯಾದರು. ಕರ್ನಾಟಕ ರಾಜ್ಯ ಕಾರ್ಯದರ್ಶಿ ಗುರುರಾಜ್ ದೇಸಾಯಿ ಅಖಿಲ ಭಾರತ ಜಂಟಿ ಕಾರ್ಯದರ್ಶಿಯಾಗಿ ಆಯ್ಕೆಯಾದರು. ರೇಣುಕಾ ಕಹಾರ್, ವಿ,ಅಂಬರೀಷ್, ಬಸವರಾಜ್ ಪೂಜಾರ್ ಕರ್ನಾಟಕವನ್ನು ಪ್ರತಿನಿಧಿಸಿ ಕೇಂದ್ರ ಸಮಿತಿಗೆ ಆಯ್ಕೆಯಾಗಿದ್ದಾರೆ.

ಪ್ರತಿನಿಧಿ ಅಧಿವೇಶನ

ಬಹಿರಂಗ ಸಭೆಯ ನಂತರ ಕಾಂ.ಅಜೀತ ಸಿಂಗ್ ಬೇನವಲ ಮತ್ತು ಕಾಂ. ಸುದಿಪ್ತೋ ಗುಪ್ತಾ ನೆನಪಿನ ವೇದಿಕೆಯ ಮುಂಭಾಗದಲ್ಲಿ ದೇಶದ ಮೂಲೆ ಮೂಲೆಗಳಿಂದ ಬಂದಿದ್ದ 630 ಪ್ರತಿನಿಧಿಗಳು ಸಮಾವೇಶಗೊಂಡಿದ್ದರು. ಅಧಿವೇಶನಕ್ಕೂ ಮುನ್ನಾ ನಡೆದ ಶ್ವೇತ ಪತಾಕೆಯ ಧ್ವಜಾರೋಹಣ ಕಾರ್ಯಕ್ರಮವನ್ನು ಅಖಿಲ ಭಾರತ ಅಧ್ಯಕ್ಷರಾದ ಕಾಂ.ಸಿವದಾಸನ್ ನೆರವೇರಿಸಿದರು

ಅಧಿವೇಶನವನ್ನು ದೇಶದ ಖ್ಯಾತ ಪತ್ರಕರ್ತರು ಹಾಗೂ ಬರಹಗಾರರಾದ ಪಿ.ಸಾಯಿನಾಥರವರು ಉದ್ಗಾಟಿಸಿದರು. ದೇಶದಲ್ಲಿ ಮಾತನಾಡಲು ಆಗದ ಸ್ಥಿತಿ ನಿರ್ಮಾಣವಾಗುತ್ತಿದೆ. ಹೈದಾರಬಾದ್ ಕೇಂದ್ರೀಯ ವಿವಿಯಲ್ಲಿ ದಲಿತ ವಿದ್ಯಾರ್ಥಿ ರೋಹಿತ್ ವೆಮುಲಾ ಆತ್ಮಹತ್ಯೆ ದೇಶದ ಎಲ್ಲಾ ಜನರ ಮನ ಕಲಕಿದೆ. ಅದೇ ರೀತಿ ಇದರ ವಿರುದ್ದ ದೇಶದ ಮೂಲೆ ಮೂಲೆಗಳಲ್ಲಿ ಪ್ರತಿಭಟನೆಗಳು ನಡೆಯುತ್ತಿವೆ. ಹಾಗೂ ಹೆಮ್ಮೆಯ ಸಂಗತಿಯೆಂದರೆ ಎಸ್.ಎಫ್.ಐ ಈ ಹೋರಾಟಗಳಲ್ಲಿ ಮೂಂಚೂಣಿಯಲ್ಲಿದೆ ಎಂದು ಅವರು ಹೇಳಿದರು. ಹಳ್ಳಿಯಿಂದ ಬಂದು ಪಿ.ಎಚ್.ಡಿ. ಅಧ್ಯಯನ ಮಾಡುತ್ತಿದ್ದ ಒಬ್ಬ ದಲಿತ ವಿದ್ಯಾರ್ಥಿಯ ಬದಕನ್ನು ಮೂರು ಚುನಾವಣೆಗಳಲ್ಲಿ ಮೂರು ರೀತಿ ವಿದ್ಯಾರ್ಹತೆ ನಮೂದಿಸಿದ ಸ್ಮೃತಿ ಇರಾನಿಯಂತವರು ನಿರ್ದರಿಸುವುದು ಈ ದೇಶದ ದುರಂತ ಎಂದರು.

ಈಗಿನ ಸಂದರ್ಭದಲ್ಲಿ ದೇಶದಲ್ಲಿ ವೈಚಾರಿಕತೆ ಹಾಗೂ ಪ್ರಜಾಸತ್ತೆಯ ಮೇಲೆ ನಿರಂತರವಾಗಿ ದಾಳಿ ನಡೆಯುತ್ತಿದೆ.. ಕಳೆದ 10 ವರ್ಷಗಳಲ್ಲಿ ದೇಶದ್ಯಾಂತ 3 ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಎನ್.ಡಿ.ಎ. ಸರ್ಕಾರ ಸಾಮಾಜಿಕ ಅಂಶಗಳ ಮೇಲಿನ ಬಜೆಟನ್ನು ಕಡಿತಗೊಳಿಸುತ್ತಿದೆ, ಆದರೆ ಈ ದೇಶದ ಶ್ರೀಮಂತ ಹಾಗೂ ಕಾರ್ಪೂರೇಟ್ ವಲಿನಕ್ಕೆ 5,15000 ಕೋಟಿ ಹಣವನ್ನು ತೆರಿಗೆ ವಿನಾಯಿತಿ ನೀಡಿದ್ದಾರೆ. ಹೀಗೆ ವಿದ್ಯಾರ್ಥಿ ಚಳುವಳಿಯ ಮುಂದೆ ಅನೇಕ ಸವಾಲುಗಳಿದ್ದು ಇವುಗಳನ್ನು ಎದುರಿಸಲು ಸಿದ್ದವಾಗಬೇಕಿದ್ದು ದೇಶದ ಶೋಷಿತ, ದೌರ್ಜನ್ಯಕ್ಕೊಳಗಾದ ಜನ ಸಮುದಾಯದ ಪರವಾಗಿ ಹೋರಾಟಬೇಕೆಂದು ಕರೆ ನೀಡಿದರು. ■

ಶಿಕ್ಷಣದ ಖಾಸಗೀಕರಣ, ವ್ಯಾಪಾರೀಕರಣ ವಿರೋಧಿಸಲು ಸಂಘಟನೆಯ ವಿಸ್ತರಣೆ ಮತ್ತು ಬಲವರ್ಧನೆಗಾಗಿ ಶ್ರಮಿಸಲು ಕರೆ

ಎಸ್.ಎಫ್.ಐ ನ 15 ನೇ ಸಮ್ಮೇಳನ ಹಲವಾರು ಮಹತ್ವದ ತೀರ್ಮಾನಗಳಿಗೆ ಸಾಕ್ಷಿಯಾಯಿತು.

ಶಿಕ್ಷಣ ಸಂಸ್ಥೆಯಾಧಾರಿತ ಸಂಘಟನೆಗೆ ಹೆಚ್ಚು ಒತ್ತು ನೀಡುವುದು. ಅಲ್ಲಿರುವ ಘಟಕಗಳನ್ನು ಕ್ರೀಯಾಶೀಲಗೊಳಿಸಿ, ನಿರಂತರವಾಗಿ ನಿರ್ವಹಣೆ ಮಾಡಬೇಕು. ಶೈಕ್ಷಣಿಕವಾಗಿ, ಸೈದ್ಧಾಂತಿಕವಾಗಿ ಚರ್ಚೆ ನಡೆಸುವ ಮೂಲಕ ಪ್ರತಿ ಘಟಕದಿಂದ ಇಬ್ಬರು ಕಾರ್ಯಕರ್ತರನ್ನು ನಾಯಕರನ್ನಾಗಿಸುವ ಪಣ ತೊಡಲಾಯಿತು. ಖಾಸಗಿ ಶಿಕ್ಷಣ ಸಂಸ್ಥೆಗಳು ಹೆಚ್ಚಾಗುತ್ತಿದ್ದು ದಿನೆ ದಿನೆ ಶಿಕ್ಷಣ ಅಲ್ಲಿ ಮಾರಾಟವಾಗುತ್ತಿದೆ. ಅದನ್ನು ನಿಯಂತ್ರಿಸುವುದಕ್ಕಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿಯೂ ಸಂಘಟನೆ ಕಟ್ಟಲು ಮುಂದಾಗಬೇಕು. ಆ ಮೂಲಕ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಣದಲ್ಲಿಟ್ಟು ಬಡ, ದಲಿತ, ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ನ್ಯಾಯ ಕೊಡಿಸಲು ಸಾಧ್ಯವಾಗುತ್ತದೆ ಎಂಬುದನ್ನು ಚರ್ಚಿಸಲಾಗಿದೆ. ವಿಶ್ವ ವಿದ್ಯಾಲಯಗಳಲ್ಲಿಯೂ ಸಂಘಟನೆ ಬಲಗೊಳ್ಳಬೇಕು, ತಾಂತ್ರಿಕ ವಿಭಾಗದ ವಿದ್ಯಾರ್ಥಿಗಳ ಮಧ್ಯೆ ಸಂಘಟನೆಯನ್ನು ಚುರುಕುಗೊಳಿಸಬೇಕು. ಸರಕಾರಿ ಶಿಕ್ಷಣ ಸಂಸ್ಥೆ, ಹಾಸ್ಟೆಲ್‌ಗಳ ಉಳಿವಿಗಾಗಿ ಸಂಘರ್ಷಾತ್ಮಕ ಹೋರಾಟ ರೂಪಿಸಬೇಕಿದೆ.


ಸದ್ಯ ಅಖಿಲ ಭಾರತದಲ್ಲಿ ಎಸ್.ಎಫ್.ಐ ನ ಸದಸ್ಯತ್ವ 43,00,609 ಇದ್ದು ಅದನ್ನು ಈ ಶೈಕ್ಷಣಿಕ ಅವಧಿಯಲ್ಲಿ 50,00,000 ಕ್ಕೆ ಏರಿಸುವ ಗುರಿ ಇಡಲಾಗಿದೆ. ಘಟಕಗಳನ್ನು ಕ್ರೀಯಾಶಿಲಗೊಳಿಸಿ ಘಟಕಗಳ ಮೂಲಕ ನಿರಂತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ನಮ್ಮನ್ನಾಳುವ ಸರಕಾರಗಳು ಶಿಕ್ಷಣ ವಿರೋಧಿ ಕೆಲಸದಲ್ಲಿ ತೊಡಗಿದ್ದು, ವಿದ್ಯಾರ್ಥಿಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ನೀತಿಗಳನ್ನು ತರುತ್ತಿದ್ದಾರೆ, ಜೊತೆಯಲ್ಲಿ ಪಠ್ಯಗಳಲ್ಲಿ ಕೇಸರೀಕರಣ ತರುವುದೂ ನಡೆ–ಯುತ್ತಿದೆ. ಉನ್ನತ ಶಿಕ್ಷಣ ಕಲಿಯುವ ದಲಿತ ಮತ್ತು ಹಿಂದುಳಿದ ವಿದ್ಯಾರ್ಥಿಗಳನ್ನು ಹಿಂಸಿಸುವ ಮೂಲಕ ಅವರ ಶೈಕ್ಷಣಿಕ ಬದುಕಿಗೆ ಕೊಡಲಿ ಪೆಟ್ಟು ಹಾಕಲಾಗುತ್ತಿದೆ. ಇದೆಲ್ಲವನ್ನು ವಿರೋಧಿಸುವ ಬಲಿಷ್ಟ ಚಳುವಳಿ ಕಟ್ಟಬೇಕಿದೆ. ಈ ವಿಚಾರಗಳ ಕುರಿತು ವಿದ್ಯಾರ್ಥಿ–ಉಪನ್ಯಾಸಕ–ಪೋಷಕರನ್ನು ಜಾಗೃತಗೊಳಿಸುವುದಕ್ಕಾಗಿ ನಿರಂತರವಾಗಿ ಮಾಸ ಪತ್ರಿಕೆ ಮತ್ತು ಪುಸ್ತಕಗಳನ್ನು ಪ್ರಕಟಿಸಲು ತೀರ್ಮಾನಿಸಲಾಗಿದೆ.

- ಶಿಕ್ಷಣದ ವ್ಯಾಪಾರೀಕರಣ–ಕೋಮುವಾದೀಕರಣ ವನ್ನು ತಡೆಗಟ್ಟುವುದು
- ಸರಕಾರಿ ವಿಶ್ವವಿದ್ಯಾಲಗಳ ಬಲವರ್ಧನೆ ಹಾಗೂ
  ಉನ್ನತ ಶಿಕ್ಷಣ ಕಲಿಯುವವರಿಗೆ ಶಿಷ್ಯವೇತನದಲ್ಲಿ ಏರಿಕೆ,
- ವೈಜ್ಞಾನಿಕ ಪಠ್ಯಗಳ ಉಳಿವು,
- ಸಾಮಾಜಿಕ ನ್ಯಾಯ,
- ಖಾಸಗಿ ಶಿಕ್ಷಣ ಸಂಸ್ಥೆಗಳಲಿ ಸಂಘಟನೆಯನ್ನು ಬಲಪಡಿಸುವುದು
- ಘಟಕಾಧಾರಿತ ಸಂಘಟನೆ

ಇವಕ್ಕೆ ಒತ್ತು ನೀಡುವ ಕುರಿತು ಸಮ್ಮೇಳನದಲ್ಲಿ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಶಾಲಾ ಸದಸ್ಯತ್ವದ ಲೆವಿ ಹೆಚ್ಚಳ : ಶಾಲಾ ಸದಸ್ಯತ್ವಕ್ಕಾಗಿ ಇದ್ದ 1 ರೂ ಲೆವಿಯನ್ನು ಎರಡು ರೂ ಗಳಿಗೆ ಹೆಚ್ಚಿಸಲಾಗಿದೆ. ಕಾಲೇಜು ಸದಸ್ಯತ್ವ ಮೊದಲಿನಂತೆ ಎರಡು ರೂ ಇರಲಿದೆ.

ಹೆಚ್.ಆರ್. ನವೀನ್‌ಕುಮಾರ್



JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**